ಬಹುದು. ಇದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಂತಹ ಒಂದು ಸನ್ನಿವೇಶದಲ್ಲಿ ನಮ್ಮ ಸದನವೂ ನಡೆಯುವುದು ಕಷ್ಟವಾಗಬಹುದು. ಏಕೆಂದರೆ ಇಲ್ಲಿಗೆ ಸರ್ಕಾರದ ನೌಕರರುಗಳು ಬಾರದೆ ಇದಬಹುದು. ಇದಕ್ಕಾಗಿ ನಾಳೆ ಒಂದು ದಿವಸಕ್ಕೆ ಮಾತ್ರ ತಾವು ಈ ಸದನವನ್ನು ಮುಂದೂಡಬಹುದಲ್ಲ ನನ್ನ ಪ್ರಾರ್ಥನೆ. ಎಂದು

BUDGET ESTIMAES FOR 1974-75- DEMANDS FOR GRANTS-DEMAND NOs. 18, 25 AND 24.

SRI M. MALLIKARJUNASWAMY (Minister for Education) —Madam, on the recommendations of the Governor, I beg to move:—

"That a sum not exceeding Rs. 2,03,00,000 inclusive of the sum granted 'on account' be granted to the Government to defray the charges which will come in course of payment during the finacial year ending 31st day of March 1975 in respect of Demand No. 18 "Stationery and Printing".

Madam, on the recommendation of the Governor, I beg to move:—

"That a sum not exceeding Rs. 17,27,42,000 inclusive of the sum granted on account be granted to the Government to defray the charges which will come in course of payment during the fieancial year ending 31st day of March 1975 in respect of Demand No. 25 "Education, Scientific Research and Art and Culture."

Madam Speaker.—Motion moved.

"That a sum not exceeding Rs. 2,03,00,000 inclusive of the sum granted 'on account' be granted to the Government to defray the charges which will come in coure of payment during the financiai year ending 31st day of March 1975 in respect of Demand No. 18 "Stationery and Printing."

"That a sum not exceeding Rs. 17,27,42,000 inclusive of the sum granted' on account' be granted to the Government to defray the charges which will come in course of payment during the financial year ending 31st day of March 1975 in respect of Demand No. 25 "Education, Scientific Research and Art and Culture."

SMT. E. E. VAZ (Minister of State for Primary and Secondary Education).—

Madam, on the recommendation of the Governor, I beg of move:

"That a sum not exceeding Rs. 61,23,90,000 inclusive of the sum granted 'on account' be granted to the Government to defray the charges which will come in coures of payment during the financial year ending 31st day of March 1975 in respect of Demand No. 24 Primary and Secondary Education."

Madam Speaker.—Motion moved.

"That a sum not exceeding Rs. 61,23,96,000 inclusive of the sum granted 'on account' be granted to the Government to defray the charges which will came in course of payment during the financial year ending 31st day of March 1975 in respect Demand No. 24 "Primary and Secondary Education."

All the Demands and the cut motions are before the House for discussion.

†ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳು ಸುಮಾರು ೮೦ ಕೋಟಿ ರೂಪಾಯಿಗಳಿಗಿಂತಲೂ ಮೀರಿದಷ್ಟು ಹಣದ ಬೇಡಿಕೆಯನ್ನು ಈ ಸಭೆಯ ಮಂಜೂರಾತಿ ಪಡೆಯಲು ಈ ಸಭೆಯ ಮುಂದಿಟ್ಟಿದ್ದಾರೆ. ನಾನು ಪ್ರಪ್ರಥಮವಾಗಿ ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ಎರಡು ವರ್ಷಗಳಿಂದ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಇಬ್ಬರು ಆಗಿದ್ದರು. ಒಬ್ಬರು ಶ್ರೀಮಾನ್ ಬದರೀ ನಾರಾಯಣ ಅಯ್ಯಂಗಾರ್‌ರವರು ಮತ್ತು ಈಗ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ವಿದ್ಯಾ ಮಂತ್ರಿಗಳಾಗಿದ್ದಾರೆ ಇವೊತ್ತು ನಾನು ಇಲ್ಲಿ ಇವರಿಬ್ಬರ ಚಾರಿತ್ರ್ಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಬ್ಬರು ಒಳ್ಳೆಯ ಯೋಗ್ಯ ವ್ಯಕ್ತಿಗಳೂ ಇರಬಹುದು, ಹಾಗೆ ಹೇಳುತ್ತ ಇವರುಗಳು ಒಳ್ಳೆಯ ಚಾರಿತ್ರ್ಯವನ್ನು ಇಟ್ಟುಕೊಂಡಿರತಕ್ಕವರು ಎಂದು ಇಷ್ಟು ಮಾತ್ರ ಹೇಳುತ್ತೇನೆ. ಯಾವುದೇ ಟೀಕೆ ಮಾಡಿದರೂ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರನ್ನು ಕುರಿತು ಮಾಡುವ ಟೀಕೆಯಾಗುವುದಿಲ್ಲ. ಎಜುಕೇಷನ್ ಡಿಪಾರ್ಟುಮೆಂಟು ಹಾಗೂ ಇಲ್ಲಿರುವ ಅಧಿಕಾರಿಗಳು ಯಾವ ರೀತಿ ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ ಹಾಗೂ ಎಜ್ಯುಕೇಷನ್ ಮಂತ್ರಿಗಳು ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ ಎನ್ನುವುದರ ಬಗ್ಗೆ ನಾವು ಇಲ್ಲಿ ಟೀಕೆ ಮಾಡಬೇಕಾಗಿದೆ. ನಾನು ಪ್ರಪ್ರಥಮವಾಗಿ ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯದ ನಮ್ಮ ಒಟ್ಟು ವೆಚ್ಚ ಏನಿತ್ತೋ ಅದರಲ್ಲಿ ಸುಮಾರು ಮೂವತ್ತು ಪರ್ಸೆಂಟಿನಷ್ಟು ಇವೊತ್ತು ವಿದ್ಯಾ ಇಲಾಖೆಗಾಗಿ ಹಣ ಖರ್ಚು ಮಾಡಬೇಕೆಂದು ಹೇಳಿ ಇಂದು ಈ ಬೇಡಿಕೆಗಳ ಮೂಲಕ ನಿಮಗೆ ಹಣ ಕೊಡಬೇಕಾಗಿದೆ. ಎಷ್ಟರಮಟ್ಟಿನ ಸುಧಾರಣೆ ಮಾಡಿದ್ದಾರೆ ಎಂದು ನಾವು ಇಲ್ಲಿ ಕಾಣಬಹುದು, ಹೋದ ವರ್ಷ ಎಂದರೆ ೧೯೭೩-೧೯೭೪ನೇ ಸಾಲಿಗಾಗಿ ೭೨-೭೩ ಕೋಟಿ ರೂಪಾಯಿಗಳು ಬೇಕೆಂದು ಕೇಳಿದ್ದರು. ಈ ವರ್ಷ ೮೦ ಕೋಟಿಯಷ್ಟು ಕೇಳಿದ್ದಾರೆ. ಎಂದರೆ ಸುಮಾರು ೭-೮ ಕೋಟಿಯಷ್ಟು ಹೆಚ್ಚು ಹಣ ಈ ಇಲಾಖೆಗೆ ಬೇಕೆಂದು ಕೇಳಿ ಈ ಬೇಡಿಕೆಗಳು ನಮ್ಮ ಮುಂದೆ ಬಂದಿವೆ. ನಿಮ್ಮ ಸಾಧನೆ ಎಂಟು ಕೋಟಿ ರೂಪಾಯಿಗಳಿಗೆ ಏನು ಎನ್ನುವುದರ ಬಗ್ಗೆ ಇಲ್ಲಿ ವಿಚಾರಮಾಡಿಲ್ಲ ಕಳೆದ ಒಂದು ವರ್ಷದಲ್ಲಿ ನೀವು ಸಾಧಿಸಿರತಕ್ಕ ಸಾಧನೆಗಳಾದರೂ ಏನು ಎನ್ನುವ ಪ್ರಶ್ನೆಗೆ ಇನ್ನೂ ಉತ್ತರ ಸಿಗಬೇಕಾಗಿದೆ. ಇವೊತ್ತು ನಿರ್ಗತಿಕರಿಗೆ ಹಾಗೂ ಬಡ ವಿದ್ಯಾರ್ಥಿಗಳಿಗೆ ಎಂದರೆ ಡೆಸ್ಟಿಟ್ಯೂಟ್ಸ್‌ಗಳಿಗೆ ಹಣ ಕೊಡುವುದರ ಬಗ್ಗೆ ಆಗುತ್ತಿರುವ ಅವ್ಯವಹಾರಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ನಾನು ಮೊದಲಿಗೆ ಹೇಳಬೇಕಾದರೆ ಇಂದು ವಿದ್ಯಾಭ್ಯಾಸದ ಇಲಾಖೆ ಕೂಡ ಲಂಚ ಅಥವಾ ಭ್ರಷ್ಟಾಚಾರದಲ್ಲಿ ಇತರ ಇಲಾಖೆಗಳಿಗಿಂತ ಹೊರಗೇನೂ ಅಲ್ಲ, ಮೊನ್ನೆ ದಿನ ಈ ಸದನದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ವಿದ್ಯಾ ಮಂತ್ರಿಗಳೇ ಅವರ ಕಷ್ಟವನ್ನು ತೋಡಿಕೊಂಡರು ಮತ್ತು ಇಲ್ಲೂ ಕೂಡ ಅವ್ಯವಹಾರಗಳಾಗಿವೆ. ಎಂದು ಅವರೇ ಕೊಟ್ಟಿರುವ ಉತ್ತರದಲ್ಲಿ ಸ್ಪಷ್ಟಪಡಿಸಿದ್ದಾರೆ. ಇಲ್ಲೂ ಕೂಡ ಇಂತಹ ಅವ್ಯವಹಾರಗಳು ಇವೆ ಎಂದು ಅವರೇ ತಿಳಿಸುತ್ತಾರೆ. ಸುಮಾರು ಇಪ್ಪತ್ತೈದು ವರ್ಷಗಳ ಕಳೆದರೂ ಕೂಡ ನಮ್ಮ ರಾಷ್ಟ್ರದಲ್ಲಿ ಇನ್ನೂ ಸರಿಯಾದ ಒಂದು ವಿದ್ಯಾಭ್ಯಾಸದ ನೀತಿಯನ್ನು ನಿರೂಪಣೆ ಮಾಡಲು ನಮಗೆ ಸಾಧ್ಯವಾಗಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತು ರಾಷ್ಟ್ರದಲ್ಲಿರತಕ್ಕ ಯುವ ಜನಾಂಗದಲ್ಲಿರುವ ನ್ಯೂನತೆಗಳು ಎಂದರೆ ಅತೃಪ್ತಿ ಅಸಮಾಧಾನ ಮತ್ತು ಅಶಿಸ್ತು ಇದಕ್ಕೆ ಮೂಲ ಕಾರಣ. ರಾಷ್ಟ್ರದ ವಿದ್ಯಾಭ್ಯಾಸದಲ್ಲಿ ವಿದ್ಯಾಭ್ಯಾಸ ಕೊಡತಕ್ಕ ಕ್ರಮ ಹಾಗೂ ರಾಷ್ಟ್ರೀಯ ಯೋಜನೆಗಳಲ್ಲಿ ಅವಲಂಬಿಸಿರತಕ್ಕ ನೀತಿಯನ್ನು ನಿರೂಪಿಸತಕ್ಕ ತಾಂತ್ರಿಕ ತಜ್ಞರು ವಿದ್ಯಾಭ್ಯಾಸದ ನೀತಿಯನ್ನು ನಿರೂಪಣೆ ಮಾಡಿ ಅದನ್ನು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಅವರು ಇಂದು ಇನ್ನೂ ಒಂದು ಅಂತಿಮವಾದ ನಿರ್ಣಯ ಮಾಡದೇ ಇರತಕ್ಕದ್ದೇ ಇಂದು ರಾಷ್ಟ್ರದಲ್ಲಿರುವ ಅತೃಪ್ತಿಗೆ ಮೂಲ ಕಾರಣವೆಂದು ಹೇಳಬೇಕಾಗುತ್ತದೆ. ನಾನು ಇವೊತ್ತು ವಿದ್ಯಾಭ್ಯಾಸದ ಬಗ್ಗೆ ಸೂಚನೆ ಕೊಡಲಿಕ್ಕೆ ನಾನು ತಜ್ಞನಲ್ಲ, ನನ್ನ ದೃಷ್ಟಿಕೋಣದಲ್ಲಿ ಇದನ್ನು ತುಲನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಈ ಒಂದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ವರದಿಗಳು ಎಂದರೆ ಕೊಠಾರಿ ಕಮಿಷನ್ ರಿಪೋರ್ಟು ಹಾಗೂ ಹಲವಾರು ರಿಪೋರ್ಟುಗಳು ಬಂದಿವೆ. ಇವನ್ನು ಅಳವಡಿಸಿ ಒಂದು ರಾಷ್ಟ್ರೀಯವಾದ ಧೋರಣೆ ನಿರೂಪಿಸುವ ಬಗ್ಗೆ ರಾಷ್ಟ್ರದ ಮುಖ್ಯ ನಾಯ

ಕರು ಯಾವುದೇ ನೀತಿ ನಿರೂಪಣೆ ಮಾಡುವುದರಲ್ಲಿ ವಿಫಲರಾಗಿದ್ದಾರೆ. ನಮ್ಮ ದೇಶ ಮುಂದೆ ಯಾವ ರೀತಿ ಹೋಗುತ್ತೋ ಹೇಳಲಿಕ್ಕೆ ನಮ್ಮ ತಜ್ಞರಲ್ಲಿ ಒಂದು ಪ್ರಬಲವಾದ ಶಕ್ತಿ ಹಾಗೂ ಸಾಮರ್ಥ್ಯವಿಲ್ಲ. ಇದರಿಂದ ನಮ್ಮ ದೇಶದ ಪರಿಸ್ಥಿತಿ ಮುಂದೆ ಏನಾಗುತ್ತದೋ ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ ಎಂದು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿ ಬಂದಿದೆ.

ಇದರ ಬಗ್ಗೆ ಇಂದು ನಾವು ತುಟ್ಟ ತುದಿಯಲ್ಲಿದ್ದೇವೆ. It may be disasterous situ ation to the democratic set up itself.

3-30 P.M.

ಅಂತಹ ಒಂದು ಪರಿಸ್ಥಿತಿಗೆ ಬಂದಿದ್ದೇವೆ. ಯಾವ ಜನತೆಯು ಅತೃಪ್ತಿಯ ಹೊಗೆ ಪರಮಾವಧಿಯ ಎಲ್ಲೆಯನ್ನು ಮೀರಿದೆ. ಆದಕಾರಣ ಇವೊತ್ತು ಈ ದಿಶೆಯಲ್ಲಿಯಾದರೂ ರಾಷ್ಟ್ರದ ಪ್ರಮುಖರು ನ್ಯಾಷನಲ್ ಎಜುಕೇಷನ್ ಪಾಲಿಸಿ ಮಾಡುವುದರ ಬಗ್ಗೆ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತದೆಂಬ ಮಾತನ್ನು ಪ್ರಾಸಂಗಿಕವಾಗಿ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರತಿ ಹಂತ ದಲ್ಲಿಯೂ ಯಾವ ಯಾವ ಮಟ್ಟದಲ್ಲಿ ವಿದ್ಯಾಭ್ಯಾಸ ಕ್ರಮ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ಮುಂದೆ ಪ್ರಸ್ತಾಪ ಮಾಡುತ್ತೇನೆ. ಇವೊತ್ತು ಈ ಇಲಾಖೆಯ ಸುಧಾರಣೆಯ ಬಗ್ಗೆ ಬಹುಶ; ಹಿಂದಿನ ಸರ್ಕಾರದವರು ಕೂಡ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರು. ನಿಮ್ಮ ಒಂದು ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಕಳೆದುವರ್ಷ ಏನೇನು ಸಾಧನೆ ಮಾಡಿದ್ದೀರಿ ಎಂಬ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದೀರಿ. ಇವೊತ್ತು ನಾನು ಪ್ರಥಮವಾಗಿ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ನಿಮ್ಮ ಸಾಧನೆಯಲ್ಲಿ ಇವೊತ್ತು ರಾಜ್ಯಮಟ್ಟದಲ್ಲಿ ಎಂದರೆ ಸರ್ಕಾರಕ್ಕೆ ಇವೊತ್ತು ಅಡ್ವೈಜ್ ಮಾಡುವುದಕ್ಕೆ ಎಜುಕೇಷನಲ್ ಎಕ್ಸ್‌ಪರ್ಟ್ ಆದವರ ಪೈಕಿ ಯಾರನ್ನಾದರೂ ಇಟ್ಟುಕೊಂಡಿದ್ದೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಲ್ಲಿಕಾರ್ಜುನಸ್ವಾಮಿ ಅವರು ಹೆಚ್ಚು ಬುದ್ಧಿವಂತರಿರಬಹುದು, ನಾನು ಅವರ ವಿದ್ಯಾರ್ಹತೆಯ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುತ್ತಿಲ್ಲ. ಆದರೆ ರಾಜಕಾರಣಿಗಳಿಗೆ ಮತ್ತು ಮಂತ್ರಿಗಳಿಗೆ ಅದರಲ್ಲಿಯೂ ಮುಖ್ಯವಾಗಿ ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡುವುದಕ್ಕೆ ಯಾರಾದರು ಎಜುಕೇಷನಲ್ ಎಕ್ಸ್‌ಪರ್ಟ್ ಇದ್ದಾರೆಯೇ ಎಂದು ಕೇಳಬೇಕಾಗುತ್ತದೆ. ನಾನು ಪತ್ರಿಕೆಯಲ್ಲಿ ಓದಿದ ಪ್ರಕಾರ ಹೊಸದಾಗಿ ಈ ಇಲಾಖೆಯಲ್ಲಿ ಅಡಿಷನಲ್ ಸೆಕ್ರೆಟರಿ ಫಾರ್ ಎಜುಕೇಷನ್ ಎಂಬ ಹೊಸ ಹುದ್ದೆಯನ್ನು ಸೃಷ್ಟಿ ಮಾಡಿದ್ದೀರಿ. ಅದಕ್ಕೆ ಬದಲು if you had appointed one Educational Expert I would have complimented you. By creating one Additional Secretary I don't think you are going to do any improvement at all ಏಕೆಂದರೆ ನಾನು ಆ ವ್ಯಕ್ತಿಯ ಬಗ್ಗೆ ಮಾತನಾಡಲಿಲ್ಲ. ಮೊದಲು ಅವರು ಸೆನ್ಸಸ್ ಕಮಿಷನ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಯ ಟರ್ಮ್ ಮುಗಿಯಿತೆಂದು ಇಲ್ಲಿ ಕೆಲಸ ಮಾಡಲು ಅವರಿಗೆ ಈ ಹುದ್ದೆಯನ್ನು ನಿರ್ಮಾಣ ಮಾಡಿದ್ದೀರಿ. ಇದರಿಂದ ವಿದ್ಯಾಕ್ಷೇತ್ರದಲ್ಲಿ ಪ್ರಗತಿ ಸಾಧನೆ ಮಾಡಿದಂತೆ ಆಯಿತೇ ಎಂದು ಕೇಳುತ್ತೇನೆ. ಎಂದು ಹಲವಾರು ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ, ಆದರೆ ನಾನು ಹೇಳಿದಂತಹ ಒಂದು ಉಪಯುಕ್ತವಾದಂಥ ಹುದ್ದೆಯನ್ನು ನಿರ್ಮಾಣ ಮಾಡಿದ್ದರೆ ನಾನು ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೆ. ಆದರೆ ದುರ್ದೈವದಿಂದ ಮತ್ತೊಂದು ಅಡ್ಮಿನಿಸ್ಟ್ರೇಷನ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿದ್ದೀರಿ. ಈ ಅಂಶವನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಮತ್ತೊಂದು ಮುಖ್ಯವಾದ ಸಂಗತಿಯೆಂದರೆ ಇವೊತ್ತು ಜಿಲ್ಲಾ ಮಟ್ಟದಿಂದ ಹಿಡಿದು, ರೆವಿನ್ಯೂ ವಿಭಾಗಗಳ ಮಟ್ಟದವರೆಗೆ ಇರತಕ್ಕಂಥ ಕ್ಲಾಸ್-೧ ಮತ್ತು ಕ್ಲಾಸ್-೨ ಹುದ್ದೆಗಳು ಏನಿವೆ ಈ ಹುದ್ದೆಗಳ ಪೈಕಿ ಅನೇಕ ಹುದ್ದೆಗಳಲ್ಲಿ ಇಂದು ಕೆಲಸ ಮಾಡುತ್ತಿರುವವರು ಇನ್-ಚಾರ್ಜ್ ಅರೇಂಜ್‌ಮೆಂಟ್ ಮೇಲೆ. ಈ ಪದ್ಧತಿಯನ್ನು ಎಂದಿಗೆ ಕೊನೆಗಾಣಿಸುತ್ತೀರಿ ಎಂಬುದನ್ನು ತಿಳಿಸಬೇಕು. ಏಕೆಂದರೆ, ಈ ಪದ್ಧತಿಯ ಮೇಲೆ ಕೆಲಸ ಮಾಡಬೇಕಾದರೆ ಅಧಿಕಾರಿಗಳಿಗೆ ಅನೇಕ ಎಡರು ತೊಡರುಗಳು ಬರುತ್ತಿವೆ ಆದಕಾರಣ ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನು ನಾನು ಪ್ರಪ್ರಥಮವಾಗಿ ಪ್ರೀ-ಪ್ರೈಮರಿ ಎಜುಕೇಷನ್ ಬಗ್ಗೆ ಹೇಳುತ್ತೇನೆ. ಈ ಬಗ್ಗೆ ಅನೇಕ ತಜ್ಞರು ತಮ್ಮ ವರದಿಗಳನ್ನು ಕೊಟ್ಟಿದ್ದಾರೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ ಮುಖ್ಯವಾಗಿ ಇಂದು ಗುಣಮಟ್ಟವನ್ನು ಹೆಚ್ಚು ಮಾಡುವ ಬಗ್ಗೆ ಮತ್ತು ಸಾಮಾಜಿಕ ನ್ಯಾಯವನ್ನು ಎಲ್ಲ ವರ್ಗದ ಜನತೆಗೆ ವಿದ್ಯಾರಂಗದಲ್ಲಿ ಒದಗಿಸುವ ಬಗ್ಗೆ ಯಾವ ಕ್ರಮವನ್ನು ಅಳವಡಿಸಿಕೊಂಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಈಗ ಪ್ರೀ-ಪ್ರೈಮರಿ ಎಜುಕೇಷನ್ ಎಂಬುದು ಬೇಸಿಕ್ ಫೌಂಡೇಷನ್

ಆಗಿದೆ. ಈ ಪ್ರೀ-ಪ್ರೈಮರಿ ಎಜುಕೇಷನ್ ಸೌಲಭ್ಯ ಇಂದು ನಗರದಲ್ಲಿ ಇದೆಯೇ ಹೊರತು ಶೇಕಡ ೮೦ರಷ್ಟು ಜನರು ವಾಸ ಮಾಡುತ್ತಿರುವ ಹಳ್ಳಿಗಳಲ್ಲಿ ಈ ಸೌಲಭ್ಯ ಇಲ್ಲವಾಗಿದೆ. ಈ ಮಕ್ಕಳಿಗೂ ಸಹ ಈ ಒಂದು ಸೌಲಭ್ಯ ಒದಗಿಸುವ ಬಗ್ಗೆ, ಭದ್ರ ತಳಹದಿ ಹಾಕಿಕೊಡುವ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನು ಕೇಳಬೇಕಾಗುತ್ತದೆ. ಕಳೆದ ಎರಡು ವರ್ಷಗಳ ಬಗ್ಗೆ ನಾನು ಹೇಳುತ್ತಿಲ್ಲ. ಕಳೆದ ೨೫ ವರ್ಷಗಳಿಂದಲೂ ಸಹ ನಾವು ಈ ಬಗ್ಗೆ ಸರಿಯಾದಂಥ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ ನಗರಗಳಲ್ಲಿರುವ ಮಕ್ಕಳಿಗೆ ಈ ಸೌಲಭ್ಯವನ್ನು ಒದಗಿಸುವುದಕ್ಕೆ ಹಲವಾರು ಸನ್ನಿವೇಶಗಳು ಇರಬಹುದು, ಇಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಸಂಬಳ ಕೊಡಲು ಗ್ರ್ಯಾಂಟ್-ಇನ್-ಯೇಡ್ ಕೊಡುವ ಪದ್ಧತಿ ಇದೆ. ಆದರೆ ಇಂತಹ ಶಾಲೆಗಳನ್ನು ನಡೆಸಲು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಪ್ರಯತ್ನ ವನ್ನು ಇವೊತ್ತಿನವರೆಗೂ ಮಾಡಿಲ್ಲ. ತತ್ಪರಿಣಾಮವಾಗಿ ಅಲ್ಲಿಯ ಮಕ್ಕಳು ನೇರವಾಗಿ ಪ್ರೈಮರಿ ಶಾಲೆಗಳಿಗೆ ಬರುತ್ತಾರೆ ಈ ಮಕ್ಕಳನ್ನು ಮತ್ತು ನಗರಗಳಲ್ಲಿ ಪ್ರಿ-ಪ್ರೈಮರಿ ಶಾಲೆಗಳಲ್ಲಿ ಎರಡು ಅಥವಾ ಎರಡೂವರೆ ವರ್ಷಗಳ ಕಾಲ ಓದಿ ನಂತರ ಪ್ರೈಮರಿ ಶಾಲೆಗಳಿಗೆ ಬರುವ ಮಕ್ಕಳನ್ನು ಹೋಲಿಸಿ ನೋಡಿದಾಗ ಅಜಗಜಾಂತರ ವ್ಯತ್ಯಾಸವಿರುವುದನ್ನು ತಮಗೆ ತಿಳಿಸಬೇಕಾದ ಅವಶ್ಯಕತೆ ಇಲ್ಲ. ಈ ಕಾರಣ ದಿಂದ ಗ್ರಾಮಾಂತರ ಪ್ರದೇಶದ ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸಲು ಏನು ಕಾರ್ಯಕ್ರಮ ಹಾಕಿ ಕೊಂಡಿದ್ದೀರಿ ಎಂಬುದನ್ನು ಹೇಳಬೇಕು, ಇದರ ಒಂದು ಅವಶ್ಯಕತೆ ಬಹಳವಿದೆ ಎಂಬುದನ್ನು ತಾವು ಮನಗಂಡರೆ ಒಳ್ಳೆಯದೆಂದು ನಾನು ತಿಳಿಸಬೇಕಾಗುತ್ತದೆ. ಮತ್ತು ಇದರ ಬಗ್ಗೆ ತೀವ ಗಮನ ಕೊಡ ಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ,

ಇನ್ನು ಪ್ರೈಮರಿ ಎಜುಕೇಷನ್ ಬಗ್ಗೆ ಹೇಳಬೇಕಾದರೆ ಇಂದು ೩೨-೩೩ ಸಾವಿರ ಪ್ರೈಮರಿ ಪಾಠ ಶಾಲೆಗಳಿವೆ ಎಂದು ಹೇಳಿದ್ದೀರಿ. ಮತ್ತು ಸ್ಟಾಗ್‌ನೇಷನ್ ಬಗ್ಗೆ, ವೇಸ್ಟೇಜ್ ಬಗ್ಗೆ ಹೇಳಿದ್ದೀರಿ. ಇದಕ್ಕೆ ಮೂಲ ಕಾರಣ ಏನು ಎಂಬುದನ್ನು ತಿಳಿಸಬೇಕಾಗುತ್ತದೆ. ಹಿಂದೆ ವಿದ್ಯಾಮಂತ್ರಿಗಳಾಗಿದ್ದ ಶ್ರೀಮಾನ್ ಶಂಕರಗೌಡರು ಈ ಇಲಾಖೆಯ ಸುಧಾರಣೆ ಮಾಡುವ ಬಗ್ಗೆ ಬಹಳ ಆಶೆಯನ್ನು ಇಟ್ಟು ಕೊಂಡಿದ್ದರು. ಮತ್ತು ಈ ಇಲಾಖೆಯನ್ನು ಡೀಸೆಂಟ್ರಲೈಜ್ ಮಾಡುವುದಾಗಿ ಹೇಳಿದರು, ಅವರು ಮಾಡಿದ ಭಾಷಣ ನನ್ನ ಜ್ಞಾಪಕಕ್ಕೆ ಬರುತ್ತದೆ. ಜಾಯಿಂಟ್ ಡೈರಕ್ಟರ್, ಡೆಪ್ಯೂಟಿ ಡೈರಕ್ಟರ್, ಸಬ್ಜೆಟ್ ಇನ್‌ಪೆಕ್ಟರ್ ಹೀಗೆ ಹಲವಾರು ಹುದ್ದೆಗಳನ್ನು ಹೊಸದಾಗಿ ಸೃಷ್ಟಿ ಮಾಡಿದರು. ಇವೊತ್ತು ತಮ್ಮ ಒಂದು ರಿಪೋರ್ಟಿ ನಲ್ಲಿ ಈ ಬಗ್ಗೆ ಒಂದು ಮಾತನ್ನು ಹೇಳಿದ್ದೀರಿ.

" A Pilot Project was initiated in the selected Taluks during December 1969 In these Pilot Project areas, Graduate Inspectors were provided at the rate of one inspector for every 30 schools or 75 teachers and their offibes were set up in Hobli Head quarters The State Institute of Education made a study of the impact of the programme after 2 years of starting the project. The study reve aled that there was a reduction of about 4 per cent in the incid-enee of wastage and stagnation as a result of intensive supervision" ಇವೊತ್ತು, ನಾನು ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗುತ್ತದ, ಏನೆಂದರೆ, ಹೊಸದಾಗಿ ಅಧಿಕಾರಿಗಳ ಹುದ್ದೆಗಳನ್ನು ಏನು ಸೃಷ್ಟಿ ಮಾಡಿದ್ದೀರಿ, ಆ ಹುದ್ದೆಗಳಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಸಾಧನೆ ನಡೆದಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ ನಾವು ನಿರೀಕ್ಷೆ ಮಾಡಿದ್ದ ಸಾಧನೆಯ ಪೈಕಿ ಶೇಕಡ ೫೦ರಷ್ಟಾದರೂ ಆಗಿದ್ದರೆ ನಾವು ಸಂತೋಷಪಡಬಹುದಾಗಿತ್ತು. ಆದರೆ ನಾನು ನೊಂದ ಹೃದಯದಿಂದ ಹೇಳಬೇಕಾಗುತ್ತದೆ, ಏನೆಂದರೆ ಇಂದು ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಲ್ಲಿ ಇನ್ಸ್‌ಪೆಕ್ಷನ್ ಮಾಡುವುದಕ್ಕಾಗಿ ಅನೇಕ ಹುದ್ದೆಗಳನ್ನು ನಿರ್ಮಾಣ ಮಾಡಿದ್ದರೂ ಸಹ ಸರಿಯಾಗಿ ಇನ್ಸ್‌ಪೆಕ್ಷನ್ ನಡೆಯುತ್ತಿಲ್ಲ, ನಮ್ಮ ಕಾಲದಲ್ಲಿ ಇನ್‌ಸ್ಪೆಕ್ಷನ್ ಮಾಡಲು ಡಿ ಇ.ಓ. ಅಥವಾ ಇನ್ಸ್‌ಪೆಕ್ಟಿಂಗ್ ಆಫೀಸರ್ ಬರುತ್ತಿದ್ದರು. ಆ ರೀತಿ ಬಂದಾಗ ಉಪಾಧ್ಯಾಯರನ್ನು ಮಕ್ಕಳಿಗೆ ಪಾಠ ಹೇಳಿಕೊಡಿ ಎಂದು ಹೇಳಿ ತಾವು ಕುಳಿತುಕೊಂಡು ನೋಡುತ್ತಿದ್ದರು. ಪಾಠ ಮಾಡುವಾಗ ಏನಾದರು ತೊಡಕು ಉಪಾ ಧ್ಯಾಯರಿಗೆ ಕಂಡುಬಂದರೆ ಅದನ್ನು ತಿದ್ದುವುದಕ್ಕೆ ಪ್ರಯತ್ನ ಮಾಡುತ್ತಿದ್ದರು.

ನಾನು ಕೇಳುತ್ತೇನೆ ಎಷ್ಟು ಜನ ಆ ಕಾರ್ಯದಲ್ಲಿ ಮಗ್ನರಾಗಿದ್ದಾರೆ ಎಂದು. ನಮ್ಮ ಅಧಿಕಾರಿಗಳು ಈಗ ಬಹಳ ಜನ ಅಧಿಕಾರಿಗಳು ಇದ್ದಾರೆ. ಈ ದಿಶೆಯಲ್ಲಿ ಸರ್ಕಾರದವರು ಅನೇಕ ತರಪೇತಾದ ಉಪ ಧ್ಯಾಯರನ್ನು ನೇಮಕ ಮಾಡಿದ್ದಾರೆ. ಇವೊತ್ತು ತರಪೇತಿ ಪಡೆದ ಉಪಾಧ್ಯಾಯರ ವರ್ಗ ಹೆಚ್ಚಾಗಿದೆ. ವರ್ಷೇ ವರ್ಷೇ ಇಷ್ಟು ಜನ ಉಪಾಧ್ಯಾಯರು ತರಪೇತಿಯನ್ನು ಪಡೆದಿದ್ದಾರೆ, ಇಷ್ಟು ಜನ ತರಪೇತಿಯನ್ನು

ಪಡೆದವರೂ ಇದ್ದಾರೆ, ಇಷ್ಟು ಜನ ತರಪೇತಿಯನ್ನು ಪಡೆಯದೇ ಇರುವವರು ಇದ್ದಾರೆ, ನಾವು ಇಷ್ಟು ಸಾಧನೆಗಳನ್ನು ಮಾಡಿದ್ದೇವೆ ಎಂಬುದನ್ನು ಹೇಳಿದ್ದಾರೆ. ಆದ್ದರಿಂದ ಇವೊತ್ತು ತರಪೇತಿಯನ್ನು ಪಡೆದ ಉಪಾಧ್ಯಾಯರು ಮಾಡತಕ್ಕ ಬೋಧನಾಕ್ರಮ ಅದರಲ್ಲಿರತಕ್ಕ ಮಾನ್ಯತೆಗಳನ್ನು ಸರಿಪಡಿಸುವುದಕ್ಕೆ ಮೇಲ್ವಿಚಾರಣಾ ಜವಾಬ್ದಾರಿಯನ್ನು ಹೊತ್ತಿರತಕ್ಕ ಅಧಿಕಾರಿಗಳು ಎಷ್ಟು ಜನ ಹೋಗಿದ್ದಾರೆ? ಪಾಠಕ್ರಮದಲ್ಲಿರತಕ್ಕ ನ್ಯೂನತೆಗಳನ್ನು ತಿದ್ದುವುದಕ್ಕೆ ಹಳ್ಳಿಗಾಡಿನ ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಜವಾಬ್ದಾರಿಯನ್ನು ಹೊತ್ತಿರತಕ್ಕವರು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಿದ್ದಾರೆಯೋ ಎಂದು ಕೇಳಬೇಕಾಗುತ್ತದೆ. ವಿದ್ಯಾಭ್ಯಾಸ ಗಾತ್ರದಲ್ಲಿ ಬಹಳ ಬೆಳೆದಿದೆ. ಗುಣಮಟ್ಟದಲ್ಲಿ ಸುಧಾರಣೆಯಾಗಿದೆಯೋ ಎಂದರೆ ಅದರಲ್ಲಿ ಸಾಕಷ್ಟು ಸುಧಾರಣೆಯಾಗಿಲ್ಲ. ಆದ್ದರಿಂದ ಈ ದಿಶೆಯಲ್ಲಿ ಸರ್ಕಾರ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಒಳ್ಳೆಯದು. ಸಾಮಾಜಿಕ ನ್ಯಾಯ ಒಂದು ಕಡೆ, ಗುಣಮಟ್ಟ ಎರಡನೆಯದು. ಈ ಎರಡನ್ನೂ ವಿದ್ಯಾ ರಂಗದಲ್ಲಿ ಜಾರಿಗೆ ತರತಕ್ಕದು ಬಹಳ ಕಠಿಣವಾದ ಪ್ರಶ್ನೆ. ಈ ಒಂದು ಅಭಿಪ್ರಾಯವನ್ನು ಹಾಕುವುದರಲ್ಲಿ ಹೆಚ್ಚು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ ಇದು ಸರ್ಕಾರದ ಜವಾಬ್ದಾರಿಯ ಕೆಲಸ ಈ ಕೆಲಸವನ್ನು ಸರ್ಕಾರದವರು ಮಾಡದೇ ಹೋದರೆ ಇಡೀ ರಾಷ್ಟ್ರದ ಭವಿಷ್ಯವನ್ನು ನಿರ್ಮಾಣ ಮಾಡತಕ್ಕ ಹೊಣೆಯನ್ನು ಹೊತ್ತಿರತಕ್ಕ ಯುವಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸರಿಯಾದ ಮಾರ್ಗವನ್ನು ಹಾಕುವುದಕ್ಕಾಗುವುದಿಲ್ಲ.

ಇನ್ನೊಂದು ವಿಷಯ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅದರಲ್ಲೂ ಪ್ರೈಮರಿ, ಮತ್ತು ಸೆಕೆಂಡರಿ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿ ವಿದ್ಯಾಭ್ಯಾಸ ಮಾಡಿಸಬೇಕು ಎಂಬ ಆಶೆ ನನಗೆ ಇಲ್ಲ. ಸಾಮಾನ್ಯವಾದ ಆಸ್‌ಬೆಸ್ಟೋ ಷೀಟುಗಳ ಷೆಡ್‌ಗಳನ್ನು ಹಾಕಿ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟರೆ ಸಾಕು. ಎಷ್ಟೋ ಕಡೆಗಳಲ್ಲಿ ಮರದ ನೆರಳಿನಲ್ಲಿ ಕುಳಿತುಕೊಂಡು ಮಕ್ಕಳಿಗೆ ಪಾಠವನ್ನು ಹೇಳಿಕೊಡುವ ಪರಿಸ್ಥಿತಿ ಇತ್ತು. ಆದ್ದರಿಂದ ನಾನು ಆರ್.ಸಿ.ಸಿ. ಕಟ್ಟಡಗಳನ್ನು ಕಟ್ಟಿಸಿಕೊಡಿ ಎಂದು ನಾನು ಹೇಳುವುದಿಲ್ಲ. ಸಾಧಾರಣವಾದ ಷೆಡ್ಡುಗಳನ್ನು ಹಾಕಿಕೊಟ್ಟು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಒಂದು ಒಳ್ಳೆಯ ಎನ್‌ವೈರ್‌ನ್‌ಮೆಂಟ್ ಕ್ರಿಯೇಟ್ ಮಾಡಬೇಕಾಗುತ್ತದೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಬೇಕಾದಂತಹ ಮಣೆಗಳು ಮತ್ತು ಇತರ ಸಲಕರಣೆಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇದನ್ನೂ ಕೂಡ ಬೆಟರ್‌ಮೆಂಟ್‌ಯನ್ನು ಹಾಕಿ ಅವರು ಜನಗಳ ಹತ್ತಿರ ಹೋಗಿ ದಾನವಾಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಗರಗಳಲ್ಲಿ ಇರತಕ್ಕ ಶಾಲೆಗಳಲ್ಲಿ ಸರ್ಕಾರದವರು ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳು ಸೆಸ್ ಕೊಡುವುದಿಲ್ಲವೇ? ಅವರಿಗೆ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಏತಕ್ಕೆ ಹೊಣೆಗಾರಿಕೆಯನ್ನು ಹೊರಬಾರದು? ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಿಗೆ ಸರಿಯಾದ ಕಟ್ಟಡ ಇಲ್ಲ, ಎಕ್ವಿಪ್‌ಮೆಂಟ್ ಇಲ್ಲ, ಮಕ್ಕಳು ಕುಳಿತುಕೊಳ್ಳುವುದಕ್ಕೆ ಮಣೆಗಳಿಲ್ಲ, ಅಲ್ಲಿ ಒಂದು ಸರಿಯಾದ ಎನ್‌ವೈರನ್‌ಮೆಂಟ್ ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ, ಅಲ್ಲಿ ಒಂದು ತೃಪ್ತಿಕರವಾದ ವಾತಾವರಣ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಈ ಹಿಂದೆ ಇದೇ ಸಭೆಯಲ್ಲಿ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಕೊಡಬೇಕು ಎಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದರ ಸಾಧನೆ ಏನು, ಅದರ ಪರಿಮಾಣ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ತಿಳಿಸಬೇಕು. ನಮ್ಮ ಮಕ್ಕಳು ಶಾಲೆಗೆ ಹೋಗತಕ್ಕಂಥಾ ಮಕ್ಕಳ ಸಂಖ್ಯೆ ಎಷ್ಟು ಸಾಧನೆಯಾಗಿದೆ ಎಂಬುದನ್ನು ತಿಳಿಸಬೇಕು. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುತ್ತೇವೆ ಎಂದು ಘೋಷಣೆ ಮಾಡಿದ ಮೇಲೆ ಸರ್ಕಾರದ ಸಾಧನೆ ಏನು, ಅವರ ಅಳತೆಕೋಲು ಏನು ಎಂದು ಅಳತೆ ಮಾಡಬೇಕಾಗುತ್ತದೆ. ನಾವು ನಿರೀಕ್ಷಿಸಿದ ಮಟ್ಟದಲ್ಲಿ ಸಾಧನೆಯಾಗಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಇನ್ನೊಂದು ವಿಷಯ. ಇವೊತ್ತು ಸೆಕೆಂಡರಿ ಎಜುಕೇಷನ್‌ನಲ್ಲಿ, ಪ್ರಿ-ಪ್ರೈಮರಿ ಎಜುಕೇಷನ್‌ನಲ್ಲಿ ನಮ್ಮ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ತಮ್ಮ ಕಾಲಮೇಲೆ ತಾವು ನಿಂತುಕೊಳ್ಳತಕ್ಕ ಬಗ್ಗೆ ತಮ್ಮ ಮುಂದಿನ ಜೀವನವನ್ನು ನಿರೂಪಣೆ ಮಾಡತಕ್ಕ ಬಗ್ಗೆ ನಮ್ಮ ವಿದ್ಯಾಭ್ಯಾಸದ ನೀತಿಯನ್ನು ನಿರೂಪಣೆ ಮಾಡಲೇಬೇಕಾಗಿದೆ. ಇದು ಇಲ್ಲಿರತಕ್ಕ ಮೂಲ ಪ್ರಶ್ನೆ. ಇವೊತ್ತು ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಕಾಲೇಜಿಗೆ ಕಳುಹಿಸಬೇಕೇ, ಯೂನಿವರ್ಸಿಟಿ ಎಜುಕೇಷನ್ನಿಗೆ ಕಳುಹಿಸಬೇಕೇ? ಇಲ್ಲ ಸ್ಕ್ರೂಟಿನಿ ಮಾಡಿ ಫಿಲ್ಟರ್ ಮಾಡಿ ಅವರಿಗೆ ಬೇರೆ ವಿದ್ಯಾಭ್ಯಾಸದ ರೀತಿಯನ್ನು ನಿರೂಪಣೆ ಮಾಡಬೇಕೇ ಎನ್ನುವುದು ಪ್ರಶ್ನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳು

ತ್ತಾರೆ. ಸಾಮಾಜಿಕ ನ್ಯಾಯವನ್ನು ಒದಗಿಸಬೇಕು ಎಂದು. ಎಸ್.ಎಸ್.ಎಲ್.ಸಿ. ಮಾಡಿದವರನ್ನು ಫಿಲ್ಟರ್ ಮಾಡಿದರೆ ಸಾಮಾಜಿಕ ನ್ಯಾಯವನ್ನು ಒದಗಿಸುವುದು ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ವಿದ್ಯಾ ರಂಗದಲ್ಲಿ ಸಾಮಾಜಿಕ ನ್ಯಾಯವನ್ನು ತರುವುದಕ್ಕೆ ಸಾಧ್ಯವಾಗುತ್ತದೆಯೋ? ಪ್ರಪಂಚದ ಯಾವುದೆ ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡರೂ ಕೂಡ ಯೂನಿವರ್ಸಿಟಿಗೆ ಹೋಗತಕ್ಕಂಥವರು ೧೫ ಪರ್ಸೆಂಟ್ ಮಾತ್ರ ಹೆಚ್ಚು ಮಕ್ಕಳು ಸೆಕೆಂಡರಿ ಎಜುಕೇಷನ್ನಿನಿಂದ ಯೂನಿವರ್ಸಿಟಿ ಎಜುಕೇಷನ್ನಿಗೆ ಹೋಗುವುದಕ್ಕೆ ಹೋಗತಕ್ಕಂಥಾ ಅವಕಾಶ ಇಲ್ಲ ಎಸ್.ಎಸ್.ಎಲ್.ಸಿ. ಪಾಸಾದವರನ್ನು ಸ್ಕ್ರೂಟಿನಿ ಮಾಡುತ್ತಾರೆಯೋ ಎಂದು ನಾನು ಕೇಳುತ್ತೇನೆ. ಈ ದಿಶೆಯಲ್ಲಿ ಸರ್ಕಾರದ ಅಭಿಪ್ರಾಯ ಏನು ಎನ್ನುತ್ತಕ್ಕಂಥದ್ದನ್ನು ಕೇಳಬೇಕಾಗುತ್ತದೆ. ಕೇಂದ್ರ ಸರ್ಕಾರದ ವಿದ್ಯಾಮಂತ್ರಿಗಳು ಒಂದು ಕಡೆ ಹೇಳಿದ್ದಾರೆ. ಈ ದಿಶೆಯಲ್ಲಿ ನಾವು ಆಲೋಚನೆ ಮಾಡುತ್ತಿದ್ದೇವೆ ಎಂದು. ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿಯ ಆಧಾರದ ಮೇಲೆ ನಾನು ಇದನ್ನು ಹೇಳುತ್ತಿದ್ದೇನೆ. ಈಗ ಪರಿಸ್ಥಿತಿ ಬೇರೆ ಇದೆ. ರಾಜಕಾರಣಿಗಳನ್ನು ಜುಟ್ಟು ಬೋಳಿಸಿ ಮೆರವಣಿಗೆ ಮಾಡತಕ್ಕ ಕಾಲ ಬಂದಿದೆ. ಈ ಬಗ್ಗೆ ಎಲ್ಲರೂ ಯೋಚನೆ ಮಾಡುವ ಕಾಲ ಬಂದಿದೆ. ಅಷ್ಟು ಸುಲಭವಾಗಿ ಯುವ ಜನಾಂಗವನ್ನು ಹತ್ತಿಕ್ಕುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಕ್ಲಿಷ್ಟಸಮಸ್ಯೆಯಾಗಿದೆ. ೧೫ ಪರ್ಸೆಂಟಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಯೂನಿವರ್ಸಿಟಿಗೆ ಕಳುಹಿಸಬೇಕೇ ಕಳುಹಿಸಬಾರದೆ ಎನ್ನುವ ಒಂದು ಪ್ರಶ್ನೆಯನ್ನು ಹಾಕಿದ್ದಾರೆ ಅಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸುವುದಕ್ಕೆ ಇರತಕ್ಕ ಸಮಸ್ಯೆ ಮೂಲ ಸಮಸ್ಯೆ. ಒಂದುವೇಳೆ ಹೆಚ್ಚು ಅಂಕಗಳನ್ನು ಗಳಿಸಿರತಕ್ಕ ಮಕ್ಕಳನ್ನು ಯೂನಿವರ್ಸಿಟಿಗೆ ಮೀಸಲಾಗಿಡಬೇಕೇ ಅಥವಾ ಸಮಾಜದಲ್ಲಿರತಕ್ಕ ಎಲ್ಲಾ ವರ್ಗದ ಜನಗಳಿಗೂ ಯೂನಿವರ್ಸಿಟಿಯಲ್ಲಿ ಸೀಟುಗಳನ್ನು ಮೀಸಲಾಗಿಡಬೇಕೇ ಎನ್ನುವುದು ಬಹಳ ಜಟಿಲವಾದ ಪ್ರಶ್ನೆ. ಇದನ್ನು ಬಿಡಿಸುವುದಕ್ಕೆ ಬಹುಶಃ ಬಹಳ ಕಾಷಿಯಸ್ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ನಾನು ಇದನ್ನು ಬಹಳ ಲಘುವಾಗಿ ಹೇಳುವುದಿಲ್ಲ. ಇದರ ಬಗ್ಗೆ ಒಂದು ದೃಢವಾದ ಒಂದು ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಬಹಳ ಜಟಿಲವಾದ ಪ್ರಶ್ನೆ. ೫ನೇ ಪಂಚವಾರ್ಷಿಕ ಯೋಜನೆಯ ಡ್ರಾಫ್ಟ್‌ನಲ್ಲಿ ಹೇಳಿದ್ದಾರೆ ೫ನೇ ಪಂಚವಾರ್ಷಿಕಯೋಜನೆಯ ಅಂತ್ಯಕ್ಕೆ ಸುಮಾರು ೧೫ ಲಕ್ಷ ಆರ್ಟ್ಸ್ ಗ್ರಾಜುಯೇಟ್ಸ್, ಟೆಕ್ನಿಕಲ್ ಗ್ರಾಜುಯೇಟ್ಸ್, ಮೆಡಿಕಲ್ ಗ್ರಾಜುಯೇಟ್ಸ್ ಎಲ್ಲಾ ಸೇರಿ ೧೫ ಲಕ್ಷ ಜನ ಗ್ರಾಜುಯೇಟ್ಸ್ ರಾಷ್ಟ್ರದ ನಿರುದ್ಯೋಗಿಗಳಾಗುತ್ತಾರೆ, ನಿರುದ್ಯೋಗಕಕ್ಕೆ ಬಲಿಯಾಗುತ್ತಾರೆ ಎಂದು ೫ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಹೇಳಿದ್ದಾರೆ. ಇದರಲ್ಲಿ ಪೋಸ್ಟ್ ಗ್ರಾಜುಯೇಟ್ಸ್ ೩ ಲಕ್ಷ ಜನ ನಿರುದ್ಯೋಗಿಗಳಾಗುತ್ತಾರೆ ಎಂದು ಹೇಳಿದ್ದಾರೆ ಇವೊತ್ತು ನಾನು ಕೇಳುತ್ತೇನೆ ಡಿಗ್ರಿಗಳನ್ನು ಉತ್ಪಾದನೆ ಮಾಡತಕ್ಕ ಸಂಸ್ಥೆಗಳಾಗಿ ಯೂನಿವರ್ಸಿಟಿಗಳು ಕೆಲಸ ಮಾಡಬೇಕಾಗಿದೆಯೋ ಅಥವಾ ಇವರಿಂದ ದೇಶಕ್ಕೆ ಏನಾದರೂ ಒಳ್ಳೆಯದಾಗುತ್ತದೆಯೋ? ನಮ್ಮ ದೇಶಲ್ಲಿ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮಾರ್ಪಾಡು ಮಾಡಬೇಕಾಗಿದೆ ವೋಕೇಷನಲ್ ಎಜುಕೇಷನ್ ಅನ್ನು ಯಾವ ಹಂತದಲ್ಲಿ ಕೊಡಬೇಕು, ಎಂಬುದನ್ನು ಯೋಚನೆ ಮಾಡಿ ಸೆಕೆಂಡರಿ ಎಜುಕೇಷನ್‌ನಲ್ಲಿ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನು ಮಾಡಿದ್ದೇವೆ ಎಂದು ಸರ್ಕಾರದವರು ಕೊಟ್ಟಿರತಕ್ಕ ವರದಿಯಲ್ಲಿ ಹೇಳಿದ್ದಾರೆ ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ನಾನು ಸೂಕ್ಷ್ಮವಾಗಿ ಇಷ್ಟು ಹೇಳುತ್ತೇನೆ. ಡೈವರ್ಸಿಫಿಕೇಷನ್ ಅನ್ನು ಸೆಕೆಂಡರಿ ಮತ್ತು ಪ್ರೀಯೂನಿವರ್ಸಿಟಿ ಎಜುಕೇಷನ್‌ನಲ್ಲಿ ಕೊಟ್ಟು ೨೦ ಪರ್ಸೆಂಟ್ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲಿ ಎಂದು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ದೇಶದ ಪ್ರಗತಿಗೆ ಇವೊತ್ತು ಅನುಕೂಲವಾಗತಕ್ಕಂಥಾ ರೀತಿಯಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಮಾರ್ಪಾಡು ಮಾಡತಕ್ಕದ್ದು ಒಳ್ಳೆಯದಲ್ಲವೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಏಕೆಂದರೆ ಈಗ ಆಲೋಚನೆ ಮಾಡುವ ಕಾಲ ಬಂದಿದೆ. ಇವತ್ತು ಇದಕ್ಕಾಗಿ ಹೆಚ್ಚು ಕಾಲವನ್ನು ಹರಣ ಮಾಡುವುದಿಲ್ಲ. ಆದ್ದರಿಂದ ಈಗ ವೊಕೇಷನಲೈಜೇಷನ್ ಆಫ್ ಎಜುಕೇಷನ್, ಸೆಕೆಂಡರಿ ಮತ್ತು ಫ್ರೀ ಯೂನಿವರ್ಸಿಟಿಗಳಲ್ಲಿ ಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಷಯ. ನಾನು ಮೊದಲೇ ಹೇಳಿದ್ದೇನೆ ಸಾಮಾಜಿಕ ನ್ಯಾಯವನ್ನು ದೊರಕಿಸುವ ವಿಷಯ. ಹಳ್ಳಿಗಾಡುಗಳಲ್ಲಿ ಇರತಕ್ಕ ಮಕ್ಕಳಿಗೆ ಅದರಲ್ಲಿಯೂ ಹರಿಜನ ಗಿರಿಜನರಿಗೇ ಆಗಲೀ ಅಥವಾ ಹಿಂದುಳಿದವರಿಗೇ ಆಗಲೀ ಕಾಲೇಜ್ ವಿದ್ಯಾಭ್ಯಾಸವನ್ನು ಮೊಟಕು ಮಾಡುವುದು ಚೆನ್ನಾಗಿ ಕಾಣುವುದಿಲ್ಲ. ಬೇರೆ ಕಡೆಗಳಲ್ಲಿಯೂ ಅವರಿಗೆ ಸ್ಪೆಷಲ್ಲಾಗಿ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಬೇಕು. ಸರ್ಕಾರದವರು ಸಾಕಷ್ಟು ಹಣವನ್ನು ವೆಚ್ಚಮಾಡಿ ಅಡಿಷನಲ್ ಕೋಚಿಂಗ್‌ನ್ನು ಹೈಸ್ಕೂಲ್ ಹಂತದಲ್ಲಿಯೂ ಕೊಡಬೇಕು. ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂಬ ಮಾತನ್ನು ಒಂದುಕಡೆ ಆಡುವಾಗ ನಾವು ಪ್ರಿಯೂನಿವರ್ಸಿಟಿಯಲ್ಲಿ ಅವರಿಗೆ ವಿದ್ಯಾಭ್ಯಾಸವನ್ನು ಕೊಡುವಾಗ ಅಂತಹ ಮಕ್ಕಳಿಗೆ ಯಾವ ರೀತಿಯಲ್ಲಿಯೂ ಅನ್ಯಾಯವಾಗಬಾರದು. ಒಟ್ಟಿನಲ್ಲಿ ಅವರಿಗೆ ಅಡಿಷನಲ್ ಕೋಚಿಂಗ್ ಕೊಟ್ಟು ಸಾಮಾಜಕ ನ್ಯಾಯವನ್ನು ಒದಗಿಸಬೇಕು.

ಇನ್ನು ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ವಿಷಯ. ಯಾವ ಸಬ್ಜೆಕ್ಟ್ ಬಗ್ಗೆ ಅವನಿಗೆ ಆ್ಯಟಿಟ್ಯೂಡ್ ಇದೆಯೋ ಆ ಒಂದು ಸಬ್ಜೆಕ್ಟ್‌ನಲ್ಲಿಯೇ ತೃಪ್ತಿಕೊಡುವಂತೆ ವ್ಯವಸ್ಥೆಮಾಡಬೇಕು. ಒಂದೊಂದು ಯೂನಿವರ್ಸಿಟಿಯೊಳಗೆ ೩ ಸಾವಿರ ಜನರು ಪೋಸ್ಟ್ ಗ್ರಾಜುಯೇಟ್ಸ್ ವಿದ್ಯಾರ್ಥಿಗಳು ಇದ್ದಾರೆ. ಅವರಲ್ಲಿ ಅನೇಕರು ಎಂ.ಎ., ಎಂ.ಎಸ್‌ಸಿ, ಓದಿಕೊಂಡು ಬಂದು ಎರಡನೆಯ ದರ್ಜೆ ಗುಮಾಸ್ತಗಿರಿ ಸಿಕ್ಕಿದರೆ ಸಾಕು, ಜೀವನಮಾಡೋಣವೆಂದು ಹೇಳುತ್ತಿದ್ದಾರೆ. ಇಂತಹ ಒಂದು ಅವ್ಯವಸ್ಥೆ ಇರುವಾಗ ಸರ್ಕಾರದವರು ಅತಿ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಮತ್ತೊಂದು ವಿಷಯ, ಜೂನಿಯರ್ ಕಾಲೇಜಸ್‌ಗೆ ಸಂಬಂಧಪಟ್ಟದ್ದು. ಬಹುಶಃ ಇವತ್ತು ಅದಕ್ಕೆ ಮೂರು ಜನ ಯಜಮಾನರು ಒಬ್ಬರು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್. ಇನ್ನೊಬ್ಬರು ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್. ಆಮೇಲೆ ಪಿ ಯು. ಸಿ. ಬೋರ್ಡ್ ಬೇರೆ ಇದೆ, ಒಂದು ಸ್ಟ್ಯಾಟುಟರಿ ಬೋರ್ಡ್ ಮಾಡಿ ಈಗಿನ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸಲು ಪ್ರಯತ್ನ ಮಾಡಬೇಕು. ನಾನು ಹೇಳುವುದೇನೆಂದರೆ, ಇದು ಒಬ್ಬರ ಕಂಟ್ರೋಲ್‌ನಲ್ಲಿ ಇರಬೇಕು. ಸ್ಟ್ಯಾಟುಟರಿ ಬೋರ್ಡ್ ಮಾಡಿದರೂ ಮೂರು ರಂಗಗಳಲ್ಲಿಯೂ ಒಂದು ರೀತಿಯಲ್ಲಿ ಹಿಡಿತವನ್ನು ಇಟ್ಟುಕೊಂಡು ಕೆಲಸಮಾಡುವುದು ಯೋಗ್ಯವೆಂದು ನನ್ನ ವೈಯುಕ್ತಿಕ ಅಭಿಪ್ರಾಯ ಇದರ ಬಗ್ಗೆ ಸರ್ಕಾರದವರು ಎಷ್ಟು ಜಾಗ್ರತೆಯಾಗಿ ಕ್ರಮ ತೆಗೆದುಕೊಂಡರೆ ಅಷ್ಟು ಒಳ್ಳೆಯದು. ಈ ಬೋರ್ಡನ್ನು ರಚನೆಮಾಡುವ ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ ತಾವು ಅಲ್ಲಿ ರಾಜಕಾರಣಿಗಳಿಗೆ ಅವಕಾಶ ಕೊಡಬೇಡಿ. ಅದರಿಂದ ಸುಧಾರಣೆ ಆಗುವುದಿಲ್ಲ. ಟಿ. ಎ. ಮತ್ತು ಡಿ. ಎ. ತೆಗೆದುಕೊಳುವುದಕ್ಕೆ ಆ ಬೋರ್ಡಿನಲ್ಲಿ ಅವಕಾಶವಿರಬಾರದು.

ವಿದ್ಯಾಭ್ಯಾಸವನ್ನು ಕೊಡುವಾಗ ಡೈವರ್ಸಿಫೈಡ್ ಎಜ್ಯುಕೇಷನ್ ಇರಬೇಕೆಂದು ನಾನು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಕೈಗಾರಿಕೆಯಲ್ಲಿ ಅಭಿಲಾಷೆ ಇರತಕ್ಕವರಿಗೆ ಹಾಗೆಯೆ ಕಾಮರ್ಸ್ ಮತ್ತು ಟ್ರೇಡ್‌ನಲ್ಲಿ ಅಭಿಲಾಷೆ ಇರುವವರಿಗೆ ಸೆಕೆಂಡರಿ ಮತ್ತು ಪ್ರೀಯೂನಿವರ್ಸಿಟಿ ಎಜುಕೇಷನ್ನನ್ನು ಕೊಡುವ ಕಾಲದಲ್ಲಿ ಯಾವ್ಯಾವ ರಂಗದಲ್ಲಿ ಅವರನ್ನು ತರಪೇತು ಮಾಡಿದರೆ ಒಳ್ಳೆಯದು ಎಂಬುದನ್ನು ಸರ್ಕಾರ ಗಮನಿಸಬೇಕು. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಹೆಚ್ಚಿಗೆ ಉದ್ಯೋಗಗಳನ್ನು ಅವಲಂಬನೆ ಮಾಡಬೇಕೆಂದು ಹೇಳುತ್ತೇನೆ ಅದನ್ನು ಇವತ್ತು ಮಾಡಿದೆ ಯಾವುದೋ ಒಂದು ಪಕ್ಷದ ಒತ್ತಾಯಕ್ಕೆ ಮಣಿದು ಗ್ರಾಮಾಂತರ ಪ್ರದೇಶದ ಅನೇಕ ಮಕ್ಕಳನ್ನು ಬೀದಿಯಲ್ಲಿ ತಿರುಗಾಡುವುದಕ್ಕೂ ಆಗದೇ ಇರುವ ಹಾಗೆ ಮಾಡಿದ್ದಾರೆ ಅಂತಹ ವಾತಾವರಣವನ್ನು ನಿರ್ಮಾಣಮಾಡಬಾರದು. ಮಾತೆತ್ತಿದರೆ ಇವರ ಬಾಯಲ್ಲಿ ಏನು ಬರುತ್ತದೆಂದರೆ, ಅರ್ಧ ಮಿಲಿಯನ್ ಜಾಬ್ಸ್‌ನ್ನು ನಿರ್ಮಾಣಮಾಡಿ ಎಲ್ಲರಿಗೂ ಜಾಬ್ಸನ್ನು ಕೊಡುತ್ತೇವೆಂದು ಹೇಳುತ್ತಾರೆ. ಇದು ಸರಿಯಲ್ಲ. ಈ ದೇಶದಲ್ಲಿರತಕ್ಕ ಜನಗಳಿಗೆ ಟೋಪಿಹಾಕುತ್ತಿದ್ದಾರೆ ಆ ರೀತಿ ಮಾಡುವುದಕ್ಕೆ ಇನ್ನು ಮುಂದೆ ಸಾಧ್ಯವಿಲ್ಲ. ಇವತ್ತು ಡೈವರ್ಸಿಫೈಡ್ ಎಜುಕೇಷನ್ ಎಲ್ಲ ಹಂತದಲ್ಲಿಯೂ ಕೊಡಬೇಕು. ಅದಕ್ಕಾಗಿ ಸರ್ಕಾರದವರು ಸರಿಯಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕು ಇದಕ್ಕಾಗಿ ಒಂದು ಸ್ಟ್ಯಾಟುಟರಿ ಬೋರ್ಡನ್ನು ರಚನೆ ಮಾಡಿಸಿ ಅಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಅರ್ಹತೆ ಇರುವ ಜನರನ್ನು ಈ ಬೋರ್ಡಿನಲ್ಲಿ ಹಾಕಬೇಕೆಂದು ನನ್ನ ಒಂದು ಅಭಿಪ್ರಾಯವನ್ನು ತಿಳಿಸಿದ್ದೇನೆ. ಆ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕೆಂದು ನಾನು ತಿಳಿಸಲಿಚ್ಛಿಸುತೇನೆ.

ಮತ್ತೊಂದು ವಿಷಯ, ಈಗ ಫೀಜ್ ಮನಿ ಎಂಬುದಾಗಿ ಇಟ್ಟಿದ್ದೀರಿ, ಇದಕ್ಕಾಗಿ ಈಗ ಯಾರೂ ಮುಂದೆ ಬರುವುದಿಲ್ಲ. ಒಬ್ಬ ಹುಡುಗ ಅದಕ್ಕೆ ಅರ್ಜಿ ಹಾಕಿದರೆ ಅವನು ಸೆಕ್ಯೂರಿಟಿ ಬೇರೆ ಕೊಡಬೇಕೆಂದರೆ ಅದು ಆಗುವುದಿಲ್ಲ ಅವನು ಏನಾದರೂ ಉದ್ಯಮವನ್ನು ಮಾಡುತ್ತೇನೆಂದರೆ ಅವನಿಗೆ ಸಾಕಷ್ಟು ಹಣದ ಸೌಕರ್ಯವನ್ನು ಒದಗಿಸಿಕೊಡುವುದಿಲ್ಲ. ಇವತ್ತು ಅವನದೇ ಆದಂಥ ಸ್ವಂತ ಉದ್ಯಮವನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದಂಥ ಎಲ್ಲಾ ಸಾಮಗ್ರಿಗಳನ್ನು ಒದಗಿಸದೇ ಹೋದರೆ ಅದರಿಂದೇನೂ ಪ್ರಯೋಜನವಾಗುವುತ್ತಿಲ್ಲ. ಅದು ಕೂಡ ಕೇವಲ ಒಂದು ರಾಜಕೀಯದ ಆಘಾಟವೆಂದು ಹೇಳುತ್ತೇನೆ. It is something like a political hypocracy. ದಯಮಾಡಿ ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಪ್ರಿಯೂನಿವರ್ಸಿಟಿ ಲೆವಲ್‌ನಲ್ಲಿ ಮತ್ತು ಸೆಕೆಂಡರಿ ಎಜುಕೇಷನ್ ಲೆವಲ್ಲಿನಲ್ಲಿ ಇವತ್ತು ನಾನಾ ಸಬ್ಜೆಕ್ಟ್‌ಗಳಲ್ಲಿ ಟ್ರೈನಿಂಗ್ ಕೊಡುತ್ತಿದ್ದೀರಿ. ಅದಕ್ಕಾಗಿ ಕೇವಲ ೩೦೦-೫೦೦-೧೦೦೦ ರೂಪಾಯಿಗಳಂತೆ ಫೀಜ್ ಮನಿ ಎಂಬುದಾಗಿ ಕೊಡುತ್ತೀರಿ. ಇದರಲ್ಲಿರುವ ಲೋಪದೋಷಗಳನ್ನು ಕಿತ್ತುಹಾಕುವ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ನಿಜವಾಗಿಯೂ ಬಹಳ ತೊಂದರೆಯಾಗುತ್ತದೆ. ಎಜುಕೇಟೆಡ್ ಅನ್‌ಎಂಪ್ಲಾಯ್‌ಮೆಂಟಿಗೆ ಹೆಚ್ಚಿಗೆ ಅನುಕೂಲಗಳನ್ನು ಉಂಟುಮಾಡುವುದಕ್ಕೆ ಈ ರೀತಿಯಾಗಿ ಮಾಡಿದ್ದೇವೆ ಎಂಬುದಾಗಿ ಹೇಳಿಕೊಂಡಿದ್ದಾರೆ, ಅದನ್ನು ಕೂಡಲೇ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮತ್ತೊಂದು ವಿಷಯ. ವಿದ್ಯಾರ್ಥಿಗಳಲ್ಲಿ ಅಶಿಸ್ತು ಬಗ್ಗೆ ಅವರೇ ಕೌನ್ಸಿಲ್‌ನಲ್ಲಿ ಉತ್ತರ ಹೇಳಿದ್ದಾರೆ. ನಾನು ಪತ್ರಿಕೆಗಳಲ್ಲಿ ಅದನ್ನು ಓದಿದ್ದೇನೆ. ಬೆಂಗಳೂರಿನಲ್ಲಿ ಇಂಜನಿಯರಿಂಗ್ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳ ಮೇಲೆ ಕೈಮಾಡಿದ ಪ್ರಸಂಗದಿಂದ ಅವರನ್ನು ಹೊರಗೆ ಹಾಕಿದರು. ಅದರಿಂದಾಗಿ ಅಲ್ಲಿನ ಹುಡುಗರು ಕಾಲೇಜಿನ ಮೇಲೆ ಚಳುವಳಿ ಮಾಡಿ ಈಗ ಆ ಕಾಲೇಜನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಬಹುಶಃ ಬುದ್ಧಿವಂತರಾಗಿರುವವರು ಆ ರೀತಿ ಪ್ರೋತ್ಸಾಹವನ್ನು ಕೊಡುತ್ತಾ ಇರಲಿಲ್ಲ. ಹುಡುಗರನು ಶಿಕ್ಷೆ ಮಾಡುವುದು ಬೇರೆ. ಆದರೆ ಕೇವಲ ಮಕ್ಕಳನ್ನು ರಾಜಕೀಯವಾಗ ಬೆಳೆಸುವುದು ಯೋಗ್ಯವಲ್ಲ. ಅದು ಗೌರವ ತರತಕ್ಕದ್ದಲ್ಲ.

೪-೦೦ ಪಿ. ಎಂ.

ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ—ನಾಗರೀಕರು ಅನ್ನಿಸಿಕೊಂಡವರು ಯಾರೇ ಆಗಲಿ ಇಂಥಾದನ್ನು ಖಂಡನೆ ಮಾಡದೆ ವಿಧಿಯಿಲ್ಲ. ಈ ದಿವಸ ನಾವೆಲ್ಲರೂ ಈ ವಿದ್ಯಾರ್ಥಿಗಳಲ್ಲಿ ಅಶಿಸ್ತು ಬರಲು ದೋಷ ಎಲ್ಲಿದೆ ಎಂಬುದನ್ನು ಹುಡುಕಬೇಕಾಗಿದೆ. ನಾನು ಎಲ್ಲ ದೋಷಾರೋಪಣೆಗಳನ್ನೂ ಕೇವಲ ಮಕ್ಕಳ ಮೇಲೆ ಹಾಕುವುದು ತಯಾರಿಲ್ಲ. ತಮ್ಮ ಮಕ್ಕಳ ಮೇಲೆ ಈ ದಿವಸ ತಂದೆ ತಾಯಿಗಳಾದವರು ಒಂದು ಸರಿಯಾದ ಹಿಡಿತವನ್ನು ಇಟ್ಟುಕೊಳ್ಳದೆ ಹೋದರೆ ಆ ಮಕ್ಕಳ ವಿದ್ಯಾಭ್ಯಾಸ ಸುಗಮವಾಗಿ ನಡೆಯುವುದಿಲ್ಲ. ಇನ್ನು ವಿದ್ಯಾರ್ಥಿಗಳಲ್ಲಿ ಅಶಿಸ್ತು ಮೂಡುವುದಕ್ಕೆ ಶಿಕ್ಷಕರೂ ಕೂಡ ಜವಾಬ್ದಾರರಾಗುತ್ತಾರೆ. ಇದರ ಹೊಣೆಗಾರಿಕೆ ಅವರ ಮೇಲೂ ಇದೆ. ವಿದ್ಯಾರ್ಥಿಗಳಲ್ಲಿ ಒಂದು ಅತೃಪ್ತಿ ಮೂಡಿಸತಕ್ಕ ಕೆಲವು ಘಟನೆಗಳು ನಡೆದಿವೆ. ಮೂರನೇ ದರ್ಜೆಯಲ್ಲಿ ಪಾಸಾಗುವುದಕ್ಕೂ ಯೋಗ್ಯತೆ ಇಲ್ಲದ ಒಬ್ಬ ವಿದ್ಯಾರ್ಥಿ ಒಂದನೇ ದರ್ಜೆಯಲ್ಲಿಯೂ ಮತ್ತು ಒಂದನೇ ದರ್ಜೆಯಲ್ಲಿ ಪಾಸಾಗತಕ್ಕ ಅರ್ಹತೆಯುಳ್ಳ ಒಬ್ಬ ವಿದ್ಯಾರ್ಥಿ ಮೂರನೇ ದರ್ಜೆಯಲ್ಲಿಯೂ ಪಾಸಾಗಿರತಕ್ಕ ಪ್ರಸಂಗಗಳು ನಡೆದಿವೆ. ಹೀಗೆ ವಿದ್ಯಾಭ್ಯಾಸದಲ್ಲಿ ಅದರಲ್ಲೂ ವಿದ್ಯಾರ್ಥಿಗಳನ್ನು ಉತ್ತೀರ್ಣರನ್ನಾಗಿ ಮಾಡತಕ್ಕ ಬಾಬಿನಲ್ಲೂ ಅಡಲ್ಟ್ರೇಷನ್ ನಡೆದಿದೆ ಎಂದರೆ ತಪ್ಪಾಗಲಾರದು. ಈ ದಿವಸ ನಮ್ಮಲ್ಲಿ ಕಾಲೇಜ್ ಮಟ್ಟದಲ್ಲಿ ಕೋ ಎಜುಕೇಷನ್ ಇದೆ. ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ನಾನು ಇಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಗುರುಶಿಷ್ಯ ಸಂಪರ್ಕವಿರಬೇಕು, ಆದರೆ ಇದಕ್ಕೆ ತದ್ವಿರುದ್ಧವಾದ ಘಟನೆಗಳು ಅಲ್ಲಿ ನಡೆದಿವೆ, ಅಲ್ಲಿ ವಯಸ್ಸಿಗೆ ಬಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳು ಇರುತ್ತಾರೆ. ಅಲ್ಲಿ ಇರತಕ್ಕ ಶಿಕ್ಷಕವರ್ಗ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ. ಅವರು ಜಾರಿದರೆ ಅಲ್ಲಿ ಬಹಳ ದುಷ್ಪರಿಣಾಮಗಳಾಗುತ್ತವೆ. ಹೀಗೆ ವಿದ್ಯಾರ್ಥಿಗಳಲ್ಲಿ ಒಂದು ಅಶಿಸ್ತು ಬೆಳೆಯುವುದಕ್ಕೆ ನಾಂದಿಯಾಗತಕ್ಕ ಅನೇಕ ಬಾಬುಗಳಿವೆ. ಆದುದರಿಂದ ಇನ್ನಾದರೂ ಈ ವಿಚಾರದಲ್ಲಿ ಸರ್ಕಾರದವರು ಒಂದು ಬಿಗಿಯನ್ನು ಇಟ್ಟುಕೊಳ್ಳದಿದ್ದರೆ ಮುಂದೆ ಬಹಳ ದುಷ್ಪರಿಣಾಮಗಳಾಗುವುದಕ್ಕೆ ಕಾರಣವಾಗುವುದರಲ್ಲಿ ಸಂದೇಹವೇ ಇರುವುದಿಲ್ಲ. ನಾನು ಆ ಯೂನಿವರ್ಸಿಟಿ ಈ ಯೂನಿವರ್ಸಿಟಿ ಎಂದು ಹೇಳುತ್ತಿಲ್ಲ, ಯಾವ ಯೂನಿವರ್ಸಿಟಿಯೇ ಆಗಲಿ ವಿದ್ಯಾರ್ಥಿಗಳಲ್ಲಿ ಅಶಿಸ್ತು ಮಾಡುವುದಕ್ಕೆ ಕಾರಣರು ಯಾರು_ಯಾರೆಂದರೆ-ಒಂದು ಶಿಕ್ಷಕರು, ಎರಡನೆಯವರು ತಂದೆತಾಯಿಗಳು ಮತ್ತು ಮೂರನೆಯವರೆಂದರೆ-ರಾಜಕಾರಣಿಗಳು. ಆದರೆ ಈ ದಿಶೆಯಲ್ಲಿ ರಾಜಕಾರಣಿಗಳು ಬಹಳ ಎಚ್ಚರಿಕೆ ವಹಿಸಬೇಕೆಂದು ನನ್ನ ಆಗ್ರಹ. ನಾನು ಯಾವ ಒಂದು ಪಾರ್ಟಿಯನ್ನೂ ಹೆಸರಿಟ್ಟು ಹೇಳುವುದಿಲ್ಲ ರಾಜಕೀಯ ರಂಗದಲ್ಲಿರತಕ್ಕ ಸೋ ಕಾಲ್ಡ್ ಪಾಲಿಟೀಷಿಯನ್ಸ್ ಏನಿದ್ದಾರೆ-ಪೊಲಿಟಿಕಲ್ ಲೀಡರ್ಸ್ ಏನಿದ್ದಾರೆ ಅವರುಗಳು ಈ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕು ಆ ವಿದ್ಯಾರ್ಥಿಗಳು ಒಂದು ಒಳ್ಳೆಯ ಬಳ್ಳಿ ಇದ್ದಹಾಗೆ. ಅವರನ್ನು ನಾವು ಯಾವ ರೀತಿ ಬೆಳೆಸಿದರೆ ಅವು ಆ ರೀತಿ ಬೆಳೆಯುತ್ತವೆ. ಅದಕ್ಕೆ ನಾವು ಕಲ್ಪಿಸತಕ್ಕ ವಾತಾವರಣ ಬಹಳ ಪ್ರಮುಖ್ಯ. ನಾವು ಸರಿಯಾದ ವಾತಾವರಣ ಸೃಷ್ಟಿಸಿದರೆ ಅವರು ತಪ್ಪುದಾರಿಗೆ ಹೋಗುವುದಕೆ ಅವಕಾಶವಿರುವುದಿಲ್ಲ ಪ್ರತ್ಯಕ್ಷವಾಗಿಯೊ ಅಪ್ರಕ್ಷವಾಗಿಯೋ ಅನೇಕ ರಾಜಕಾರಣಿಗಳು ವಿದ್ಯಾರ್ಥಿಗಳನ್ನು ತಪ್ಪು ದಾರಿಗೆಳೆಯುವುದಕ್ಕೆ ಕಾರಣರಾಗಿದ್ದಾರೆ, ಈ ರಾಜಕಾರಣಿಗಳ ಬಾಯಲ್ಲಿ ದೊಡ್ಡ ದೊಡ್ಡ ಫಿಲಾಸಫಿ ಹೇಳಿ ಅವಕಾಶ ಸಿಕ್ಕಿದ ಕೂಡಲೇ ಜನಕ್ಕೆ ಟೋಪಿ ಹಾಕುತ್ತಿದ್ದಾರೆ. ಇದರ ಪರಿಣಾಮ ವಿದ್ಯಾರ್ಥಿಗಳ ಮೇಲೆ ಬೀಳದೇ ಇಲ್ಲ, ಅನೇಕ ರಾಜಕಾರಣಿಗಳು ವಿದ್ಯಾರ್ಥಿಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸುತ್ತಿದ್ದಾರೆ. ಇದು ಆ ವಿದ್ಯಾರ್ಥಿಗಳಿಗೆ ಅರಿವಾಗದೇ ಏನೂ ಇಲ್ಲ. ಅವರಿಗೂ ಗೊತ್ತಾಗುತ್ತದೆ. ನಾವು ಇದನ್ನೆಲ್ಲಾ ತಿಳಿದು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ ಈಗಾಗಲೇ ಇಡಿ ದೇಶ ಪರಿಸ್ಥಿತಿ ತುಟ್ಟತುದಿಗೆ ಹೋಗಿ ನಿಂತಿದೆ. ಮೊನ್ನೆ ನಮ್ಮ ಪ್ರಧಾನಿಯವರು ಆ ಪೂನಾಕ್ಕೆ ಬಂದಿದ್ದಾಗ ಅಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಏನು ಮಾತನಾಡಿದ್ದಾರೆಂಬುದು ಎಲ್ಲರಿಗೂ ತಿಳಿದಂಶವೆ ಆಗಿದೆ, ದೇಶದಲ್ಲಿ ಎಲ್ಲಿ ಏನೆಂದು ಗಲಭೆ ನಡೆದಾಗ್ಯೂ ಅದಕ್ಕೆ ವಿರೋಧಪಕ್ಷಗಳೇ ಕಾರಣವೆಂದು ಅವರ್ು

ಹೇಳಿದ್ದಾರೆ. ಅದರ ಬಗ್ಗೆ ಅದನ್ನು ತಡೆಗಟ್ಟಲು ವಿದ್ಯಾರ್ಥಿಗಳು ಮುಂದೆ ಬರುವಂತೆ ಹೇಳಿದ್ದಾರೆ, ಆದರೆ ವಿದ್ಯಾರ್ಥಿಗಳಿಗೆ ದೇಶದ ಪರಿಸ್ಥಿತಿ ಏನಾಗಿದೆ ಎಂಬೂದು ಅವರಿಗೂ ಅರಿವಾಗಿದೆ ಅವರು ಅಷ್ಟು ಸುಲಭವಾಗಿ ನಾವು ಏನೇ ಹೇಳಲಿ ಒಪ್ಪುವುದಿಲ್ಲ, ಆದರೆ ದೇಶದಲ್ಲಿ ಏನು ಒಳ್ಳೆಯದಾದರೂ ಅದಕ್ಕೆ ಕಾರಣ ಆಳುವ ಪಕ್ಷದ ನೀತಿ ನಿರೂಪಣೆಗಳೇ ಅದಕ್ಕೆ ಕಾರಣ ಎಂದಿದ್ದಾರೆ. ಆದರೆ ಅವರು ಏನು ಹೇಳುತ್ತಿದ್ದಾರೆ ಅದರಂತೆ ಅವರು ನಡೆಯುತ್ತಿದ್ದಾರೆಯೇ ಎಂಬುದನ್ನು ಅವರೇ ನೋಡಿಕೊಳ್ಳಲಿ. ಹೇಳುವುದು ಬಹಳ ಸುಲಭ. ಆದರೆ ನಡೆಯುವುದು ಕಷ್ಟ. ದೇಶದಲ್ಲಿ ಎಂ. ಎ. ಮತ್ತು ಬಿ. ಎ. ಪದವಿಗಳನ್ನು ಪಡೆದು ಹೊರಗೆ ಬರತಕ್ಕ ವಿದ್ಯಾರ್ಥಿಗಳಿಗೆ ಹೇಗೆ ಆ ನಗರವಾಲ ೬೦ ಲಕ್ಷ ರೂಪಾಯಿಗಳನ್ನು ಹೊಡೆದ ಎಂಬುದು ಅರ್ಥವಾಗುವುದಿಲ್ಲವೇ? ಆತ ಏನು ಮಾಡಿದ ಹಾಗೆ ನಾವು ಅನುಕರಣೆ ಏಕೆ ಮಾಡಬಾರದು ಎಂದು ಕೆಲವರ ಮನಸ್ಸಿನಲ್ಲಿ ಇದರ ಪರಿಣಾಮ ಉಂಟಾಗದೆ ಇರದು ಆದುದರಿಂದ ಪೊಲಿಟಿಕಲ್ ಲೀಡರ್ಸ್ ಏನಿದ್ದಾರೆ ಇವರು ಉಪದೇಶ ಕೊಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಅಶಿಸ್ತು ಉಂಟಾಗುವುದಕ್ಕೆ ಕಾರಣವೇನೆಂಬುದನ್ನು ಪ್ರಸ್ತಾಪ ಮಾಡುವಾಗ ನಾವು ಆ ಮೆಂನಗಳೂರಿನ ವಿಚಾರವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಅಲ್ಲಿ ಹೆಣ್ಣು ಮಕ್ಕಳ ಮೇಲೆ ಕೈ ಮಾಡಿದ್ದು ತಪ್ಪು. ಹುಡುಗರು ಈ ದಿವಸ ಚಳುವಳಿ ಹೂಡಿದ್ದಾರೆ ಕಾಲೇಜನ್ನು ಮುಚ್ಚಲಾಗಿದೆ. ಇದಕ್ಕೆಲ್ಲಾ ಕಾರಣ ಅಲ್ಲಿನ ವಿದ್ಯಾರ್ಥಿಗಳು ಮತ್ತು ಟೀಚರ್ಸ್ ಮತ್ತು ಮ್ಯಾನೇಜ್‌ಮೆಂಟಿನವರು ಈ ಮೂವರು ಕಾರಣರು. ಅಲ್ಲಿನ ಅಸಮಾಧಾನ, ಅಶಾಂತಿ, ಮತು ಅತೃಪ್ತಿ ಇವುಗಳಿಗೆ ಕಾರಣವೇನು ಎಂಬುದನ್ನು ಕಂಡು ಹಿಡಿಯುವುದಕ್ಕೆ ನನ್ನ ಒಂದು ಸಲಹೆ ಏನೆಂದರೆ ಒಂದು ಟ್ರೈಬುನಲ್ಲನ್ನು ನೇಮಿಸಬೇಕು ಎಂದು. ಇದನ್ನು ತಜ್ಞರು ಪರಿಶೀಲನೆ ಮಾಡಲಿ ಎಂದು ಹೇಳುತ್ತೇನೆ. ಈ ಟ್ರೈಬುನಲ್‌ನಲ್ಲಿ ಒಬ್ಬ ಉಚ್ಚಮಟ್ಟದ ನ್ಯಾಯಾಧೀಶರು ಇರಬೇಕು.

ಮತ್ತೊಂದು ಈ ದಿವಸ ಪ್ರತಿಯೊಂದು ಕಾಲೇಜಿನಲ್ಲೂ ಒಂದೊಂದು ಯೂನಿಯನ್ನಿದೆ, ಒಂದೊಂದು ಯೂನಿಯನ್ನಿಗೂ ಒಬ್ಬೊಬ್ಬ ಪ್ರೆಸಿಡೆಂಟ್ ಇರುವರು. ಆ ಪ್ರೆಸಿಡೆಂಟರುಗಳು ಓಟು ಮಾಡುವುದಕ್ಕೆ ಅವಕಾಶಮಾಡಿ ಅವರಿಗೆ ಟ್ರಿಬ್ಯೂನಲ್‌ನಲ್ಲಿ ಪ್ರಾತಿನಿಧ್ಯ ಕೊಡಲು ಸಾಧ್ಯವೆ ಎಂಬುದನ್ನು ಯೋಚನೆಮಾಡಿ ಈ ಟ್ರಿಬ್ಯೂನಲ್‌ಗೆ ಒಬ್ಬ ಸೀನಿಯರ್ ಮೋಸ್ಟ್ ಜಡ್ಜ್ ಅಧ್ಯಕ್ಷರಾಗಬೇಕು, ಅವರು ಪ್ರಿಸ್ಕೈಡ್ ಮಾಡಬೇಕು. ಹೀಗೆ ಮಾಡುವುದು ಸರಿಯೆಂದು ಎಲ್ಲರೂ ಒಪ್ಪಿದರೆ ಇಂಥ ಒಂದು ಟ್ರಿಬ್ಯೂನಲ್ ರಚಿಸಬಹುದು ವಿದ್ಯಾರ್ಥಿಗಳಿಗೆ ಅಲ್ಲಿ ಪ್ರಾತಿನಿಧ್ಯವಿರಬೇಕು. ಇದರ ಬಗ್ಗೆ ಯೋಚನೆ ಮಾಡಿ ಒಂದು ನಿರ್ಣಯ ತೆಗೆದುಕೊಳ್ಳಿ. ಮಕ್ಕಳ ಬಗ್ಗೆ ಸರಕಾರ ಒಂದು ನಿರ್ಣಯ ಮಾಡಿದಾಗ ಅವರು ಅಸಮಾಧಾನಪಡುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಈ ಸಲಹೆ ಮಾಡುತ್ತಿದ್ದೇನೆ.

ಇನ್ನೊಂದು, ಇವತ್ತು ಪಠ್ಯ ಪುಸ್ತಕಗಳನ್ನು ನ್ಯಾಷನಲೈಜ್ ಮಾಡಿದ್ದಾರೆ. ಇದರಲ್ಲಿ ಒಂದು ದೊಡ್ಡ ತಪ್ಪು ಮಾಡುತ್ತಿರುವರೇ ಎಂಬ ಭಾವನೆ ಬಂದಿದೆ ಇವತ್ತು ಒಂದು ರಾಷ್ಟ್ರೀಯ ಭಾವನೆ ಬೆಳೆಸುವುದಕ್ಕೆ, ಹೆಚ್ಚು ಮಾರಲ್ ಅಂಡ್ ಸ್ಪಿರಿಚುಯಲ್ ಭಾವನೆ ಉಂಟಾಗಲು ಸಹಾಯವಾಗುವಂಥ ಅದಕ್ಕನುಗುಣವಾದ ಪಠ್ಯ ಪುಸ್ತಕಗಳು ಹೊರಬರುತ್ತಿವೆಯೋ ಎಂದು ಕೇಳಬೇಕಾಗಿದೆ. ಇದು ಅತ್ಯಾವಶ್ಯಕ. ರಾಷ್ಟ್ರೀಯ ಮನೋಭಾವನೆ ಬೆಳೆಸುವುದಕ್ಕೆ ಭಾವೈಕ್ಯತೆ ಬೆಳೆಸುವುದಕ್ಕೆ ಈ ದೆಶೆಯಲ್ಲಿ ನಮ್ಮ ಪಠ್ಯ ಪುಸ್ತಕಗಳು ತಕ್ಕ ಎಲ್ಲಾ ಸಾಧನೆಗಳನ್ನೂ ಜಾರಿಯಲ್ಲಿ ತಂದಿವೆಯೋ ಎಂದು ಕೇಳಬೇಕಾಗುತ್ತದೆ. ನ್ಯಾಷನಲೈಜೇಷನ್ ಮಾಡಿದ ತಕ್ಷಣ ಈ ಸಮಸ್ಯೆ ಬಗೆಹರಿಯುವುದಿಲ್ಲ. ದೊಡ್ಡ ರ್‍ಯಾಕೆಟ್ ಇತ್ತು ಎಂದು ಅಪಾದನೆ ಬಂದು ನ್ಯಾಷನಲೈಜ್ ಮಾಡಿರಬಹುದು. ಈ ದೆಶೆಯಲ್ಲಿ ಹೆಚ್ಚು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಿಚ್ಛಿಸುತ್ತೇನೆ.

ಮತ್ತೊಂದು, ಕೆಲವು ಪುಸ್ತಕಗಳನ್ನು ಕೊಳ್ಳುವಾಗ ಸರಕಾರ ಕೂಡ ಎಡವಿ ಬೀಳುತ್ತಿದೆ ಎಂದು ಹೇಳಬೇಕಾಗುತ್ತದೆ. ಬಲ್ಕ್ ಪರ್ಚೆಸಿಗೆ ಹೋದ ವರ್ಷ ಅಂದರೆ ೧೯೬೩–೬೪ ರಲ್ಲಿ ಸರಕಾರ ೩೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆಂದು ಕಾಣುತ್ತದೆ. ಸ್ಟೇಟ್ ಲೈಬ್ರರಿಗೆ ೨೧ ಲಕ್ಷ ರೂಪಾಯಿಗಳನ್ನು ಕೊಳ್ಳಲು ಕೊಟ್ಟಿತು. ಒಂದು ಸಾರಿ ಬಹಳ ದೂರ ಹೋಗಿ ನಾನು ಮಾತನಾಡಿದೆ. ಸ್ಟೇಟ್ ಲೈಬ್ರರಿ ಹೇಗೆ ಕೆಲಸಮಾಡುತ್ತದೆ ಎಂದು ಹೇಳಿದ್ದೆ. ಅಲ್ಲಿರುವ ವ್ಯಕ್ತಿಯ ಮೇಲೆ ನನಗೆ ದ್ವೇಷವಿಲ್ಲ. ಆದರೆ ಅನ್ಯಾಯವಾಗುತ್ತಿದ್ದರೆ ಅದನ್ನು ತಪ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನನಗೆ ಅಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅದು ಮುಖ್ಯವಲ್ಲ. ರಾಜಕಾರಣಿಯ ಬಗ್ಗೆ ಅಭಿನಂದನಾಗ್ರಂಥ ಬರೆದಿದ್ದಾರೆ, ೩೦ ರೂಪಾಯಿ ಕೊಟ್ಟು ಅದನ್ನು ಲೈಬ್ರರಿ ಕೊಳ್ಳುತ್ತಿದೆ, ಎಷ್ಟು ಕಾಪಿ ಕೊಂಡಿದ್ದಾರೆಂಬುದನ್ನು ಹೇಳಬೇಕು ಅದಕ್ಕೆ ಎಂಟು ಹತ್ತು ರೂಪಾಯಿ ಪ್ರಿಂಟಿಂಗ್ ಛಾರ್ಜು ಆಗಬಹುದು. ನಾನು ಆ ಪುಸ್ತಕ ನೋಡಿದೆ, ಅದಕ್ಕೆ ೩೦ ರೂಪಾಯಿ ಛಾರ್ಜು ಮಾಡುವರು. ಒಂದೊಂದು ಸಲ ಒಳ್ಳೆಯ ಕೆಲಸ ಮಾಡಿದ ಬರಹಗಾರರಿಗೆ ಉತ್ತೇಜನ ಸಿಕ್ಕುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಏನು ಅಭಿನಂದನಾ ಗ್ರಂಥ ಹೇಳಿ.

ಶ್ರೀ ಎಚ್. ಡಿ ದೇವೇಗೌಡ —ನೀವು ಮಾಡಿಲ್ಲ, ನೀವು ಮುಂದೆ ಬೀಳಬೇಡಿ, ಹಾಗೆ ಬೀಳುವುದಿಲ್ಲವೆಂಬ ನಂಬಿಕೆಯಿಂದೆ. ರಾಜಕಾರಣಿಯ ಹೆಸರಿನಲ್ಲಿ ಅಭಿನಂದನಾ ಗ್ರಂಥ ಎಂದಿಟ್ಟುಕೊಳ್ಳಿ. ಇದನ್ನು ಉದಾಹರಣೆಗೆ ಮಾತ್ರ ಹೇಳಿದೆ. ತಪಶೀಲು ಬೇಕಾಗಿಲ್ಲ ಭಾರತ ದರ್ಶನ ಎಂಬ ಪುಸ್ತಕ ಪ್ರಕಟಮಾಡಿ ೫ ವಾಲ್ಯೂಂ ಪಬ್ಲಿಷ್ ಮಾಡಿದ್ದಾರೆ ಬಹುಶಃ ಅದಕ್ಕೆ ೮-೧೦ ರೂಪಾಯಿ ಬೆಲೆಯಿರಬೇಕು. ಒಳ್ಳೆಯ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ವಕಾಲತ್ತು ಬೇಕಾಗಿಲ್ಲ, ಉದಾಹರಣೆಗೆ ಹೇಳಿದೆ ಬಹಳ ಮುಖ್ಯವಾದ ಬರೆಹಗಾರರ ಪ್ರತಿಗಳಿಗೆ ಬೆಲೆ ಕೊಡಬೇಕು, ಮನ್ನಣೆ ಕೊಡಬೇಕು. ಬಹುಶಃ ೩೦ ವಾಲ್ಯೂಂ ಮಾಡಬೇಕೆಂದು ನಿರ್ಣಯವಾಗಿದೆ. ಸರಕಾರ ನಿರ್ಣಯ ತೆಗೆದುಕೊಳ್ಳಲು ಬಹುಶಃ ಸಂಬಂಧಪಟ್ಟ ಅಧಿಕಾರಿ ಶಿಫಾರಸು ಮಾಡಿದ್ದಾರೆ. ಸರಕಾರ ನಿರ್ಣಯಮಾಡುವಾಗ ಮುಖ್ಯವಾಗಿ ಒಳ್ಳೆಯ ಗುಣಮೌಲ್ಯವಿರುವ, ಸಮಾಜದ ಮೇಲೆ ಉತ್ತಮ ಪ್ರಭಾವ ಬೀರುವ, ಸಂಸ್ಕೃತಿ ಪರಂಪರೆಯನ್ನು ಎತ್ತಿಹಿಡಿಯುವ ಒಳ್ಳೆಯ ಪ್ರಕಾಶಕರ ಗ್ರಂಥಗಳಿಗೆ ಬೆಲೆ ಕೊಡಬೇಕು ಎಂದು ತಿಳಿಸಲಿಷ್ಟಪಡುತ್ತೇನೆ ಏಕೆಂದರೆ ಲೈಬ್ರರಿ ತೆರಿಗೆಗೆ ಹಳ್ಳಿಯವರೂ ದಂಡ ತೆರುವರು. ಬಹುಶಃ ಬೆಂಗಳೂರಿನಲ್ಲಿ ಪಬ್ಲಿಕ್ ಲೈಬ್ರರಿಯಿದ್ದರೆ ಸಾಲದು. ಅದರಿಂದ ಸಮಾಧಾನವಾಗುವುದಿಲ್ಲ. ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ, ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಲೈಬ್ರರಿಗಳನ್ನು ತೆರೆಯಬೇಕು, ಅದರ ಫಲ ಎಲ್ಲಾ ಕಡೆಗೂ ಸಿಕ್ಕಬೇಕು. ಈ ದಿಶೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಇಂದು ಸ್ಟೇಟ್ ಲೈಬ್ರರಿಯಿದೆ, ಅದರ ವಿಚಾರ ಕೋರ್ಟಿನವರೆಗೆ ಹೋಗಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರಿ ? ಸ್ಟೇಟ್ ಲೈಬ್ರರಿ ಕಾರ್ಯಕ್ರಮದ ಬಗ್ಗೆ ಸಾಕಾದಷ್ಟು ಆಪಾದನೆಯಿದೆ, ಸಂಬಂಧಪಟ್ಟ ಡಾಕ್ಯುಮೆಂಟ್ಸ್ ಸುಟ್ಟು ಹಾಕಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದು ಜನರು ಅದನ್ನು ಓದಿದ್ದಾರೆ. ೧೯೭೩ನೇ ಫೆಬ್ರುವರಿ ಅಥವಾ ಮಾರ್ಚಿಯಲ್ಲಿ ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಸುಟ್ಟರೆಂದು ಪ್ರಕಟವಾಗಿದೆ. ಅದೇನೇ ಇರಲಿ ಇವತ್ತು ಬಿಗಿಯಾದ ಕ್ರಮ ತೆಗೆದುಕೊಂಡು ಅಲ್ಲಿನ ಅಕ್ರಮ ಸರಿಪಡಿಸಬೇಕು. ಅಲ್ಲಿನ ಪೊಸಿಷನ್ ಭರ್ತಿಮಾಡಲು ನಿರ್ಣಯ ತೆಗೆದುಕೊಳ್ಳುವಾಗ ಸರಕಾರದವರು ಹಿಂದುಮುಂದು ನೋಡಿದರು ಎಂದು ಗೊತ್ತಾಗಿದೆ. ಟೆಂಪೊರರಿ ನಿರ್ಣಯ ಮಾಡಿರುವುದಾಗಿ ಸರಕಾರ ಹೇಳಿರುವುದು ಇದರ ಬಗ್ಗೆ ಅಡ್ವರ್ಟೈಜ್ ಮಾಡಿ ಭರ್ತಿ ಮಾಡುವುದಾಗಿ ತಿಳಿಸಿದ್ದಾರೆ ಈ ದಿಶೆಯಲ್ಲಿ ಮುಂದುವರೆದಿಲ್ಲವೆಂದು ಹೇಳಿದರೆ ಬಹುಶಃ ಅತಿ ಜರೂರು ಕ್ರಮ ತೆಗೆದುಕೊಳ್ಳುವರು ಎಂಬ ವಿಶ್ವಾಸವನ್ನಿಟ್ಟರೆ ತಪ್ಪಲ್ಲ ಎಂಬ ಭಾವನೆ ಇದೆ.

ಇನ್ನೊಂದು, ಇವತ್ತು ಪ್ರೈವೇಟ್ ಟ್ಯೂಷನ್ ಕೊಡುವ ಟ್ಯುಟೋರಿಯಲ್ ಕಾಲೇಜುಗಳಿವೆ, ಇದಾದ ಮೇಲೆ ೧೦ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ತಂದು ಇಂಥ ಪ್ರಶ್ನೆಗಳು ಬರಬಹುದು, ಅವನ್ನು ಓದಿದರೆ ಸಾಕು ಎಂಬ ಪ್ರಚಾರ ಬೇರೆ ನಡೆಯುತ್ತಿದೆ. ಪ್ರತಿಯೊಂದು ಮೂಲೆಯಲ್ಲೂ ಟ್ಯುಟೋರಿಯಲ್ ಕಾಲೇಜುಗಳು ನಡೆಯುತ್ತಿವೆ. ಇದರ ಬಗ್ಗೆ ಇತಿಶ್ರೀ ಹಾಡುವುದು ಸೂಕ್ತವಾಗಬಹುದು. ಪಠ್ಯಪುಸ್ತಕಗಳನ್ನು ಓದಿದರೆ ಮಾತ್ರ ಸಂಪೂರ್ಣ ಜ್ಞಾನವು ದೊರೆಯುವುದು, ಒಳ್ಳೆಯ ದಾಗುವುದು. ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡರೆ ಒಳ್ಳೆಯದೆಂದು ಹೇಳುತ್ತಿದ್ದೇನೆ.

ತಾಲ್ಲೂಕು ಬೋರ್ಡ್‌ಗಳನ್ನು ರದ್ದು ಮಾಡಬೇಕೆಂದು ಎಷ್ಟೇ ಒತ್ತಡ ಬಂದರೂ ಬಿಗಿಮುಷ್ಟಿ ಹಿಡಿದು ಪ್ರಜಾತಂತ್ರದ ಮೌಲ್ಯಗಳಿಗೆ ಬೆಲೆ ಕೊಡಬೇಕೆಂಬ ನಿಲುವನ್ನು ತೆಗೆದುಕೊಂಡವರು ಶ್ರೀ ಮಲ್ಲಿಕಾರ್ಜುನಸ್ವಾಮಿಗಳು. ಯಾರೇ ಆಗಲಿ ಒಳ್ಳೆಯ ಕೆಲಸವನ್ನು ಮಾಡಿದಾಗ ಅವರ ಬಗ್ಗೆ ಒಳ್ಳೆಯ ಮಾತನ್ನು ಹೇಳುವುದಕ್ಕೆ ಹಿಂದು ಮುಂದು ನೋಡಬೇಕಾಗಿಲ್ಲ. ಒಳ್ಳೆಯ ದಿಸೆಯಲ್ಲಿ ಕೆಲಸ ಮಾಡಬೇಕೆಂಬ ಉತ್ಸುಕತೆಯಿಂದ ಮಾನ್ಯ ಮಂತ್ರಿಗಳು ಹೊರಟಿದ್ದಾರೆ. ಅದಕ್ಕೆ ಯಾವುದೇ ಅಡ್ಡಿ ಆತಂಕವನ್ನು ನಾವು ಯಾರೂ ತರುವುದಿಲ್ಲ. ಬೇರೆ ಕಡೆಯಿಂದ ಬರುವ ಅಡ್ಡಿ ಆತಂಕಗಳನ್ನು ಮೆಟ್ಟಿ ನಿಲ್ಲತಕ್ಕ ಶಕ್ತಿ ಮಾನ್ಯ ಮಂತ್ರಿಗಳಿಗೆ ಇದೆ ಎಂದು ನನ್ನ ಭಾವನೆ. ಆ ದಿಸೆಯಲ್ಲಿ ಕೆಲಸ ಮಾಡಬೇಕೆಂದು ತಿಳಿಸುತ್ತೇನೆ.

ಎಜುಕೇಷನ್ ಬಿಲ್ ತರುವುದಾಗಿ ಹಿಂದಿನ ಮಂತ್ರಿಗಳು ಹೇಳಿದರು. ಅದು ಯಾವ ಹಂತದಲ್ಲಿದೆ ಎನ್ನುವುದು ಗೊತ್ತಿಲ್ಲ. ಇದರಿಂದ ದೊಡ್ಡ ಅನಾಹುತವಾಗಿದೆ. ಎಜುಕೇಷನ್ ಬಿಲ್ ತರುವುದರ ಬಗ್ಗೆ ಸರ್ಕಾರ ಅತಿ ಜರೂರಾಗಿ, ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಅನೇಕವಿವೆ. ಬೆಂಗಳೂರಿನಲ್ಲಿರುವ ಸಂಸ್ಥೆಗಳನ್ನು ನೋಡಿದರೆ ಹೇಸಿಗೆಯಾಗುತ್ತದೆ ಅವುಗಳ ಮೇಲೆ ಹಿಡಿತವಿಲ್ಲ. ಏಕ ಸದಸ್ಯ ಆಯೋಗವನ್ನು ಮಾಡಿದರು. ಆ ರಿಪೋರ್ಟ್ ಏನಾಯಿತೋ ಗೊತ್ತಿಲ್ಲ, ಶ್ರೀ ಬದರೀನಾರಾಯಣ್ ಅವರು ಭಾರಿ ಓಡಾಡಿದರು, ಕೆಲವು ಪ್ರಚಾರ ಮಾಡಿದರು. ಅದು ಅಲ್ಲಿಗೇ ನಿಂತು ಹೋಯಿತು. ಖಾಸಗಿ ವಿದ್ಯಾ ಸಂಸ್ಥೆಗಳನ್ನು ನಡೆಸುವುದು ಒಂದು ಉದ್ಯೋಗವಾಗಿದೆ. ಇದು ಎಷ್ಟು ದೂರ ಹೋಗಿದೆ ಎಂದರೆ ಈಗಲೂ ೭೦-೮೦ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಹಿಂದಿನ ಸರ್ಕಾರದವರು ಚೆಕ್ ಪದ್ಧತಿಯನ್ನು ಜಾರಿಗೆ ತಂದರು. ಆದರೆ ಅದು ಎಷ್ಟರಮಟ್ಟಿಗೆ

ಕಾರ್ಯರೂಪಕ್ಕೆ ಬಂದಿದೆ ಎಂದು ನಾನು ಹೇಳಬೇಕಾಗಿದೆ. ಕೆಲವು ಸಂಸ್ಥೆಗಳಲ್ಲಿ ನಾಲ್ಕೈದು ತಿಂಗಳಾದರೂ ಸಂಬಳವನ್ನು ಕೊಟ್ಟಿಲ್ಲ ಇಂಥ ಘಟನೆಗಳನ್ನು ಸಹಸ್ರಾರು ಹೇಳಬಹುದು. ಇದರ ಬಗ್ಗೆ ಏನಾದರೂ ನಿರ್ಣಯ ಮಾಡಬೇಕಾಗುತ್ತದೆ. ಎಜುಕೇಷನ್ ಬಿಲ್ ಜಾಗ್ರತೆಯಾಗಿ ತಂದು ವಿದ್ಯಾ ಇಲಾಖೆಯಲ್ಲಿ ಆಗುತ್ತಿರುವ ಅಕ್ರಮಗಳನ್ನು ನಿಲ್ಲಿಸಬೇಕು. ಈ ಇಲಾಖೆಯಲ್ಲಿ ಏನು ಅವ್ಯವಹಾರಗಳು ನಡೆಯುತ್ತಿವೆ ಎನ್ನುವ ಭಾವನೆ ಜನರಲ್ಲಿದೆ ಅದಕ್ಕೆ ಇತಿಶ್ರೀ ಹಾಡಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆ, ಸೇಲ್ಸ್‌ಟ್ಯಾಕ್ಸ್ ಇಲಾಖೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಖಾಸಗಿ ವಿದ್ಯಾ ಸಂಸ್ಥೆಗಳನ್ನು ನಡೆಸುವವರು ಫಿಯಟ್ ಕಾರುಗಳನ್ನು, ಅಂಬಾಸಡರ್ ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಕೆಲವರು ಫಾರಿನ್ ಕಾರನ್ನು ಕೂಡ ಇಟ್ಟುಕೊಂಡಿದ್ದಾರೆ. ಮೈಸೂರಿನಲ್ಲಿರುವ ರಾಯಲ್ ಸ್ಕೂಲ್ ನಡೆಸುವವರು ದೊಡ್ಡದೊಡ್ಡ ರಾಜಕಾರಣಿಗಳನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡಿದ್ದಾರೆಂದು ಕೇಳಿದ್ದೇನೆ. ಆದ್ದರಿಂದ ಜಾಗ್ರತೆಯಾಗಿ ಎಜುಕೇಷನ್ ಬಿಲ್ ತಂದು ಇಂಥದಕ್ಕೆ ಮದ್ದು ಹಾಕಬೇಕಾದ್ದು ಸರ್ಕಾರದ ಕರ್ತವ್ಯ. ಇದೇ ಅಧಿವೇಶನದಲ್ಲಿಯೇ ಲೋಕಪಾಲ ಲೋಕ ಆಯುಕ್ತ ಬಿಲ್ಲನ್ನು ತರುವುದಾಗಿ ಹೇಳಿದಂತೆ ಅದೇ ಧಾಟಿಯಲ್ಲಿ ಎಜುಕೇಷನ್ ಬಿಲ್ ಸಹ ಜರೂರಾಗಿ ತರುವುದು ಅವಶ್ಯಕ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇದು ಬಹಳ ಮಹತ್ತರವಾದ ಇಲಾಖೆ. ಮಕ್ಕಳ ಭವಿಷ್ಯ, ಸಮಾಜದ ಭವಿಷ್ಯ ಅದರ ಮೇಲೆ ನಿಂತಿದೆ ಎಂದರೆ ತಪ್ಪಾಗಲಾರದು. ಒಬ್ಬ ಉಪಾಧ್ಯಾಯ ತಪ್ಪಿತಸ್ಥನಾದರೆ, ಸರಿಯಾದ ಕ್ರಮದಲ್ಲಿ ಪಾಠವನ್ನು ಹೇಳದೆ ಹೋದರೆ ಎಷ್ಟು ಅನಾಹುತವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಒಬ್ಬ ಉಪಾಧ್ಯಾಯ ಒಂದು ವರ್ಷ ೩೦-೪೦ ಹುಡುಗರಿಗೆ ಪಾಠವನ್ನು ಹೇಳುತ್ತಾನೆ. ಅವನ ೩೦ ವರ್ಷದ ಸೇವಾವಧಿಯಲ್ಲಿ ೧೨೦೦ ಮಕ್ಕಳ ಹೊಣೆ ಪ್ರಾಥಮಿಕ ಶಾಲೆ ಒಂದರಲ್ಲಿ ಹೊರಬೇಕಾಗುತ್ತದೆ. ಈ ಹಂತದಲ್ಲಿ ತಪ್ಪುಗಳನ್ನು ತಿದ್ದುವುದಕ್ಕೆ, ಸರಿಯಾಗಿ ಮಾರ್ಗದರ್ಶನ ಮಾಡುವುದಕ್ಕೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ

ಅನೇಕ ರೀತಿಯ ಅಕ್ರಮಗಳು ತುಂಬಿ ತುಳುಕುತ್ತಿರುವ ಕಾಲದಲ್ಲಿ ವಿದ್ಯಾ ಇಲಾಖೆಯನ್ನು ಸುಧಾರಿಸುವುದಕ್ಕೆ ಶಕ್ತಿಮೀರಿ ಹೋರಾಟ ಮಾಡಬೇಕು. ಅಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡತಕ್ಕದು ಅವಶ್ಯಕ. ವಿದ್ಯಾ ರಂಗದಲ್ಲಿ ನ್ಯಾಷನಲ್ ಪಾಲಿಸಿ ಇಲ್ಲದೆ ಇರತಕ್ಕ ಪರಿಸ್ಥಿತಿಯನ್ನು ಸಮರ್ಥ ರೀತಿಯಲ್ಲಿ ಸಂಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಭಾವನೆಯನ್ನು ವ್ಯಕ್ತಪಡಿಸಿ, ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸಭೆಯ ಮುಂದೆ ಮಂಡಿಸಿರುವ ವಿದ್ಯಾಮಂತ್ರಿಗಳ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ಈ ಇಲಾಖೆಯ ಬಗ್ಗೆ ಕೆಲವಾರು ವಿಷಯಗಳನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

ಸಭೆಯ ಮುಂದೆ ಇಟ್ಟಿರುವ ಡಿಪಾರ್ಟ್‌ಮೆಂಟಿನ ರಿಪೋರ್ಟ್ ಪ್ರಕಾರ ನಮ್ಮ ರಾಜ್ಯದಲ್ಲಿ ೧೧೯೩ ನರ್ಸರಿ ಶಾಲೆಗಳಿವೆ ಎಂದು ತಿಳಿಸಿದ್ದಾರೆ. ಇವೆಲ್ಲ ಪ್ರೈವೇಟ್ ಶಾಲೆಗಳಾಗಿವೆ ನಮ್ಮ ಸರ್ಕಾರದವರು ಇವುಗಳಿಗೆ ೫೦ ಪರ್ಸೆಂಟ್ ಗ್ರಾಂಟ್ ಕೊಡುತ್ತಿದ್ದಾರೆ. ನರ್ಸರಿ ಶಾಲೆಗಳಲ್ಲಿ ಶೇಕಡ ೯೯ರಷ್ಟು ದೊಡ್ಡದೊಡ್ಡ ಪಟ್ಟಣಗಳಲ್ಲಿರುತ್ತವೆ. ಹಳ್ಳಿಗಳಲ್ಲಿ ಪ್ರೀ ಪ್ರೈಮರಿ ವಿದ್ಯಾಭ್ಯಾಸವನ್ನು ಪೂರಾ ನಿರ್ಲಕ್ಷಿಸಿದ್ದೇವೆ. ಪ್ರತಿ ಜಿಲ್ಲೆಗೂ ಎರಡು ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ಇಡೀ ಜಿಲ್ಲೆಯಲ್ಲಿ ನರ್ಸರಿ ಶಾಲೆಗಳನ್ನು ನಡೆಸಬೇಕು ಎಂದರೆ ಸಾಧ್ಯವೇ ಎನ್ನುವುದನ್ನು ನಾವೇ ಊಹಿಸಬಹುದು. ಮುಂದಿನ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಇದರ ಬಗೆ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ ಗ್ರಾಮಾಂತರದಲ್ಲಿರುವ ಮಕ್ಕಳಿಗೆ ನರ್ಸರಿ ವಿದ್ಯಾಭ್ಯಾಸ ಸಿಕ್ಕುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

"we plan and think quite a lot and spend crores and crores of rupees towards higher education while completely neglecting the most important years of a child. This period between 3 and 5 is the most sensitive period during which the achievement of the child is miraculous and marvellous. Psychologists say that grown-ups take 50 years to achieve what a child achieved in his just five years. A child is our valuable asset and it is our utmost duty to see that he is properly guided during this delicate period." ಎಂದು ಈ ರಿಪೋರ್ಟಿನಲ್ಲಿ

ಹೇಳಿದ್ದಾರೆ. ಪ್ರಾಥಮಿಕ ಶಾಲೆಗಳಿರುವ ಎಲ್ಲ ಗ್ರಾಮಗಳಲ್ಲಿಯೂ ಸಹ ಎಲ್ಲ ಸಾಮಾನ್ಯರ ಮಕ್ಕಳಿಗೂ ಶಿಶು ಶಿಕ್ಷಣ ದೊರೆಯುವಂತೆ ನರ್ಸರಿ ಶಾಲೆಗಳನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಸರ್ಕಾರ ರೂಪಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ವಿಚಾರ ಹೇಳುವುದಾದರೆ ಒಬ್ಬರೇ ಉಪಾಧ್ಯಾಯರಿರುವ ಅನೇಕ ಶಾಲೆಗಳಿವೆ. ಅಲ್ಲಿ ಸರಿಯಾದ ಅನುಕೂಲಗಳಿರುವುದಿಲ್ಲ. ಎಷ್ಟೋ ಸಲ ಇಂಥ ಶಾಲೆಗಳಿಗೆ ಹೋದಾಗ ಬಾಗಿಲು ಹಾಕಿರುತ್ತಾರೆ. ೧೫-೨೦ ದಿವಸವಾದರೂ ಬಾಗಿಲು ತೆಗೆಯುವುದಿಲ್ಲ ಉಪಾಧ್ಯಾಯರಿಗೆ ಮೈಯಲ್ಲಿ ಚೆನ್ನಾಗಿಲ್ಲವೆಂದರೆ ಬೇರೆ ಏನಾದರೂ ತೊಂದರೆ ಇದ್ದರೆ ಶಾಲೆಯನ್ನು ಮುಚ್ಚುವ ಸಂದರ್ಭ ಬರುತ್ತದೆ. ಹಾಫ್ ಮಿಲಿಯನ್ ಜಾಬ್ ರಿಸರ್ವ್ ಮಾಡಿ ಸ್ಟೈಪೆಂಡರಿ ಬೇಸಿಸ್ ಮೇಲೆ ಉಪಾಧ್ಯಾಯರನ್ನು ತೆಗೆದುಕೊಂಡಿರುತ್ತಾರೆ. ಸಿಂಗಲ್ ಟೀಚರ್ ಸ್ಕೂಲುಗಳಿಗೆ, ಒಬ್ಬೊಬ್ಬರೇ ಉಪಾಧ್ಯಾಯರಿರುವ ಕಡೆಗೆ ಸ್ಟೈಪೆಂಡರಿ ಬೇಸಿಸ್ ಮೇಲೆ ಇರುವವರನ್ನು ಅಲ್ಲಿರುವ ಉಪಾಧ್ಯಾಯರ ಜೊತೆಗೆ ನೇಮಕ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

4-30 P. M.

ಇನ್ನು ಸ್ಕೂಲು ಬಿಲ್ಡಿಂಗ್ ವಿಚಾರವಾಗಿ ಹೇಳಬೇಕಾದರೆ ರೂರಲ್ ಏರಿಯಾಗಳಲ್ಲಿರುವ ಪಂಚಾಯಿತಿ ಹಾಗೂ ತಾಲ್ಲೂಕು ಬೋರ್ಡುಗಳವರ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕಾದರೆ ಅವರುಗಳು ತಮ್ಮ ಪಾಲಿನ ವಂತಿಗೆಯನ್ನು ಕೊಟ್ಟರೆ ಇದನ್ನು ಮಾಡಲು ಕಷ್ಟವಾಗುವುದಿಲ್ಲ. ಅರ್ಬನ್ ಏರಿಯಾ ಗಳಲ್ಲಿ ಹೇಗೋ ಮಾಡುತ್ತಾರೆ. ಆದರೆ ರೂರಲ್ ಏರಿಯಾಗಳಲ್ಲಿರುವ ಶಾಲೆಗಳನ್ನು ನೋಡುವುದಾದರೆ ಅವುಗಳ ಸ್ಥಿತಿ ಬಹು ಅವಮಾನಕರವಾಗಿದೆ ಎಂದು ಇಲ್ಲಿ ನಾನು ಹೇಳಲು ಇಚ್ಛೆಪಡುತ್ತೇನೆ. ಮುನಿಸಿ ಪಾಲಿಟಿಯವರ ಆಬ್ಲಿಗೇಟರಿ ಡ್ಯೂಟಿ ಕೂಡ ಇದರಲ್ಲಿದೆ. ಮುನಿಸಿಪಾಲಿಟಿಯವರು ಮುಫತ್ತಾಗಿ ಶಾಲಾ ಕಟ್ಟಡಗಳಿಗೆ ಜಾಗವನ್ನು ಒದಗಿಸಿಕೊಡಬೇಕು. ಇವರಲ್ಲಿ ಸರ್ಕಾರದವರು ವಿದ್ಯಾ ಇಲಾಖೆಯಿಂದ ಶೇಕಡಾ ಐವತ್ತರಷ್ಟು ಮತ್ತು ಮುನಿಸಿಪಾಲಿಟಿಯವರಿಂದ ಶೇಕಡಾ ಐವತ್ತರಷ್ಟು ಅವರಕಾಂಟ್ರಿಬ್ಯೂಷನ್ ಕೊಟ್ಟರೆ ಇದರ ಕಾರ್ಯಕ್ರಮವನ್ನು ಮಾಡಲು ಅನುಕೂಲವಾಗುತ್ತದೆ. ಇದರ ಕಡೆಗೆ ಶೀಘ್ರ ಗಮನ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ನೋಡಿರುವಂತೆ ಎಷ್ಟೋ ಕಡೆ ಇರುವ ಸ್ಕೂಲುಗಳಲ್ಲಿ ಸ್ಯಾನಿಟರಿ ಫೆಸಿಲಿಟೀಸ್‌ಗಳಿಲ್ಲ. ಇದರ ಬಗ್ಗೆ ಬೇಗನೆ ಗಮನ ಕೊಡುವುದು ಬಹಳ ಅಗತ್ಯ. ಇನ್ನು ಹಳ್ಳಿಗಾಡಿನ ಪ್ರದೇಶದಲ್ಲಿರುವ ಶಾಲೆಗಳ ಟೀಚರುಗಳಿಗೆ ಕ್ವಾರ್ಟರುಗಳನ್ನು ಮಾಡಿಸಿ ಕೊಡುವುದು ಅಗತ್ಯ. ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಆಸ್ಪತ್ರೆ ಕಟ್ಟುವಾಗ ಅದರ ಪಕ್ಕದಲ್ಲೇ ಡಾಕ್ಟರಿಗೂ ಮತ್ತು ಇತರ ಅಲ್ಲಿನ ನೌಕರರುಗಳಿಗೂ ಕ್ವಾರ್ಟರುಗಳನ್ನು ಕಟ್ಟಿಸುತ್ತಿದ್ದಾರೆ. ಇದರಂತೆ ನಮ್ಮ ವಿದ್ಯಾ ಇಲಾಖೆಯವರಿಗೂ ಕೂಡ ಹಳ್ಳಿಗಾಡಿನಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವಾಗ ಅದರ ಪಕ್ಕದಲ್ಲೇ ವಾಸಕ್ಕೆ ಅಲ್ಲಿನ ಉಪಾಧ್ಯಾಯರುಗಳಿಗೂ ಮನೆಗಳನ್ನು ಕಟ್ಟಬೇಕು. ಈಗ ಹಳ್ಳಿಗಾಡಿನ ಕೆಲಸ ಮಾಡುವ ಉಪಾಧ್ಯಾಯರುಗಳಿಗೆ ಮನೆಗಳೇ ಸಿಗುವುದಿಲ್ಲ. ಅದರಲ್ಲೂ ಎಸ್. ಸಿ. ಹಾಗೂ ಎಸ್. ಟಿ. ಟೀಚರುಗಳು ಇರುವ ಕಡೆಗಳಲ್ಲಿ ಯಾರೂ ಅವರಿಗೆ ಮನೆ ಕೊಡುವುದಿಲ್ಲ. ಇದರಿಂದಾಗಿ ಎಲ್ಲ ಕಡೆ ಇರುವ ಹಳ್ಳಿಗಳಲ್ಲಿ ಟೀಚರುಗಳಿಗೆ ತೊಂದರೆಯಾಗುತ್ತಿದೆ. ಇದಕ್ಕಾಗಿ ಶಾಲೆಗಳ ಪಕ್ಕದಲ್ಲೇ ಮನೆಗಳನ್ನೂ ಕಟ್ಟಿಸಿದರೆ ಅವರಿಗೆ ತುಂಬಾ ಅನುಕೂಲವಾಗುತ್ತದೆ. ಇನ್ನು ಟೀಚರುಗಳ ವರ್ಗಾವರ್ಗಿಗಳನ್ನು ಮಾಡು ವಾಗ ಆದಷ್ಟು ಲೇಡಿ ಟೀಚರುಗಳನ್ನು ರೋಡು ಸೈಡು ವಿಲೇಜುಗಳಿಗೇ ಹಾಕಬೇಕು ಎಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ನಾವು ನೋಡಿರುವ ಹಾಗೆ ಎಷ್ಟೋ ಸಲ ಎಸ್. ಎಸ್. ಎಲ್. ಸಿ. ಪಾಸು ಮಾಡಿ ಟ್ರೇನಿಂಗನ್ನು ಮುಗಿಸಿಕೊಂಡು ಬಂದಂತಹ ೧೮—೨೦ ವಯಸ್ಸಿನ ಹೆಣ್ಣು ಮಕ್ಕಳನ್ನು ಊರಿಂದ ಸುಮಾರು ೧೮—೨೦ ಮೈಲಿಗಳಿಗೆ ವರ್ಗ ಮಾಡಿದರೆ ಅವರು ನಡೆದು ಹೋಗುವುದು ಕಷ್ಟವಾಗುತ್ತದೆ ಮತ್ತು ಅವರಿಗೆ ಸಾರಿಗೆ ಸೌಕರ್ಯಗಳೂ ಸಿಗುವುದಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಆದಷ್ಟು ಎರಡು ಮತ್ತು ಎರಡೂವರೆ ಮೈಲಿ ದೂರಗಳಲ್ಲಿರುವ ರೋಡು ಸೈಡಿನಲ್ಲಿರುವ ಸ್ಕೂಲುಗಳಿಗೆ ಇವರನ್ನು ಹಾಕಿದರೆ ಅನುಕೂಲವಾಗುತ್ತದೆ. ಇದರಲ್ಲಿ ಅವರ ಸೇಫ್ಟಿ ಪ್ರಶ್ನೆಯೂ ಅಡಗಿರುತ್ತದೆ. ಇದಕ್ಕಾಗಿ ನಾನು ಸರ್ಕಾರದಲ್ಲಿ ಲೇಡಿ ಟೀಚರುಗಳನ್ನು ರೋಡ್ ಸೈಡ್ ಸ್ಕೂಲುಗಳಿಗೇ ವರ್ಗಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎಸ್. ಸಿ. ಹಾಗೂ ಎಸ್. ಟಿ. ವರ್ಗದ ಮಕ್ಕಳು ಶಾಲೆಗಳಿಗೆ ಓದಲು ಬರಬೇಕೆಂದು ಅವರಿಗೆ ಸ್ಲೇಟು ಮತ್ತು ಬುಕ್ಕುಗಳು ಮತ್ತು ಯೂನಿಫಾರಂಗಳಿಗೆ ಹಣದ ರೂಪದಲ್ಲಿ ಕೊಟ್ಟು ಸಹಾಯ ಮಾಡು ತ್ತಿದ್ದಾರೆ. ನಾನು ಸಲಹೆ ಮಾಡುವುದು ಇದನ್ನು ಆದಷ್ಟೂ ಇನ್ ಕೈಂಡ್ ಕೊಡುವುದು ಒಳ್ಳೆಯದು.

ಇದರಲ್ಲಿ ಹಣದ ದುರುಪಯೋಗವಾಗುವುದಿಲ್ಲ. ಈಗಿನಂತೆ ಹಣದ ರೂಪದಲ್ಲಿ ಇಲ್ಲಿರುವ ಟೀಚರುಗಳಿಗೆ ಕಳುಹಿಸಿಕೊಟ್ಟರೆ ಅದು ಸರಿಯಾಗಿ ಹುಡುಗರಿಗೆ ತಲುಪುವುದೇ ಇಲ್ಲ. ಎಷ್ಟೋ ಕಡೆ ಯೂನಿಫಾರಂಗಾಗಿ ದುಡ್ಡು ಕೊಟ್ಟಿದ್ದರೂ ಅದನ್ನೂ ಉಡದೇ ಬರೀಚಿಂದಿ ಬಟ್ಟೆಯಲ್ಲೇ ಶಾಲೆಗಳಿಗೆ ಬರುತ್ತಿರುವುದನ್ನು ನಾವು ನೋಡಬಹುದು. ಇದಕ್ಕಾಗಿ ನಾನು ಸಲಹೆಮಾಡುವುದು ಯಾವ ಸಹಾಯವನ್ನು ಇಂತಹ ಬಡಹುಡುಗರಿಗೆ ಕೊಡುವಾಗ ಇನ್ ಕೈಂಡ್ ಕೊಡುವುದು ಸೂಕ್ತವಾಗಿರುತ್ತದೆ, ಇನ್ನು ಪ್ರೈಮರಿ ಹಾಗೂ ಮಿಡಲ್ ಸ್ಕೂಲುಗಳಲ್ಲಿರುವ ಟೀಚರುಗಳು ಟ್ರೇನಿಂಗು ಆದ ಮೇಲೆ ಇವರಿಗೆ ಬೇರಾವ ತರಬೇತಿಯೂ ಇರುವುದಿಲ್ಲ. ಇಂತಹ ಶಿಕ್ಷಕ ವರ್ಗದವರಿಗೆ ಒಂದು ರೀತಿಯಾದ ರಿಫ್ರೆಷರು ಕೋರ್ಸು ಎಂದು ಮಾಡುವುದು ಸರಿಯಾಗಿ ರುತ್ತದೆ. ಇದರ ಬಗ್ಗೆ Mr. Henry Adams says.

"A teacher affects eternity, We can never tell where his influence starts."

ಇದಕ್ಕಾಗಿ ಇಂತಹ ಪ್ರೈಮರಿ ಮತ್ತು ಮಿಡಲ್ ಸ್ಕೂಲು ಶಿಕ್ಷಕರು ಹೊಸ ವಿಷಯಗಳನ್ನು ತಿಳಿಯಲು ರಿಫ್ರೆಷರು ಕೋರ್ಸಿನಿಂದ ಸಹಾಯವಾಗುತ್ತದೆ. ಇಂತಹ ಒಂದು ತರಬೇತಿಯ ಕೋರ್ಸನ್ನು ಮೂರು ವರ್ಷಗಳಿಗೊಮ್ಮೆ ಮಾಡಿದರೆ ಒಳ್ಳೆಯದು

ಇನ್ನು ಟೆಕ್ಸ್ಟ್ ಬುಕ್ಕುಗಳ ವಿಚಾರವಾಗಿ ಹೇಳಬೇಕಾದರೆ ಈಗಿರುವ ಡೈರೆಕ್ಟೊರೇಟ್ ಆಫ್ ಟೆಕ್ಸ್ಟ್ ಬುಕ್ಸ್‌ನ್ನು ಒಂದು ಕಾರ್ಪೊರೇಷನ್ ಮಾಡಬೇಕೆಂದು ಇದ್ದಾರೆಂದು ಕೇಳುತ್ತೇನೆ. ಇಂತಹ ಒಂದು ಕಾರ್ಪೊರೇಷನ್ ಮಾಡುವುದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ, ಆದರೆ ಸರ್ಕಾರಕ್ಕೆ ನಾನು ಸಲಹೆ ಮಾಡುವುದು ಆದಷ್ಟು ಟೆಕ್ಸ್ಟ್‌ಬುಕ್ಕುಗಳನ್ನು ಪಬ್ಲಿಷ್ ಮಾಡುವಾಗ ಸಕಾಲದಲ್ಲಿ ಅವುಗಳನ್ನು ಒದಗಿಸಿಕೊಡಬೇಕು, ಇದು ಬಹು ಮುಖ್ಯ, ಈಗೇನಾಗಿದೆ ಎಂದರೆ ಕೆಲವು ಕಡೆ ಶಾಲೆಗಳು ಆರಂಭವಾಗಿ ಎರಡು ಮೂರು ತಿಂಗಳಾದರೂ ಹುಡುಗರಿಗೆ ಪಠ್ಯಪುಸ್ತಕಗಳು ಸಿಗುವುದೇಕಷ್ಟವಾಗಿದೆ. ಇದಕ್ಕಾಗಿ ಟೈಮ್ಲೀ ಪಬ್ಲಿಕೇಷನ್ ಮಾಡುವುದು ಬಹಳ ಮುಖ್ಯ. ಡೈರೆಕ್ಟರೇಟ್ ಆಫ್ ಟೆಕ್ಸ್ಟ್ ಬುಕ್ಕುಗಳವರು ಈಗ ಎರಡು ಡಿವಿಜನ್‌ಗಳಲ್ಲಿ ಮಾತ್ರ ಟೆಕ್ಸ್‌ಬುಕ್ಕು ಡಿಪೋಗಳೆಂದು ಮಾಡಿದ್ದಾರೆ. ಇದು ಸಾಲದು, ಅದಕ್ಕಾಗಿ ಎಲ್ಲ ಡಿಪೋಗಳನ್ನೂ ಆದಷ್ಟು ಪ್ರತಿ ಜಿಲ್ಲೆಯಲ್ಲಿ ಒಂದೊಂದು ಇರುವಂತೆ ಮಾಡಬೇಕಾದುದು ಅಗತ್ಯ. ಇದರ ಬಗ್ಗೆ ಸರ್ಕಾರ ಗಮನ ಕೊಟ್ಟು ಆದಷ್ಟು ಬೇಗ ಇದನ್ನು ಜಾರಿಗೆತರಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಶಾಲೆಗಳಲ್ಲಿ ಎಕ್ಸ್‌ಟ್ರಾ ಕರಿಕ್ಯುಲರು ಆಕ್ಟಿವಿಟೀಸ್‌ಗಳು ಎಂದು ಕಂಪಲ್‌ಸರಿ ಗರ್ಲ್ಸ್ ಗೈಡ್ ಅಥವಾ ಸ್ಕೌಟ್ ಟ್ರೇನಿಂಗು ಅಥವಾ ಭಾರತ ಸೇವಾದಳದ ಟ್ರೇನಿಂಗು ಎಂದು ಎಲ್ಲಾ ಶಾಲೆಗಳಲ್ಲಿಯೂ ಏರ್ಪಾಡು ಮಾಡಿದರೆ ಇದರಿಂದ ಒಂದು ರೀತಿಯ ಟೀಂ ಸ್ಪಿರಿಟ್ಟು ಹಾಗೂ ಟೀಂ ವರ್ಕ್ ಮಾಡಲು ಅನುಕೂಲವಾಗುತ್ತದೆ ಮತ್ತು ಇದಕ್ಕಾಗಿ ಒಂದು ರೀತಿಯಾದ ಮಾರಲ್ ಎಜುಕೇಷನ್ ಕೊಟ್ಟರೂ ಅನುಕೂಲವಾಗುತ್ತದೆ. ಇಂತಹ ಚಟುವಟಿಕೆಗಳನ್ನು ಎಲ್ಲ ಶಾಲೆಗಳಲ್ಲಿಯೂ ಏರ್ಪಾಡು ಮಾಡಿದರೆ ಇದರಿಂದ ಮಕ್ಕಳಲ್ಲಿ ಒಂದು ರೀತಿಯ ಶಿಸ್ತು ತ್ಯಾಗ ಮನೋಭಾವ ಸಹನೆ ಮತ್ತು ಸರಳತೆ ಮತ್ತು ಉತ್ತಮ ಶೀಲಗಳನ್ನು ಬೆಳಸುವುದಕ್ಕೆ ಇದು ಸಹಾಯಕವಾಗುತ್ತದೆ.

ಇನ್ನು ಬಾಲ ಸಾಹಿತ್ಯದ ಬಗ್ಗೆ ಲೈಬ್ರರಿಯಲ್ಲಿ ಹುಡುಗರಿಗೆ ಹೆಚ್ಚು ಅನುಕೂಲವಾಗುವಂತೆ ಪುಸ್ತಕಗಳನ್ನು ಒದಗಿಸಿ ಕೊಟ್ಟು ಅವರು ಅಲ್ಲಿ ಓದಲು ಅವಕಾಶ ಮಾಡಿ ಕೊಡಬೇಕು. ಇದರಲ್ಲಿ ಹುಡುಗರು ಹಾಗೂ ಟೀಚರು ಇಬ್ಬರಿಗೂ ಇಂತಹ ಲೈಬ್ರರಿಗಳಿಂದ ಹೆಚು ಪ್ರಯೋಜನವಾಗುತ್ತದೆ. ಸರ್ಕಾರದ ಹಾಗೂ ಸಾರ್ವಜನಿಕ ಸಹಾಯದಿಂದ ಎಷ್ಟೋ ಕಡೆಗಳಲ್ಲಿ ಪುಸ್ತಕ ಭಂಡಾರಗಳು ಆಗಿವೆ. ಇವರ ಕಡೆಗೆ ಆದಷ್ಟು ಗಮನ ಕೊಟ್ಟು ಸರ್ಕಾರ ಇಂತಹ ಒಂದು ಯೋಜನೆಯನ್ನು ಜಾಗ್ರತೆ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಇನ್ನು ಸೆಕೆಂಡರಿ ಎಜುಕೇಷನ್ ಬಗ್ಗೆ ಹೇಳುವುದಾದರೆ ಹಿಂದೆ ಇದರಲ್ಲಿ ಹೋಂ ಸೈನ್ಸ್ ಎಂದು ಸಬ್ಜಕ್ಟು ಕಾಲೇಜುಗಳಲ್ಲಿ ಮತ್ತು ಇದು ಕರಿಕ್ಯುಲಂನಲ್ಲೂ ಸೇರಿತ್ತು. ಇದರಲ್ಲಿ ಎಷ್ಟೋ ಟೀಚರುಗಳಿಗೆ ಟ್ರೇನಿಂಗು ಕೂಡ ಆಗಿ ಇದರಿಂದ ಎಷ್ಟೋ ಉಪಯೋಗಗಳೂ ಕೂಡ ಆಗಿತ್ತು. ಈಗ ಇದನ್ನು ತೆಗೆದಿರುವುದರಿಂದ ಇದಕ್ಕೆ ಬೇಕಾದ ಪಾತ್ರೆಗಳೆಲ್ಲಾ ಹಾಗೇ ಇವೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಇನ್ನು ಮುಂದೆ ಹೋಂ ಸೈನ್ಸ್‌ನ್ನು ರೂರಲ್ ಗರ್ಲ್ಸ್ ಹೈ ಸ್ಕೂಲುಗಳಲ್ಲಿ ಇಂಟ್ರೊಡ್ಯೂಸು ಮಾಡಿದರೆ ಇದರಿಂದ ಹಳ್ಳಿಗಾಡಿನ ಹುಡುಗರಿಗೆ ಹೆಚ್ಚು ಅನುಕೂಲಗಳಾಗುತ್ತವೆ ಮತ್ತು ಹೆಚ್ಚಿಗೆ ಶಿಕ್ಷಣ ಪಡೆಯಲೂ ಸಹಾಯವಾಗುತ್ತದೆ. ಇದಕ್ಕೆ ಇರತಕ್ಕ ವೆಚ್ಚ ಕೂಡ ಹಾಗೆ ಉಳಿಯುತ್ತದೆ. ಇದಕ್ಕಾಗಿ ಹಳ್ಳಿಗಾಡಿನಲ್ಲಿರುವ ಹೈಸ್ಕೂಲುಗಳಲ್ಲಿ ಹೋಂ ಸೈನ್ಸ್ ವಿಭಾಗವನ್ನು ಇಷ್ಟು ದಿವಸ ಹಿಂದೆ ಹೇಗಿತ್ತೋ ಹಾಗೆ ಇದನ್ನು

ಮುಂದುವರಿಸಬೇಕೆಂದು ಹೇಳುತ್ತೇನೆ. ಇನ್ನು ಗರ್ಲ್ಸ್ ಹೈಸ್ಕೂಲುಗಳಿಗೆ ಇದುವರೆಗೆ ಕೊಡುತ್ತಿದ್ದ ಗ್ರಾಂಟನ್ನು ಕೊಡಬಾರದು ಸರ್ಕಾರದ ಮೆಮೋ ಬಂದಿದೆ ಎಂದು ಕೇಳುತ್ತೇವೆ. ಸರಕಾರದವರು ವೀಕರ ಸೆಕ್ಷನ್‌ಗೆ ಪ್ರೊಟೆಕ್ಷನ್ ಕೊಡಿ ಎಂದು ಹೇಳುವಾಗ ಈ ರೀತಿ ಸಹಾಯ ಕೊಡುವುದನ್ನು ನಿಲ್ಲಿಸುವುದು ಸರಿಯಲ್ಲ. ಇದಕ್ಕಾಗಿ ಹಿಂದೆ ಹೇಗೆ ಇತ್ತೋ ಹಾಗೆ ರೂರಲ್ ಗರ್ಲ್ಸ್ ಹೈಸ್ಕೂಲುಗಳಿಗೆ ಗ್ರಾಂಟುಗಳನ್ನು ಕೊಡುವ ಹಾಗೆ ಮಾಡಬೇಕು ಎಂದು ನಾನು ಇಲ್ಲಿ ಸರ್ಕಾರವನ್ನು ಕೇಳುತ್ತೇನೆ. ಇನ್ನು ರೂರಲ್ ಸರ್ವಿಸ್ ಕಾಂಡನ್‌ಗಳನ್ನು ಮಾಡಬೇಕು. ಇದನ್ನು ಹೈಸ್ಕೂಲು ಲೆವಲ್‌ನಲ್ಲಿ ಮಾಡಬಹುದು ಕಾಲೇಜುಗಳಲ್ಲಿ ಎನ್.ಸಿ.ಸಿ.ಎ.ಸಿ. ಸಿ. ಎಂದು ಇದೆ. ಹಳ್ಳಿಗಾಡಿನಲ್ಲಿರುವ ಹೈಸ್ಕೂಲುಗಳಲ್ಲಿ ಇಂತಹ ಒಂದು ಕಾರ್ಯಕ್ರಮ ಇಟ್ಟು ಕೊಂಡರೆ ಇಲ್ಲಿನ ವಿದ್ಯಾವಂತರಿಗೆ ಒಳ್ಳೆಯ ತಿಳುವಳಿಕೆ ಪಡೆಯಲು ಸಹಾಯವಾಗುತ್ತದೆ. ಇದನ್ನು ಹೈಸ್ಕೂಲು ಲೆವಲ್‌ನಲ್ಲಿ ಇನಟ್ರೊಡ್ಯೂಸು ಮಾಡಬೇಕೆಂದು ಹೇಳುತ್ತೇನೆ. ಇಂತಹ ಕ್ಯಾಂಪುಗಳು ಎಂದು ೧೫ ದಿನಗಳ ಕಾಲ ಶಾಲೆಯಿಂದ ದೂರದಲ್ಲಿರುವ ಬೇರೆ ಊರುಗಳಲ್ಲಿ ಮಾಡಿದರೆ ಅಲ್ಲಿರುವ ಜನರ ಕಷ್ಟಸುಖಗಳೇನು ಎನ್ನುವುದನ್ನು ಅರಿಯಲು ಸಹಾಯವಾಗುತ್ತದೆ. ಇದಕ್ಕಾಗಿ ರೂರಲ್ ಗರ್ಲ್ಸ್ ಹೈಸ್ಕೂಲುಗಳಲ್ಲಿ ಇಂತಹ ಒಂದು ಯೋಜನೆಯನ್ನು ತರಬೇಕೆಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಇನ್ನು ಟಿ. ಸಿ. ಹೆಚ್. ಟ್ರೇನಿಂಗು ಕೊಡುವುದರ ಜೊತೆಗೆ ಗರ್ಲ್ಸ್ ಗೈಡ್‌ಗಳಿಗೆ ಸ್ಕೌಟು ಅಥವಾ ಭಾರತ ಸೇವಾದಳದ ತರಬೇತಿಯನ್ನು ಕಡ್ಡಾಯವಾಗಿ ಕೊಡುವಂತೆ ಮಾಡಬೇಕು.

ಇನ್ನು ಸೆಕಂಡರಿ ಎಜುಕೇಷನ್ ಎಕ್ಸಾಮಿನೇಷನ್ಸ್ ಬೋರ್ಡಿನ ಬಗ್ಗೆ ಹೇಳುವಾಗ ಇಲ್ಲಿ ಮಾರ್ಕ್ಸ್ ಕಾರ್ಡುಗಳನ್ನು ಕಳುಹಿಸುವುದರಲ್ಲಿ ಬಹಳ ನಿಧಾನವಾಗುತ್ತದೆ. ಪರೀಕ್ಷೆಗಳು ಮುಗಿದು ಫಲಿತಾಂಶ ಪ್ರಕಟವಾಗಿ ಸುಮಾರು ಎರಡು, ಎರಡುವರೆ ತಿಂಗಳಾದರೂ ಕೂಡ ವಿದ್ಯಾರ್ಥಿಗಳಿಗೆ ಅನೇಕವೇಳೆ ಮಾರ್ಕ್ಸ್ ಕಾರ್ಡುಗಳು ಸಿಗದೆ ಬಹಳ ತೊಂದರೆಯಾಗುತ್ತಿದೆ. ಇದರಲ್ಲಿ ನಿಯಮಗಳ ಪ್ರಕಾರ ಏನೇನು ಫಾರಂಗಳನ್ನು ಭರ್ತಿ ಮಾಡಿಕೊಡಬೇಕೋ ಅವೆಲ್ಲವನ್ನೂ ಮಾಡಿಕೊಟ್ಟಿದ್ದರೂ ಕೂಡ ಎಷ್ಟೋ ಜನ ಹುಡುಗರಿಗೆ ಮಾರ್ಕ್ಸ್ ಕಾರ್ಡುಗಳು ಸಕಾಲದಲ್ಲಿ ಸಿಗದೆ ತೊಂದರೆಗಳಾಗುತ್ತಿವೆ. ಇದಕ್ಕಾಗಿ ಸರ್ಕಾರ ಕೂಡಲೇ ತಕ್ಕ ಕ್ರಮ ತೆಗೆದುಕೊಂಡು ಆದಷ್ಟು ತ್ವರಿತವಾಗಿ ಮಾರ್ಕ್ಸ್ ಕಾರ್ಡುಗಳು ಸಿಗುವಂತೆ ತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಸ್. ಎಸ್. ಎಲ್. ಸಿ. ಪೇಪರು ವ್ಯಾಲ್ಯುಯೇಷನ್ ಸೆಂಟರನ್ನು ಒಂದೇ ಕಡೆ ಮಾಡಿದ್ದಾರೆ. ಇದಕ್ಕೆ ಬದಲು ಆಯಾ ಜಿಲ್ಲೆಗಳಲ್ಲೇ ಒಂದು ಸೆಂಟರು ಮಾಡಿದರೆ ಇದರಿಂದ ಹೆಚ್ಚು ಟಿ. ಎ. ಮತ್ತು ಡಿ. ಎ. ಖರ್ಚು ಉಳಿಯುವುದಿಲ್ಲವೋ ? ಟೀಚರುಗಳಿಗೆ ಇಲ್ಲಿ ವಸತಿ ಸೌಕರ್ಯಗಳು ಸಿಗುವುದೂ ಕಷ್ಟ. ಇದಕ್ಕಾಗಿ ಆಯಾ ಜಿಲ್ಲೆಗಳಲ್ಲಿ ಒಂದು ಸೆಂಟರು ಎಂದು ಮಾಡಿದರೆ ಅಲ್ಲಿರುವ ಟೀಚರುಗಳು ಬರಲೂ ಅನುಕೂಲವಾಗುತ್ತದೆ ಮತ್ತು ವಸತಿಗೂ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರಕ್ಕೆ ಇನ್ನೊಂದು ಮಾತು ಇಲ್ಲಿ ಹೇಳಬೇಕಾಗಿದೆ. ಅದು Education and instruction includes valuation also ಎಂದು ಹೇಳುತ್ತಾರೆ ಇದಕ್ಕಾಗಿ ಪರೀಕ್ಷೆಗಳನ್ನು ಮಾಡುವುದು ಎಷ್ಟು ಗುರುತರವಾದುದೋ ಅದರ ವ್ಯಾಲ್ಯುಯೇಷನ್ ಕೂಡ ಅಷ್ಟೇ ಗುರುತರವಾದುದು ಇಂದು ದೇಶದಲ್ಲಿ ಪರೀಕ್ಷೆಗಳನ್ನು ಏಕೆ ಮಾಡಬೇಕೆನ್ನುವ ಒಂದು ಸಮಸ್ಯೆಯೂ ಬಂದಿದೆ. ಪರೀಕ್ಷೆ ಮಾಡುವುದು ಪ್ರಧಾನವಾಗಿ ಮಕ್ಕಳಲ್ಲಿ ಅಡಗಿರತಕ್ಕ ಬುದ್ಧಿಶಕ್ತಿಯನ್ನು ಅಳೆಯುವುದಕ್ಕಾಗಿ ಎನ್ನುವ ಒಂದು ಭಾವನೆಯೂ ಇದೆ. ಇದಕ್ಕಾಗಿ ನಾವು ವಿದ್ಯಾಭ್ಯಾಸದ ಕ್ರಮದಲ್ಲಿ ಪರಿವರ್ತನೆ ಮಾಡಬೇಕೆಂದು ಹೇಳುತ್ತಾರೆ. ಈಗೇನಾಗಿದೆ ಎಂದರೆ We are making our children mugging up masters. ಇಂತಹ ಪರೀಕ್ಷೆಗಳಾಗಬಾರದು, ಪರೀಕ್ಷೆಗಳಲ್ಲೂ ಮೂರು ವಿಧಗಳಿರಬೇಕು. ಒಂದು ವಿವಾ ಎಕ್ಸಾಮಿನೇಷನ್, ಎರಡನೇದು ಮಂತ್ಲೀ ಎಕ್ಸಾಮಿನೇಷನ್‌ಗಳು ಮತ್ತು ಮೂರನೇದು ರಿಟನ್ ಎಕ್ಸಾಮಿನೇಷನ್ ಎಂದು. ಇಂತಹ ಒಂದು ವಿದ್ಯಾಭ್ಯಾಸದ ಕ್ರಮವನ್ನು ಮಾಡಿ ಇದರಲ್ಲಿ ಅಭ್ಯಾಸ ಮಾಡಿಸಬೇಕು ಮತ್ತು ಇದರಬಗ್ಗೆ ಸರ್ಕಾರವೂ ಪರಿಶೀಲನೆ ಮಾಡಬೇಕೆಂದು ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ. ಈ ಸಂದರ್ಭದಲ್ಲಿ ಸೆಕೆಂಡರಿ ಶಾಲೆಗಳಲ್ಲಿರುವ ಸಂಸ್ಕೃತ ಪಂಡಿತರುಗಳಿಗೆ ಕೇವಲ ೪೦ ರೂಪಾಯಿಗಳೆಂದು ಕೊಡುತ್ತಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ಅವರೂ ಕೂಡ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇತರ ಟೀಚರುಗಳಿಗೆ ಯಾವ ರೀತಿ ಸಂಬಳಗಳನ್ನು ಕೊಡುತ್ತಿದ್ದಾರೋ ಅದರಂತೆ ಇವರಿಗೂ ಸಂಬಳಗಳನ್ನು ಸಿಗುವ ಹಾಗೆ ಏರ್ಪಾಡು ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಅತಿ ಮುಖ್ಯವಾದಂಥ ೭೮ ಕೋಟಿ ರೂಪಾಯಿಗಳ ಬೇಡಿಕೆಯನ್ನು ಎರಡು ಮುಖ್ಯ ಕಾರಣಗಳಿಗಾಗಿ ವಿರೋಧ

ವ್ಯಕ್ತಪಡಿಸಬೇಕಾಗಿದೆ. ಮೊದಲನೆಯ ಕಾರಣವೆಂದರೆ, ಈಗ ನಾವು ೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ಸರಿಯಾದಂಥ ವಿದ್ಯಾಭ್ಯಾಸ ಮಕ್ಕಳಿಗೆ ದೊರೆಯದಿರುವುದು. ಎರಡನೆಯ ಕಾರಣವೆಂದರೆ. ಇಂದು ಅನೇಕ ಖಾಸಗೀ ಶಿಕ್ಷಣ ಸಂಸ್ಥೆಗಳು ಅತಿ ಹೆಚ್ಚಿನ ಫೀ ದರವನ್ನು ವಿಧಿಸುತ್ತಿರುವುದರ ಜೊತೆಗೆ ಡೊನೇಷನ್ ಸಹ ವಸೂಲಿ ಮಾಡುತ್ತಿದ್ದರೂ ಸಹ ಅದನ್ನು ತಡೆಗಟ್ಟುವಲ್ಲಿ ಸರ್ಕಾರ ವಿಫಲವಾಗಿರುವುದರಿಂದ, ಬಡವರ ಮಕ್ಕಳು ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಲು ಕಷ್ಟವಾಗಿರುವುದು. ಈ ಎರಡು ಕಾರಣಕ್ಕಾಗಿ ನಾನು ಈ ಬೇಡಿಕೆಗೆ ವಿರೋಧ ವ್ಯಕ್ತಪಡಿಸಬೇಕಾಗಿದೆ.

ಇನ್ನು ಮೊದಲನೆಯದಾಗಿ ವಿದ್ಯಾಭ್ಯಾಸಕ್ಕಾಗಿ ಸಂಬಂಧಪಟ್ಟಂತಹ ಇಲಾಖೆಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಏರ್ಪಾಡು ಮಾಡಿರತಕ್ಕಂಥ ಅಧಿಕಾರ ವರ್ಗದ ಬಗ್ಗೆ ಸರ್ಕಾರ ಸಾಕಷ್ಟು ಯೋಜನೆ ಮಾಡಿರುವುದಕ್ಕಾಗಿ ನಾನು ಸರ್ಕಾರದವನ್ನು ಅಭಿನಂದಿಸಬೇಕಾಗಿದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮುಖ್ಯವಾಗಿ ನಮ್ಮ ರಾಜ್ಯದ ೩ ವಿಶ್ವವಿದ್ಯಾನಿಲಯಗಳಿಗೆ ಉತ್ತಮರಾದಂಥ ಮತ್ತು ದಕ್ಷರಾದಂಥ ಉಪ ಕುಲಪತಿಗಳನ್ನು ಆರಿಸಿ ನೇಮಕ ಮಾಡಿರುವುದು, ಹಾಗೂ ವಿದ್ಯಾಭ್ಯಾಸದಲ್ಲಿಸಾಕಷ್ಟು ಅನುಭವವುಳ್ಳ ಮತ್ತು ತಿಳುವಳಿಕೆಯುಳ್ಳ ಡೈರೆಕ್ಟರನ್ನು ಅಡಿಷನಲ್ ಡೈರೆಕ್ಟರನ್ನು ಟೆಕ್ಸ್ಟ್‌ಬುಕ್ ಕಮಿಟಿ ಡೈರೆಕ್ಟರನ್ನು ಪಿ.ಯು.ಸಿ.ಬೋರ್ಡಿನ ಡೈರೆಕ್ಟರನ್ನು, ಸೆಕೆಂಡರಿ ಎಜುಕೇಷನ್ ಬೋರ್ಡಿನ ಚೇರ್‌ಮನ್ ಮತ್ತು ಸೆಕ್ರೆಟರಿಯವರನ್ನು ನೇಮಕ ಮಾಡಲು ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿರುವುದಕ್ಕಾಗಿ ಸರ್ಕಾರಕ್ಕೆ ಈ ಸಂದರ್ಭದಲ್ಲಿ ನಾನು ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಮಾನ್ಯ ದೇವೇಗೌಡರು ಹೇಳಿದಂತೆ ಈಗಿನ ವಿದ್ಯಾಭ್ಯಾಸ ಕ್ರಮವು ಡಿಗ್ರಿಹೋಲ್ಡರ್‌ಗಳನ್ನು ಮತ್ತು ಡಿಪ್ಲೋಮಾ ಹೋಲ್ಡರ್‌ಗಳನ್ನು ತಯಾರು ಮಾಡುವಂತಹ ಒಂದು ಕಾರ್ಖಾನೆಯಾಗಿದೆಯೇ ಹೊರತು ಸರಿಯಾದಂಥ ಮತ್ತು ನ್ಯಾಯವಾದಂಥ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸರ್ಕಾರ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತು ವಿದ್ಯಾಭ್ಯಾಸ ಕೊಡಲು ಸಾಕಷ್ಟು ಹಣ ಖರ್ಚಾದರೂ ಸಹ ಅದು ಸರಿಯಾದಂಥ ರೀತಿಯಲ್ಲಿ ವಿನಿಯೋಗವಾಗದೇ ಇರುವುದೂ ಸಹ ಶೋಚನೀಯವಾದ ವಿಚಾರ. ಮುಖ್ಯವಾಗಿ ಸರ್ಕಾರದವರು ಈ ಖಾಸಗೀ ಶಾಲೆಗಳನ್ನು ಒಂದು ಹಿಡಿತಕ್ಕೆ ತರುವುದರಲ್ಲಿ ನಿಶಕ್ತಿಯುಳ್ಳವರಾಗಿದ್ದಾರೆ. ಈ ಖಾಸಗೀ ಶಾಲೆಗಳ ಬಗ್ಗೆ ನನಗೆ ಸ್ವಲ್ಪ ಅನುಭವವಿರುವುದರಿಂದ, ಈ ಖಾಸಗೀ ಶಾಲೆಗಳನ್ನು ೩ ಪಂಗಡಗಳಾಗಿ ವಿಂಗಡಿಸಬಹುದು. ಉತ್ತಮವಾದಂಥ ಆಡಳಿತವರ್ಗ ಇಟ್ಟುಕೊಂಡು, ಸರಿಯಾದಂತ ರೀತಿಯಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿರುವವರು ಮೊದಲನೇ ಪಂಗಡಕ್ಕೆ ಸೇರಿದರೆ, ವಿದ್ಯಾಭ್ಯಾಸದ ಜೊತೆಗೆ ಸ್ವಲ್ಪ ಸ್ವಾರ್ಥವನ್ನು ಇಟ್ಟುಕೊಂಡಿರುವ ಸಂಸ್ಥೆಗಳವರು ಎರಡನೇ ಪಂಗಡಕ್ಕೆ ಸೇರಿದ್ದಾರೆ ಇನ್ನು ಖಾಸಗೀ ಶಾಲೆಗಳನ್ನು ವ್ಯಾಪಾರಿ ಸಂಸ್ಥೆಗಳನ್ನಾಗಿ ನಡೆಸಿಕೊಂಡು ಹೋಗುತ್ತಿರುವ ಸಂಸ್ಥೆಗಳವರ ಮೂರನೇ ಪಂಗಡಕ್ಕೆ ಸೇರಿದ್ದಾರೆ. ಖಾಸಗೀ ಶಾಲೆಗಳ ವಿಚಾರದಲ್ಲಿ ಸರ್ಕಾರ ಸಾಕಷ್ಟು ಕಳವಳ ಪಟ್ಟರೂ ಸಹ ಅದನ್ನು ಹದಕ್ಕೆ ತರುವ ಬಗ್ಗೆ ಅಷ್ಟು ಪ್ರಯೋಜನಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಇವುಗಳ ಆಡಳಿತವನ್ನು ಒಂದು ಹದಕ್ಕೆ ತರುವ ಬಗ್ಗೆ ಹಿಂದೆ ಚೀಫ್ ಸೆಕ್ರೆಟರಿಯಾಗಿದ್ದ ಶ್ರೀ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಒಂದು ಏಕ ಸದಸ್ಯ ಆಯೋಗವನ್ನು ಸರ್ಕಾರದವರು ನೇಮಕ ಮಾಡಿದ್ದರು. ಅವರು ನಿಷ್ಠೆಯಿಂದ ಕೆಲಸ ಮಾಡುವವರಾಗಿದ್ದರೂ ಸಹ ಈ ಒಂದು ಕೆಲಸಕ್ಕೆ ಅವರು ಲಾಯಕ್ ಆದವರಾಗಿರಲಿಲ್ಲ. ನನ್ನ ಅಭಿಪ್ರಾಯ ಹೇಳುವುದಾದರೆ ಇಂತಹ ಸ್ಥಾನಕ್ಕೆ ನೇಮಕ ಮಾಡುವವರಲ್ಲಿ ತೀವ್ರವಾಗಿ ಕಾರ್ಯಕ್ರಮ ಕೈಕೊಳ್ಳಲು ದಿಟ್ಟತನ ಇರಬೇಕು. ಆದರೆ ಇಂತಹ ಒಳ್ಳೆಯವರನ್ನು ಅಂತಹ ಜಾಗಕ್ಕೆ ಹಾಕಿದರೆ ಉತ್ತಮವಾದ ಫಲಿತಾಂಶ ದೊರೆಯುವುದಿಲ್ಲವೆಂಬುದು ನನ್ನ ವಾದ. ಆದಕಾರಣ ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಖಾಸಗೀ ಶಾಲೆಗಳ ಆಡಳಿತದ ಬಗ್ಗೆ ಒಂದು ತೀರ್ಮಾನವನ್ನು ಜಾಗ್ರತೆ ತೆಗೆದುಕೊಳ್ಳಬೇಕು, ಏಕೆಂದರೆ ನಮ್ಮ ರಾಜ್ಯದ ಪ್ರತಿಯೊಬ್ಬ ಮಗುವೂ ಸಹ ವಿದ್ಯಾಭ್ಯಾಸ ಪಡೆಯಬೇಕು. ಬಡವರಿಗೂ ಸಹ ಉಚಿತವಾದ ವಿದ್ಯಾಭ್ಯಾಸ ಸಿಗಬೇಕು ಎಂಬ ನಿಲುವನ್ನು ಸರ್ಕಾರ ಮೊದಲಿನಿಂದಲೂ ತೆಗೆದುಕೊಂಡಿದ್ದರೂ ಸಹ ಎಲ್ಲ ಖಾಸಗೀ ಶಾಲೆಗಳನ್ನು ಸರ್ಕಾರ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ತನ್ನ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಆದಕಾರಣ ಅವುಗಳ ಆಡಳಿತವಾದರೂ ಸಹ ಚೆನ್ನಾಗಿರುವಂತೆ ನೋಡಿಕೊಳ್ಳಬೇಕು ಮುಖ್ಯವಾಗಿ ಇಂದು ಖಾಸಗೀ ಶಾಲೆಗಳಿಗೆ ಎಲ್ಲ ಮಕ್ಕಳು ಹೋಗುವುದಕ್ಕೆ ಕಾರಣವೇನೆದರೆ ಸರ್ಕಾರೀ ಶಾಲೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುವ ಶಾಲೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ನಗರ ಕಾರ್ಪೊರೇಷನ್‌ನವರು ನಡೆಸುವ ಶಾಲೆಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಮತ್ತು ಪರೀಕ್ಷೆಯ ಫಲಿತಾಂಶ ಬಹಳ ಕಡಿಮೆ ಇರುವುದು. ಇದರಿಂದ ಬಡವರು ಸಹ ತಮ್ಮ ಮಕ್ಕಳು ಒಳ್ಳೆಯ ವಿದ್ಯಾವಂತ

ರುಗಲಿ ಎಂದು ಹಣದ ಕಷ್ಟವಾದರೂ ಸಹ ಖಾಸಗೀ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಈ ಕಾರಣದಿಂದ ಸರ್ಕಾರದವರು ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಶ್ರದ್ಧೆವಹಿಸಿ ಕೆಲಸ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಪರಿಶೀಲನೆ ಮಾಡಬೇಕು. ಸರ್ಕಾರೀ ಶಾಲೆಗಳು ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿದರೆ ಮತ್ತು ಪರೀಕ್ಷಾ ಫಲಿತಾಂಶ ಚೆನ್ನಾಗಿಬಂದರೆ ಮಕ್ಕಳು ಖಾಸಗೀ ಶಾಲೆಗಳಿಗೆ ಹೋಗುವ ಸಂದರ್ಭ ಕಡಿಮೆಯಾಗುತ್ತದೆ. ಆದರೆ ಇದನ್ನು ಜಾರಿಗೆ ತರಲು ಸ್ವಲ್ಪ ಕಷ್ಟವಾಗಬಹುದು ಏಕೆಂದರೆ ಇಂದು ಸರ್ಕಾರೀ ಶಾಲೆಗಳನ್ನು ಅನೇಕ ಪರೀಕ್ಷೆಗಳನ್ನು ನಡೆಸಲು ಮೀಸಲಿಡಲಾಗುತ್ತಿದೆ. ಮತ್ತು ಈ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರು ತಮ್ಮ ವೃತ್ತಿಯ ಬಗ್ಗೆ ಹೆಚ್ಚು ಗಮನ ಕೊಡದೆ ತಮ್ಮ ತಿಂಗಳ ಸಂಬಳ ತೆಗೆದುಕೊಳ್ಳುವ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದಾರೆ ಮತ್ತು ಮಕ್ಕಳಿಗೆ ನ್ಯಾಯವಾದ ರೀತಿಯಲ್ಲಿ ವಿದ್ಯೆ ಹೇಳಿಕೊಡಬೇಕು ಎಂಬ ಆಸಕ್ತಿಯೇ ಕಡಿಮೆಯಾಗಿದೆ. ಮತ್ತೊಂದು ಮುಖ್ಯವಾದ ಅಂಶವೆಂದರೆ ಇಂದು ಯಾವ ಖಾಸಗೀ ಶಾಲೆಗಳು ಸರಿಯಾಗಿ ನಡೆಯುತ್ತಿವೆಯೋ ಅಂತಹ ಶಾಲೆಗಳಿಗೆ ಸರ್ಕಾರದವರು ಕೊಡುತ್ತಿರುವ ಗ್ರ್ಯಾಂಟ್ ಆ ಶಾಲೆಗಳನ್ನು ನಡೆಸಲು ಮತ್ತು ಶಿಕ್ಷಕರಿಗೆ ಸಂಬಳ ಕೊಡಲು ಸಾಲುತ್ತಿಲ್ಲ.

ಏತಕ್ಕೆಂದರೆ ಅವರಿಗೆ ಕಟ್ಟಡದ ಸಂಬಂಧ ಹಣ ಸಾಲದೆ ಬರುತ್ತದೆ, ಎಕ್ವಿಪ್‌ಮೆಂಟಿಗೆ ಹಣ ಸಾಲದೆ ಬರುತ್ತದೆ. ಸರ್ಕಾರದವರು ಕೊಡತಕ್ಕಂಥಾ ಗ್ರ್ಯಾಂಟ್ ಕೂಡ ಖರ್ಚಿಗೆ ಸಾಕಾಗುವುದಿಲ್ಲ. ಆದ್ದರಿಂದ ಯಾವ ಶಾಲೆಗಳು ಅತಿ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತವೆ ಅಂಥಾ ಶಾಲೆಗಳಿಗೆ ಆಗತಕ್ಕಂಥಾ ಖರ್ಚನ್ನು ಪೂರ್ತಿ ಸರ್ಕಾರದವರೇ ಒಪ್ಪಿಕೊಳ್ಳಬೇಕು. ಹಣದ ಮುಗ್ಗಟ್ಟಿನಿಂದ ಸರ್ಕಾರ ಖಾಸಗೀ ಶಾಲೆಗಳಿಗೆ ಬೇಕಾದಂತಹ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗದಿದ್ದರೆ ಆ ಶಾಲಾ ಮಕ್ಕಳಿಗೆ ಬೇಕಾದಂತಹ ಸಲಕರಣೆಗಳನ್ನು ಒದಗಿಸುವುದಕ್ಕೆ ಮತ್ತು ಇನ್ನು ಇತರೆ ಬಾಬುಗಳಿಗೆ ಆಗತಕ್ಕಂಥಾ ಖರ್ಚು ಏನಿದೆ ಅಷ್ಟನ್ನು ಆ ಶಾಲೆಯ ಮಕ್ಕಳ ತಂದೆತಾಯಿಗಳಿಂದ ವಸೂಲು ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಅದನ್ನು ಸರಿಪಡಿಸುವುದಕ್ಕೆ ಆಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಕೆಲವು ಖಾಸಗೀ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ. ಅಂಥಾ ಶಾಲೆಗಳಿಗೆ ಸರಿಯಾದ ರೀತಿಯಲ್ಲಿ ಲೆಕ್ಕವನ್ನು ಇಟ್ಟು ಆದಕ್ಕೆ ಬರತಕ್ಕ ಕೊರತೆ ಹಣವನ್ನು ಸರ್ಕಾರದವರು ಕೊಡಬೇಕು ಇಲ್ಲದಿದ್ದರೆ ಆ ಕೊರತೆಯ ಹಣವನ್ನು ಆ ಶಾಲೆಯ ತಂದೆತಾಯಿಗಳಿಂದ ವಸೂಲು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಯಾವ ಖಾಸಗೀ ಶಾಲೆಗಳು ವ್ಯಾಪಾರಿ ಸಂಸ್ಥೆಯನ್ನಾಗಿ ಮಾಡಿಕೊಂಡಿದ್ದರೆ ಅಂಥಾ ಶಾಲೆಗಳನ್ನು ಕಡ್ಡಾಯವಾಗಿ ನಿಲ್ಲಿಸುವುದಕ್ಕೆ ಸರ್ಕಾರದವರು ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಈಗತಾನೆ ಶ್ರೀಮಾನ್ ದೇವೇಗೌಡರು ಖಾಸಗೀ ಶಾಲೆಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡಿದ್ದಾರೆ. ಕೆಲವು ಖಾಸಗೀ ಶಾಲೆಗಳವರು ಪ್ರಭಾವಶಾಲಿಗಳಾಗಿದ್ದಾರೆ. ಮೊದಲು ವಿದ್ಯಾಭ್ಯಾಸ ಇಲಾಖೆಯಲ್ಲಿ ಲಂಚ ಇರಲಿಲ್ಲ. ಈಗ ಯಾವ ಯಾವ ಖಾಸಗೀ ಶಾಲೆಗಳ ಅಧ್ಯಕ್ಷರುಗಳು ಇರುತ್ತಾರೆಯೋ ಅವರು ವಿದ್ಯಾ ಇಲಾಖೆಯ ಕಛೇರಿಗಳಲ್ಲಿ ಅಧಿಕಾರಿಗಳಲ್ಲಿ ಪ್ರಭಾವ ಬೀರಿ ಅವರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ನ್ಯಾಯವಾದ ಬಿಲ್ಲುಗಳಿಗೆ ಕ್ವೈರಿ ಹಾಕುತ್ತಾರೆ. ಅಕ್ರಮವಾದ ಬಿಲ್ಲುಗಳನ್ನು ವಿದ್ಯಾ ಇಲಾಖೆಯ ಕೆಲವು ನೌಕರರೇ ಶಾಲೆಗಳ ಅಧ್ಯಕ್ಷರ ಮನೆಗಳಿಗೆ ತಂದುಕೊಟ್ಟು ಹೋಗುತ್ತಾರೆ. ಆದ್ದರಿಂದ ಖಾಸಗೀ ಶಾಲೆಗಳಿಗೆ ಸಂಬಂಧಪಟ್ಟ ಹಾಗೆ ಆಫೀಸುಗಳಲ್ಲಿ ಏನು ಲಂಚ ರುಸುಮತ್ತುಗಳು ನಡೆಯುತ್ತಿವೆಯೋ ಅದರ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಆದ್ದರಿಂದ ಮಾನ್ಯ ಮಂತ್ರಿಗಳು ಖಾಸಗೀ ಶಾಲೆಗಳನ್ನು ನಡೆಸತಕ್ಕವರಲ್ಲಿ ವಿದ್ಯಾಪರಿಣತರಾಗಿರತಕ್ಕವರೊಡನೆ ಮಾಡಿ ಖಾಸಗೀ ಶಾಲೆಗಳ ಬಗ್ಗೆ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ಯಾವುದೇ ಜನಗಳಿಗೆ ಶೋಷಣೆ ಯಾಗದಂತೆಯೂ ಮಕ್ಕಳಿಗೆ ಸರಿಯಾದ ವಿದ್ಯೆಯು ದೊರೆಯುವಂತೆಯೂ ಮಾಡತಕ್ಕಂಥಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆ ಖಾಸಗೀ ಶಾಲೆಗಳ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಸರ್ಕಾರ ಒಂದು ದೊಡ್ಡ ಉಪಕಾರವನ್ನು ಮಾಡಿದಹಾಗಾಗುತ್ತದೆ. ನನ್ನ ಮುಖ್ಯವಾದ ಎರಡು ಸಲಹೆಗಳು ಏನೆಂದರೆ ಒಂದು ಸರ್ಕಾರಿ ಶಾಲೆಗಳಲ್ಲಿ ತರಪೇತಿ ಮಟ್ಟವನ್ನು ಹೆಚ್ಚಿಸಬೇಕು. ಎರಡನೆಯದು ಖಾಸಗೀ ಶಾಲೆಗಳವರು ಜನಗಳನ್ನು ಲೂಟಿ ಮಾಡುವುದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿ ಹಿಂದುಳಿದ ವರ್ಗದವರಿಗೆ ಹರಿಜನಗಿರಿಜನರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು ಎಂಬ ನೀತಿಯನ್ನು ಸರ್ಕಾರದಲ್ಲಿ ಇಟ್ಟುಕೊಂಡಿದ್ದಾರೆ. ನನ್ನ ಒಂದು ಅಂದಾಜಿನಲ್ಲಿ ಯಾವ ಒಂದು ಸಮಸ್ಯೆಯನ್ನು ಸರಿಪಡಿಸದೆ ಹೋದರೂ ಕೂಡ ಹರಿಜನಗಿರಿಜನರ ಮಕ್ಕಳಿಗೆ ಒಳ್ಳೆಯ ವಿದ್ಯೆಯನ್ನು ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಮಾತ್ರ ಈ ಸಮಸ್ಯೆ ಸರಿಹೋಗುತ್ತದೆಯೇ ಹೊರತು ಬೇರೆ ಯಾವ ಉಪಕಾರವನ್ನು ಮಾಡಿದರೂ ಕೂಡ ಅವರು

ಸರಿಹೋಗುವುದಿಲ್ಲ. ಆದ್ದರಿಂದ ಒಂದು ಕಂಪಲ್ಸರಿ ಲೆಜಿಸ್ಲೇಷನ್ ತಂದು ಪ್ರತಿಯೊಬ್ಬ ಸದಸ್ಯರೂ ಕೂಡ ಅವರ ಅಂತಸ್ತು ಏನೇ ಆಗಿರಲಿ ಪ್ರತಿಯೊಬ್ಬ ಹರಿಜನ ಗಿರಿಜನರ ಮಕ್ಕಳು ಕಂಪಲ್ಸರಿಯಾಗಿ ವಿದ್ಯಾಭ್ಯಾಸವನ್ನು ತೆಗೆದುಕೊಳ್ಳಬೇಕು ಎಂದು ಒಂದು ಲೆಜಿಸ್ಲೇಷನ್ ಏತಕ್ಕೆ ತರಬಾರದು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ' A Legislation measure to see that all children of S.C/S.T should get compulsory education" ಎಂದು ಮಾಡಬೇಕು. ಅದನ್ನು ಮಾಡದೆ ಇದಕ್ಕೆ ಕೋಟಿ ಗಟ್ಟಲೆ ಹಣವನ್ನು ಒದಗಿಸಿದರೂ ಕೂಡ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಯಾವೊತ್ತಿನ ದಿವಸ ಹರಿಜನ ಗಿರಿಜನರ ಯುವಕರನ್ನು ವಿದ್ಯಾವಂತರನ್ನಾಗಿ ಮಾಡುತ್ತಾರೆಯೋ ಆಗ ಹರಿಜನ ಗಿರಿಜನರ ಸಮಸ್ಯೆಗಳು ಬಗೆಹರಿಯುತ್ತವೆ. ಇದರಲ್ಲಿ ನನಗೆ ಪೂರ್ಣವಾದ ನಂಬಿಕೆ ಇದೆ. ನಾನು ಹರಿಜನರ ಮನೆಯವರ ಹತ್ತಿರ ಹೆಚ್ಚು ಸಂಬಂಧವನ್ನು ಇಟ್ಟುಕೊಂಡಿದ್ದೇನೆ. ಅವರು ಏನು ಮಾಡುತ್ತಾರೆ ಎಂದರೆ ಅವರ ಮಕ್ಕಳನ್ನು ನಾಲ್ಕಾಣೆ ಕೂಲಿ ಸಿಕ್ಕುತ್ತದೆ ಎಂದು ರಸ್ತೆಯಲ್ಲಿ ಕಾಂಕ್ರೀಟ್ ಹಾಕುವುದಕ್ಕೆ ಬಾಂಡ್ಲಿಯನ್ನು ಹೊರುವುದಕ್ಕೆ ಕಳುಹಿಸುತ್ತಾರೆ. ಅವರಿಗೆ ಒಂದು ತಿಂಗಳಿಗೆ ೧೫–೨೦ ರೂಪಾಯಿ ಸಂಪಾದನೆ ಮಾಡುವುದು ಮುಖ್ಯವೇ ಹೊರತು ವಿದ್ಯಾಭ್ಯಾಸಕ್ಕೆ ಅಷ್ಟು ಗಮನ ಕೊಡುವುದಿಲ್ಲ. ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎನ್ನುವ ಮನೋಭಾವ ಇಲ್ಲ. ಆದ್ದರಿಂದ ಅವರಿಗೆ ಕಂಪಲ್ಸರಿ ಎಜುಕೇಷನ್ ಕೊಡುವ ಬಗ್ಗೆ ಒಂದು ಲೆಜಿಸ್ಲೇಷನ್ ತೆಗೆದುಕೊಂಡು ಬಂದು ಅವರ ಮಕ್ಕಳನ್ನು ಓದಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಆ ಸಂಬಂಧದಲ್ಲಿ ಸರ್ಕಾರಕ್ಕೆ ಹೆಚ್ಚು ಖರ್ಚಾದರೂ ಕೂಡ ಅದನ್ನು ಹೊರುವುದಕ್ಕೆ ಸರ್ಕಾರ ಸಿದ್ಧರಾಗಿದ್ದರೆ ಅದಕ್ಕೆ ನಾವು ನಮ್ಮ ಪೂರ್ಣವಾದ ಬೆಂಬಲವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ನಾನು ಅನೇಕ ಕಟ್‌ಮೋಷನ್‌ಗಳನ್ನು ಕಳುಹಿಸಿದ್ದೇನೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಈಗ ಸರ್ಕಾರದವರು ಎಜುಕೇಷನ್ ಇಲಾಖೆಯನ್ನು ರೀಆರ್ಗನೈಜ್ ಮಾಡಿದ್ದಾರೆ. ಅವರು ಒಳ್ಳೆಯ ಸದುದ್ದೇಶವನ್ನು ಇಟ್ಟುಕೊಂಡು ರೀಆರ್ಗನೈಜ್ ಮಾಡಿದ್ದಾರೆ. ಆದರೆ ಅದರಿಂದ ಸರಿಯಾದ ಪ್ರತಿಫಲ ದೊರೆತಿಲ್ಲ. ರೀಆರ್ಗನೈಜೇಷನ್ ಆದಮೇಲೆ ಕೆಲವು ಆಫೀಸರಿಗೆ ಬಡ್ತಿ ಸಿಕ್ಕಿದೆಯೇ ಹೊರತು ಅದರಿಂದ ಸರಿಯಾದ ಪ್ರತಿಫಲ ದೊರೆತಿಲ್ಲ. ಆದ್ದರಿಂದ ರೀಆರ್ಗನೈಜೇಷನ್ ಆದಮೇಲೆ ವಿದ್ಯಾಭ್ಯಾಸಕ್ಕೆ ಎಷ್ಟು ಅನುಕೂಲ ಆಯಿತು ಎಂಬುದನ್ನು ಅಸೆಸ್ ಮಾಡಿ ರಿವ್ಯೂ ಆಗಬೇಕು. ಸರ್ಕಾರಕ್ಕೆ ನನ್ನ ಒಂದು ಆರೋಪಣೆ ಏನೆಂದರೆ ವಿದ್ಯಾಭ್ಯಾಸದ ಬಗ್ಗೆ ಕಳೆದ ೨೫ ವರ್ಷಗಳಿಂದ ಆಗಿಂದಾಗ್ಗೆ ಅನೇಕ ಬದಲಾವಣೆಗಳು ಆಗುತ್ತವೆ. ಈ ರೀತಿ ಅನೇಕ ಬದಲಾವಣೆಗಳಿಂದ ಹಣ ವ್ಯಯವಾಗುತ್ತದೆ. ಆದರೆ ಅದರಿಂದ ಪರಿಣಾಮಕಾರಿಯಾದ ಪ್ರತಿಫಲ ದೊರೆಯುವುದಿಲ್ಲ. ಹೀಗೆ ಸರ್ಕಾರದವರು ಮಲ್ಟಿಪರ್ಪಸ್ ಸ್ಕೂಲುಗಳನ್ನು ತೆರೆದು ಬೇಕಾದಷ್ಟು ಉಪಾಧ್ಯಾಯರನ್ನು ನೇಮಕ ಮಾಡಿದರು. ಬೇಕಾದಷ್ಟು ಎಕ್ವಿಪ್‌ಮೆಂಟ್ ಅನ್ನು ತೆಗೆದುಕೊಂಡರು. ಆಮೇಲೆ ಮಲ್ಟಿಪರ್ಪಸ್ ಸ್ಕೀಮು ವಜಾ ಆಯಿತು. ಅದರಿಂದ ಬೇಕಾದಷ್ಟು ಹಣ ವ್ಯಯವಾಯಿತು. ಇದರಿಂದ ಆ ಸಂಬಂಧದಲ್ಲಿ ನೇಮಕ ಮಾಡಿಕೊಂಡ ಉಪಾಧ್ಯಾಯರಿಗೆ ಕೆಲಸವಿಲ್ಲ. ಎಕ್ವಿಪ್‌ಮೆಂಟ್‌ಗಳು ಕೊಳೆಯುತ್ತಿವೆ. ಆಗಿಂದಾಗ್ಗೆ ಎಜುಕೇಶನ್ ಮೇಲೆ ಎಕ್ಸ್‌ಪರಿಮೆಂಟ್ ವಿಪರೀತವಾಗಿ ನಡೆಯುತ್ತವೆ. ಯಾವುದಾದರೂ ಒಂದು ಫೈನಲ್ಲಿಗೆ ಬಂದು ಸರಿಯಾದ ರೀತಿಯಲ್ಲಿ ಎಜುಕೇಷನ್ ನಡೆಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಆಗಿಂದಾಗ್ಗೆ ಸ್ಕೀಮು ಬದಲಾವಣೆ ಮಾಡತಕ್ಕದ್ದು ಆರ್ಥಿಕ ದೃಷ್ಟಿಯಿಂದ ಸರಿಯಾದದಲ್ಲ ಎನ್ನತಕ್ಕಂಥಾದ್ದು ನನ್ನ ಸಲಹೆ. ಏತಕ್ಕೆಂದರೆ ಡಾ|| ರಾಧಾಕೃಷ್ಣ ಅವರ ರಿಪೋರ್ಟ್ ಬಂತು, ಕೋಠಾರಿಯವರ ರಿಪೋರ್ಟ್ ಬಂತು. ಶ್ರೀಮಾನ್ ಕೆ. ಹನುಮಂತಯ್ಯನವರ ಕಾಲದಲ್ಲಿ ಒಂದು ರಿಪೋರ್ಟ್ ಬಂತು. ಎರಡು ವರ್ಷ ಪಿ.ಯು.ಸಿ. ಇದ್ದದ್ದನ್ನು ಬದಲಾವಣೆ ಮಾಡಿ ಒಂದು ವರ್ಷ ಮಾಡಿದ್ದಾರೆ. ಈ ರೀತಿ ಬದಲಾವಣೆ ಮಾಡುವುದರಿಂದ ಏನಾಗುತ್ತದೆ ಎಂದರೆ ಅನೇಕ ಎಕ್ವಿಪ್‌ಮೆಂಟ್‌ಗಳನ್ನು ಒದಗಿಸುತ್ತಾರೆ. ಅವು ಯಥಾಪ್ರಕಾರ ಹಾಗೆಯೇ ಉಳಿಯುತ್ತವೆ. ಒಂದು ಉದಾಹರಣೆ ಹೇಳಬೇಕಾದರೆ ಈ ಮಲ್ಟಿಪರ್ಪಸ್ ಸ್ಕೀಮಿನಲ್ಲಿ ಒಂದು ಕಡೆ ೧೦ ಟೈಪ್‌ರೈಟರುಗಳನ್ನು ಒದಗಿಸಿದರು. ಅದರಲ್ಲಿ ತರಪೇತಿಯನ್ನು ಕೊಡುವುದಕ್ಕೆ ಉಪಾಧ್ಯಾಯರನ್ನೂ ಗೊತ್ತು ಮಾಡಿಕೊಂಡರು. ಆದರೆ ಈ ಪರೀಕ್ಷೆಗಳಲ್ಲಿ ಯಾರೂ ಶ್ರದ್ಧೆ ವಹಿಸುತ್ತಾ ಇಲ್ಲ. ಆದ ಕಾರಣ ಅವು ಹಾಗೆಯೇ ಬಿದ್ದಿವೆ. ಆದ್ದರಿಂದ ಈ ವಿದ್ಯಾಭ್ಯಾಸದ ವಿಷಯದಲ್ಲಿ ಯಾವುದಾದರೂ ಒಂದು ಫೈನಾಲಿಟಿಗೆ ಬಂದು ಮಕ್ಕಳಿಗೆ ಒಂದು ಸರಿಯಾದ ವಿದ್ಯಾಭ್ಯಾಸವನ್ನು ಕೊಡುವ ಬಗ್ಗೆ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ಅದು ಕೆಲವು ದಿವಸಗಳಾದರೂ ಸರಿಯಾಗಿ ನಡೆಯುವ ರೀತಿಯಲ್ಲಿ ಮಾಡುವುದು ಉತ್ತಮ. ಆಗಿಂದಾಗ್ಗೆ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾವಣೆ ಮಾಡತಕ್ಕದ್ದು ಪರಿಣಾಮಕಾರಿಯಾದ ಫಲಿತಾಂಶ ದೊರೆಯುವುದಿಲ್ಲ ಎಂದು ನನ್ನ ಅನುಭವ. ಸುಮಾರು ೩೮ ವರ್ಷಗಳ ಕಾಲ ಉಪಾಧ್ಯಾಯನ ಕೆಲಸ ಮಾಡಿದ್ದೇನೆ. ಈಗಲೂ ದಿವಸಕ್ಕೆ ೩ ಗಂಟೆಗಳ ಕಾಲ ಕ್ಲಾಸ್ ತೆಗೆದುಕೊಳ್ಳದೆ ಬೇರೆ ಯಾವ ಕೆಲಸವನ್ನೂ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನೀವು ಯಾವುದನ್ನು ಟೀಚ್ ಮಾಡುತ್ತೀರಿ ?

ಶ್ರೀ ಟಿ. ಆರ್. ಶಾಮಣ್ಣ.—ಅಕೌಂಟೆನ್ಸಿ, ಬ್ಯಾಂಕಿಂಗ್ ಮತ್ತು ಕಾಮರ್ಸ್ ಅನ್ನು ನಾನು ಟೀಚ್ ಮಾಡುತ್ತೇನೆ. ನಾನು ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದೇನೆ. ಆದ್ದರಿಂದ ವಿದ್ಯಾಭ್ಯಾಸ ದಲ್ಲಿ ಉಪಾಧ್ಯಾಯರ ಪಾತ್ರ ಅತಿ ಮುಖ್ಯವಾದದ್ದು ಎಂದು ನನ್ನ ಭಾವನೆ. ವಿದ್ಯಾಭ್ಯಾಸ ಸರಿಹೋಗ ಬೇಕಾದರೆ ಉಪಾಧ್ಯಾಯರು ಸರಿಹೋದರೆ ಮಾತ್ರ ಸರಿಹೋಗುತ್ತದೆ ಇಲ್ಲದಿದ್ದರೆ ಅದು ಸರಿಹೋಗು ವುದು ಕಷ್ಟ. ಉಪಾಧ್ಯಾಯರ ಹೊಟ್ಟೆ ಬಟ್ಟೆಯನ್ನು ನೋಡಿಕೊಳ್ಳಬೇಕಾದ ಕರ್ತವ್ಯ ಸರ್ಕಾರದ್ದು ಇದೆ, ಸಾರ್ವಜನಿಕರದು ಇದೆ. ಹಿಂದೆ ಯಾವೊತ್ತೂ ಕೂಡ ಉಪಾಧ್ಯಾಯರು ಆಗಲೀ ಡಾಕ್ಟರಾಗಲೀ ತಮ್ಮ ಬೇಡಿಕೆಗಳ ಬಗ್ಗೆ ಸ್ಟ್ರೈಕ್ ಮಾಡುವ ಪರಿಸ್ಥಿತಿ ಇರಲಿಲ್ಲ, ಈಗ ಉಪಾಧ್ಯಾಯರೂ ಕೂಡ ಕೋಆಪರೇಟ್ ಮಾಡುವುದಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಉಪಾಧ್ಯಾಯರ ಕಷ್ಟವನ್ನು ಪರಿಹಾರ ಮಾಡಬೇಕಾದ್ದು ಸರ್ಕಾರದ ಮತ್ತು ಸಾರ್ವಜನಿಕರ ಕರ್ತವ್ಯ ಇದೆ ಆದರೆ ಮುಖ್ಯವಾಗಿ ಉಪಾ ಧ್ಯಾಯರು ಮಕ್ಕಳ ಬೆಳವಣಿಗೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯಗಮನವನ್ನು ಕೊಡುವುದನ್ನು ಉಪಾ ಧ್ಯಾಯರು ಮಾಡದೆ ಹೋದರೆ ಸಮಾಜಕ್ಕೆ ಸೇವೆ ಮಾಡಿದ ಹಾಗೆ ಆಗುವುದಿಲ್ಲ.

ಏಕೆಂದರೆ ವಿದ್ಯಾಭ್ಯಾಸ ಏನಿದೆಯೋ ಇದು ಮಾರ್ಕೆಟಬಲ್ ಕಮಾಡಿಟಿ ಅಲ್ಲ. ಗುರುವಿನಲ್ಲಿ ಸರಿಯಾದಂಥ ವರ್ಚಸ್ಸು ಇದರೆ ಕೆಟ್ಟ ವಿದ್ಯಾರ್ಥಿಗಳನ್ನು ಸಹ ಸರಿಮಾಡುವ ಅವಕಾಶವಿದೆ. ನಾನೂ ಒಂದು ವಿದ್ಯಾ ಸಂಸ್ಥೆಯನ್ನು ನಡೆಸುತ್ತಿದ್ದೇನೆ. ಸುಮಾರು ೫೦೦ ವಿದ್ಯಾರ್ಥಿಗಳು ಇದ್ದಾರೆ ಅವರಲ್ಲಿ ಅರ್ಧ ಭಾಗ ಹೆಣ್ಣು ಮಕ್ಕಳು ಮಿಕ್ಕ ಅರ್ಧ ಭಾಗ ಗಂಡುಮಕ್ಕಳೂ ಇದ್ದಾರೆ. ನಮ್ಮಲ್ಲಿ ಬಹಳ ಶಿಸ್ತು. ನಿಯಮ ಇದೆ ಅವರಲ್ಲಿ ಯಾರು ಕೂಡ ಸಿಗರೇಟ್ ಸೇದುವುದಕ್ಕೆ ಅವಕಾಶವಿಲ್ಲ ಹೆಣ್ಣು ಮಕ್ಕಳ ವಿಷಯದಲ್ಲಿ ಯಾರಾ ದರೂ ಏನಾದರೂ ಮಾತನಾಡಿದರೆ ಬೂಡ್ಸ್‌ಕಾಲಿನಲ್ಲಿಯೇ ಒದೆಯುತ್ತೇವೆ. ಉಪಾಧ್ಯಾಯರಾದವರು ತಾನು ತನ್ನ ನಡವಳಿಕೆಗಳನ್ನು ಸರಿಯಾಗಿ ನೋಡಿ ಕೊಂಡು ಹೋದರೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸರಿಯಾದ ರೀತಿಯಲ್ಲಿ ಪಾಠ ಪ್ರವಚನಗಳನ್ನು ಮಾಡುತ್ತಿದ್ದರೆ ಬಹಳ ಒಳ್ಳೆಯದು. ಗುರುವಿನ ಬಗ್ಗೆ ಗೌರವ ಬರುವ ರೀತಿಯಲ್ಲಿ ಪಾಠಗಳನ್ನು ನಡೆಸಿದರೆ ಆಗ ವಿದ್ಯಾರ್ಥಿಗಳನ್ನು ಚೆನ್ನಾಗಿ ತಿದ್ದುವುದಕ್ಕೆ ಸಾಧ್ಯ. ಇಂತಹುಗಳನ್ನು ಲೆಜಿಸ್ಲೇಷನ್‌ನಿಂದ ಸರಿಮಾಡುತ್ತೇವೆಂದು ಹೊರಟರೆ ಅದು ಸರಿಹೋಗುವುದಿಲ್ಲ. ಉಪಾಧ್ಯಾಯ ವರ್ಗದಲ್ಲಿ ಹೇಳುವುದಾದರೆ ಅವರ ಬೇಡಿಕೆಗಳನ್ನು ಸರ್ಕಾರದರು ಈಡೇರಿಸಲಿಲ್ಲವೆಂದು ಪಾಠಪ್ರವಚನಗಳ ಬಗ್ಗೆ ಅವರು ನಿರ್ಲಕ್ಷ್ಯ ಮಾಡಬಾರದು. ಅದರಲ್ಲಿ ಯಾವತ್ತೂ ಅನ್ಯಾಯ ಮಾಡಬೇಡಿ ಎಂಬುದಾಗಿ ನಾನು ಉಪಾಧ್ಯಾಯ ವರ್ಗಕ್ಕೆ ಈ ಸಂರ್ಭದಲ್ಲಿ ಹೇಳಬೇಕಾಗಿದೆ ಅವರು ಪಾಠ ಹೇಳುವುದಕ್ಕೆ ಮುಂಚಿತವಾಗಿಯೇ ಸರಿಯಾದ ರೀತಿಯಲ್ಲಿ ಪ್ರಿಪರೇಷನ್ಸ್ ಮಾಡಿಕೊಂಡಿರಬೇಕು. ವಿದ್ಯಾರ್ಥಿಗಳಲ್ಲಿ ಬಹುವಾಗಿ ವೀಕರ್ ಸ್ಟೂಡೆಂಟ್ಸ್ ಯಾರು ಎಂಬುದನ್ನು ತಿಳಿದು ಅವರ ಬಗ್ಗೆ ಇವರು ಹೆಚ್ಚಿನ ಗಮನ ಕೊಡಬೇಕು. ಹಿಂದೆ ಉಪಾಧ್ಯಾಯರು ಸಾಕಾದಷ್ಟು ವಿದ್ಯಾರ್ಥಿಗಳ ಮೇಲೆ ಅವರ ಪ್ರಭಾವವನ್ನು ಬೀರುತ್ತಿದ್ದರು. ಆದರೆ ಈಗ ಉಪಾಧ್ಯಾಯರ ಪ್ರಭಾವ ಮಕ್ಕಳ ಮೇಲೆ ಸಾಕಷ್ಟು ಇಲ್ಲದೇ ಇರುವುದ ರಿಂದ, ವಿದ್ಯೆಯ ಕಡೆ ಮಕ್ಕಳೂ ಸಹ ಸರಿಯಾದ ಗಮನವನ್ನು ಕೊಡದೇ ಇರುವುದರಿಂದ, ಉಪಾಧ್ಯಾಯರ ಬೇಡಿಕೆಗಳ ಹಾಗೂ ಕಷ್ಟಗಳ ಬಗ್ಗ ಹೋರಾಟ ಮಾಡೋಣವೆಂದು ಹೇಳುವುದರಿಂದ, ಅಂತಹ ಮಕ್ಕಳನ್ನು ಕೈಬಿಡಬೇಕಾಗಿದೆ. ಇದರಿಂದ ಅವರ ಜೀವನ ಸಮಸ್ಯೆ ಬಹಳ ಕಟುವಾಗಿರುವಾಗ, ಆ ಮಕ್ಕಳನ್ನು ತಂದೆ ತಾಯಿಗಳು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ, ಸರ್ಕಾರದವರೂ ಸಹ ಸಾಕಾದಷ್ಟು ಉಪಾಧ್ಯಾಯರ ಬಗೆ ಹೆಚ್ಚಿನ ಗಮನಕೊಡಬೇಕು. ಅವರ ಸ್ಥಾನಮಾನಗಳನ್ನು ಉತ್ತಮಗೊಳಿಸಬೇಕು. ಈಗಾಗಲೇ ಅದರ ಬಗ್ಗೆ ಸರ್ಕಾರದವರು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಅವರ ಮೇಲೆ ನಾನು ಆರೋಪವೇನೂ ಮಾಡುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ವಾಗುತ್ತದೆಂದು ನಾನು ಉಪಾಧ್ಯಾಯರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಇನ್ನು ತಮ್ಮ ವರದಿಯಲ್ಲಿ ಕಿತ್ತೂರ ರಾಣಿ ಚನ್ನಮ್ಮ ಸೈನಿಕ ಸ್ಕೂಲ್, ಬಿಜಾಪುರ, ಇದನ್ನು ನಾನು ನೋಡಿದ್ದೇನೆ. ಮಾನ್ಯ ಶ್ರೀ ಕಂಠಿಯವರು ಇರುವ ಕಾಲಕ್ಕೆ ಅದು ಸ್ವಲ್ಪ ಚನ್ನಾಗಿ ಕೆಲಸಮಾಡುತ್ತಿತ್ತು. ಈಗ ಅಲ್ಲಿ ಸ್ವಲ್ಪ ಅನಾನುಕೂಲತೆಗಳಿವೆ. ಅದನ್ನು ಕೂಡಲೇ ಪರಶೀಲನೆಮಾಡಬೇಕೆಂದು ನಾನು ಮಂತ್ರಿ ಗಳನ್ನು ಬೇಡಿಕೊಳ್ಳುತ್ತೇನೆ. ಮೊದಲನೆಯ ಅಂಶ ಅಲ್ಲಿ ಸರಿಯಾದ ಶಿಸ್ತು ಇಲ್ಲ, ಆ ಕಡೆ ಸರ್ಕಾರ ಗಮನಕೊಡಬೇಕು. ಹಿಂದೆ ವಿದ್ಯಾಭ್ಯಾಸ ಇಲಾಖೆಯವರು ಉಪಾಧ್ಯಾಯರಿಗೆ ಸಂಬಳವನ್ನು ಕೊಡು ತ್ತಿದ್ದರು, ಪರೀಕ್ಷೆಗೆ ಸಂಬಂಧಪಟ್ಟ ಸಬ್ಜೆಕ್ಟ್ ಇಲ್ಲದಿದ್ದರೂ ಸಹ ಹಿಂದೆ ಮೇಸ್ಟ್ರುಗಳಿಗೆ ಸಂಬಳ ಸಿಗುತ್ತಿತ್ತು. ಯಾರೂ ಕೂಡ ಹಿಂದಿನಿಂದಲೂ ತೆಗೆದುಕೊಳ್ಳುತ್ತಿಲ್ಲವಷ್ಟೇ. ಹಿಂದಿ ನ್ಯಾಷನಲ್ ಲ್ಯಾಂಗ್ವೇಜ್ ಬೇಕು ಎನ್ನುವುದರಿಂದ ಅದು ಇರಬೇಕು. ಆದರೆ ಹಿಂದಿನ ಪಾಠವನ್ನು ಕಲಿಯುವುದಕ್ಕೆ ಆಸಕ್ತರಾಗಿ ಇಲ್ಲದೇ ಇರು ವಾಗ ಬರೀ ಹಿಂದಿ ಉಪಾಧ್ಯಾಯರಿಗೆ ಸಂಬಳ ಕೊಡುತ್ತಿದ್ದರೆ, ಅದರಿಂದೇನು ಪ್ರಯೋಜನ? ಒಟ್ಟಿನಲ್ಲಿ

ಹಿಂದಿ ಬಗ್ಗೆ ವ್ಯಾಸಂಗ ಸರಿಯಾಗಿ ಆಗಿಲ್ಲ. ಅಲ್ಲದೆ ಹಿಂದಿ ಸಬ್ಜೆಕ್ಟ್‌ನಲ್ಲಿ ಪರೀಕ್ಷೆಗಳಲ್ಲಿ ಮಾರ್ಕ್ಸ್ ತೆಗೆದು ಕೊಂಡಿರುವುದೂ ಸಹ ಬಹಳ ಕಡಿಮೆ. ಆದ್ದರಿಂದ ಹಿಂದಿಗೆ ಖರ್ಚುಮಾಡುವುದನ್ನು ಕೂಡಲೇ ನಿಲ್ಲಿಸ ಬೇಕು. ಅದನ್ನು ಹಿಂದಿ ಪ್ರಚಾರಕ್ಕೆ ಬೇಕಾದರೆ ಉಪಯೋಗಿಸಿ.

ನಾನು ಈಗ ಒಂದು ಕಾಮರ್ಸ್ ಸ್ಕೂಲನ್ನು ನಡೆಸುತ್ತಿದ್ದೇನೆ ಸುಮಾರು ೫೦೦ ಇಂತಹ ಶಾಲೆಗಳನ್ನು ಖಾಸಗೀಯವರು ನಡೆಸುತ್ತಿದ್ದಾರೆ. ಅತಿ ಮುಖ್ಯವಾಗಿ ಟೈಪ್‌ರೈಟಿಂಗ್ ಮತ್ತು ಷಾರ್ಟ್ ಹ್ಯಾಂಡ್ ಹೇಳಿ ಕೊಡುವ ಸಂಸ್ಥೆಗಳು ಇವೆ. ಏಳೆಂಟು ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಪ್ರತಿಯೊಂದು ಸಂಸ್ಥೆಯಲ್ಲಿಯೂ ಸುಮಾರು ೭ಸಾವಿರ ರೂಪಾಯಿಗಳಷ್ಟು ಖರ್ಚು ಮಾಡುವ ಒಂದು ಯೋಜನೆಯೂ ಇದೆ. ಆದ್ದರಿಂದ ಕಾಮರ್ಸ್ ಎಜುಕೇಷನ್ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿ ಫೀಸನ್ನು ಹೆಚ್ಚಿಸಬೇಕೆಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಕ್ಷಣ ಒಪ್ಪಿಕೊಂಡು ಅದನ್ನು ಮಾಡಿಕೊಟ್ಟಿದ್ದಾರೆ. ಆ ಕಡೆ ಸರ್ಕಾರ ಗಮನ ಹೋಗಬೇಕು.

ಇನ್ನು ಮಿಡ್ಡೆ ಮೀಲ್ಸ್ ಬಗ್ಗೆ ತಮ್ಮ ವರದಿಯಲ್ಲಿ ಹೇಳಿದ್ದೀರಿ. ಅದರಲ್ಲಿ ಹೆಚ್ಚಿಗೆ ದುರುಪಯೋಗ ವಾಗುತ್ತಿದೆಂದು ಹೇಳಿದೆ. ಅದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಅದನ್ನು ಎಲ್ಲೆಲ್ಲಿ ಹೇಗೆ ಹೇಗೆ ಹಂಚುತ್ತಿದ್ದಾರೆ ಎಂದನ್ನು ಸರ್ಕಾರ ಮನಗಾಣಬೇಕು. ಅದರಿಂದ ಎಷ್ಟರಮಟ್ಟಿಗೆ ಮಕ್ಕಳಿಗೆ ಉಪಯೋಗ ವಾಗುತ್ತಿದೆ ಎಂಬ ಬಗ್ಗೆ ಒಂದು ಪರಿಶೀಲನೆ ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಸ್ಕಾಲರ್‌ಷಿಪ್‌ಗಳನ್ನು ಕೊಡುವುದಕ್ಕೆ ಮೆರಿಟ್ ಕಂ ಪಾವರ್ಟಿ ಸರ್ಟಿಫಿಕೇಟುಗಳನ್ನು ಕೊಡು ತ್ತಿದ್ದಾರೆ. ಸತ್ಯಕ್ಕೆ ದೂರವಾದಂಥ ಅಂಶಗಳನ್ನು ಕೊಟ್ಟು ಸರ್ಟಿಫಿಕೇಟ್ ತಗೆದುಕೊಂಡು ಹೋಗುವವರಿಗೆ ಅನುಕೂಲವಾಗುತ್ತಿದೆ. ಇನ್‌ಫ್ಲುಯೆನ್ಸ್ ಇರುವವರಿಗೆ ಮಾತ್ರ ಅನುಕೂಲವಾಗುತ್ತಿದೆ. ನಿಜವಾಗಿ ಬಡ ವರಾಗಿರುವವರಿಗೆ ಈ ಸೌಕರ್ಯ ಸಿಗುತ್ತಿಲ್ಲ. ಅದರ ಬಗ್ಗೆ ಸರ್ಕಾರದವರು ಸ್ವಲ್ಪ ಮಟ್ಟಿಗೆ ಪರಿಶೀಲನೆಮಾಡ ಬೇಕು. ಮೆರಿಟ್ ಇರುವವರಿಗೆ ಇದು ಸಿಗುವುದು ಬಹಳ ಕಷ್ಟ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡು ವುದು ಸರ್ಕಾರದ ಕರ್ತವ್ಯ. ನಿಜವಾಗಿಯೂ ಬಡವರಾಗಿದ್ದರೆ ಅವರಿಗೆ ತಕ್ಕ ಪ್ರೋತ್ಸಾಹ ದೊರೆಯು ವಂತೆ ಸರ್ಕಾರ ವ್ಯವಸ್ಥೆಮಾಡಬೇಕು.

ಇನ್ನು ಬಡ್ಜೆಟ್ಟಿನಲ್ಲಿ ಯಾವ ಬೇಡಿಕೆಯನ್ನು ಕೇಳಿದರೂ ಕೂಡ ಅರ್ಧ ಮಿಲಿಯನ್ ಜಾಬ್ ಎಂಬುದು ಬರೀ ಒಂದು ಸ್ಲೋಗನ್ ಆಗಿದೆ. ನಿಜವಾಗಿಯೂ ಈ ದೇಶದ ಜನರಿಗೆ ಕೆಲಸಗಳು ಸಾಕಷ್ಟು ದೊರೆಯ ಬೇಕೆನ್ನುವ ಕೂಗು ಅನೇಕ ಜನರಿಗೆ ಸ್ವಲ್ಪವು ಮುಟ್ಟಿಲ್ಲ. ಆದ್ದರಿಂದ ತಾವು ಇನ್ನು ಮುಂದೆ ಕೊಡುವ ವಿದ್ಯಾಭ್ಯಾಸ ಜಾಬ್ ಓರಿಯೆಂಟೇಷನ್ ಆಗಬೇಕೆಂಬುದೇ ನನ್ನ ಬೇಡಿಕೆ.

ಇನ್ನು ನಾನು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್ ಬಗ್ಗೆ ಹೇಳುವುದಾದರೆ, ನಾನು ವೃತ್ತಿಯಲ್ಲಿ ಉಪಾಧ್ಯಾಯನಾಗಿದ್ದರೂ ಕಾಂಟ್ರಾಕ್ಟ್ ಕೆಲಸಗಳನ್ನು ಮಾಡುತ್ತಿದ್ದೇನೆ. ಅನೇಕ ಇಂಜಿನಿಯರ್ಸ್ ಬಂದು ನನ್ನ ಹತ್ತಿರ ಕಂಪ್ಲೇಂಟ್ ಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ ಇಂಜಿನಿಯರ್‌ಗಳ ಮಾಡಿದ ಕೆಲಸಗಳನ್ನು ನೋಡಿ ಅದರಲ್ಲಿ ಕೆಲವಾರು ನ್ಯೂನತೆಗಳನ್ನು ಹುಡುಕಿ ಪುನಃ ಆ ಕೆಲಸಗಳನ್ನು ಮಾಡಿಸುವುದಕ್ಕೆ ನನಗೆ ಸಾಧ್ಯವಾಗುತ್ತದೆ. ಆದ್ದರಿಂದ ಯಾವ ಕೆಲಸವನ್ನೇ ಆಗಲಿ ನಾವು ಶ್ರದ್ಧೆಯಿಂದ ಮತ್ತು ನಾಯ್ಯದಿಂದ ಮಾಡಿದ್ದೇ ಆದರೆ ಖಂಡಿತವಾಗಿಯೂ ಯಾರೇ ಆಗಲೀ ಮುಂದಕ್ಕೆ ಬರುವುದಕ್ಕೆ ಸಾಧ್ಯವಿದೆ. ಈಗ ಅನೇಕ ನಿರುದ್ಯೋಗಿ ಇಂಜಿನಿಯರುಗಳಿಗೆ ಹೆಚ್ಚುಹೆಚ್ಚಾಗಿ ಕೆಲಸಗಳನ್ನು ಒದಗಿಸ ಬೇಕಾಗಿದೆ. ನನ್ನ ಬೇಡಿಕೆ ಏನೆಂದರೆ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ತಾವು ಸ್ವತಃ ಕೆಲಸ ಮಾಡುವುದನ್ನು ಕಲಿಯಬೇಕು. ಬರೀ ಪುಸ್ತಕಗಳನ್ನು ಓದಿದಾಕ್ಷಣವೇ ಏನೂ ಪ್ರಯೋಜನವಿಲ್ಲ. ಪ್ರಾಕ್ಟಿ ಕಲ್ಲಾಗಿ ಅನೇಕ ವಿಷಯಗಳನ್ನು ತಾವೇ ಸ್ವತಃ ಕಲಿಯಬೇಕು. ಹಿಂದೆ ಬಿಲ್, ಎಸ್ಟಿಮೇಟ್ ಅವರು ಪ್ರಿಪೇರ್ ಮಾಡುತ್ತಿದ್ದರು. ಈಗ ಹೊಸದಾಗಿ ನೇಮಕವಾದಂತಹವರು ಸರಿಯಾದ ಲೆಕ್ಕಗಳನ್ನು ಕೊಡು ವುದಕ್ಕೆ ಸಾಧ್ಯವಿಲ್ಲ, ಶಕ್ತಿ ಇಲ್ಲ ಅರ್ಹತೆಯೂ ಇರುವುದಿಲ್ಲ. ಆದ್ದರಿಂದ ಅವರಿಗೆ ಎಷ್ಟರಮಟ್ಟಿಗೆ ಬಿಲ್, ಎಸ್ಟಿಮೇಟ್ಸ್, ಪ್ಲಾನ್, ತಯಾರುಮಾಡುವುದಕ್ಕೆ ಬರುತ್ತದೆ ಎಂಬುವುದನ್ನು ನೋಡಬೇಕು. ಒಂದೊಂದು ವೇಳೆ ಕೂಲಿಗಾರರು ಬಾರದೇ ಹೋದರೆ ತಾವೇ ನಿಂತು ಆ ಕೆಲಸಗಳನ್ನು ಮಾಡಿಸುವ ಶಕ್ತಿಯನ್ನು ಅವನು ಪಡೆದಿರಬೇಕು. ಬರೀ ಬುಕ್ ಜ್ಞಾನವೇ ಸಾಕೆಂದು ಹೇಳಬಾರದು. ಆದರಿಂದ ಸಮಸ್ಯೆಗಳು ಬಗೆಹರಿಯುವು ದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಇಂಜಿನಿಯರಿಂಗ್ ಕೆಲಸಗಳಿಗೆ ನೇಮಕವಾಗಿರುವವರಿಂದ ಅನೇಕ ಕೆಲಸ ಕಾರ್ಯಗಳು ಫೇಲ್ಯೂರ್ ಆಗಿವೆ. ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳನ್ನು ಟ್ರೈನಿಂಗ್ ಆದಮೇಲೆ ಬೇರೆ ಕಡೆಗಳಿಗೆ ಹೇಗೆ ಕಳುಹಿಸುವುದಿಲ್ಲವೆಂದು ಹೇಳುತ್ತೀರೋ ಹಾಗೆಯೇ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿ ಗಳು ಟ್ರೈನಿಂಗ್ ಪಡೆದಮೇಲೆ, ಒಂದು ವೇಳೆ ಅವರು ಬೇರೆ ಕಡೆಗೆ ಹೋಗಿ ಕೆಲಸಮಾಡುತ್ತೇವೆಂದರೆ ಕಳುಹಿಸಬಾರದು. ಅವರ ಸೇವೆಯನ್ನು ಇಲ್ಲಿಯೇ ಪಡೆಯಬೇಕು. ಒಂದುವೇಳೆ ಹಾಗೆ ಹೊರಗೆ ಹೋಗು

ತ್ತೇವೆಂದು ಹೇಳಿದರೆ, ಅಂತಹವರಿಗೆ ಡಿಗ್ರಿ, ಸರ್ಟಿಫಿಕೇಟ್ ಕೊಡುವುದಿಲ್ಲವೆಂದು ಹೇಳಬೇಕು. ಇಂಜಿನಿಯರಿಂಗ್ ಫಾಸ್ ಆದಕೂಡಲೇ ಅಂತಹವರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬಾರದು. ಅದರಿಂದಲೇ ಅನೇಕ ಸಂದರ್ಭಗಳಲ್ಲಿ ಹಣ ಸುಮನೆ ವ್ಯರ್ಥವಾಗುತ್ತದೆ ಅದಕ್ಕಾಗಿ ಪ್ರಾಕ್ಟಿಕಲ್ಲಾಗಿ ಕೆಲಸ ಮಾಡುವ ಕ್ರಮವನ್ನು ಇಂಜಿನಿಯರಿಂಗ್ ಕಾಲೇಜ್ ಪಂಡಿತರ ಜೊತೆಯಲ್ಲಿ ಸೇರಿಕೊಂಡು ಕಲಿಯಬೇಕು. ಅವರಿಗೆ ಪ್ರಾಕ್ಟಿಕಲ್ ನಾಲೆಡ್ಜ್ ಬರುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಅವರು ಹಾಕಿಕೊಳ್ಳಬೇಕು.

ಈ ದಿವಸ ಮೆಡಿಕಲ್ ಗ್ರಾಜುಯೇಟುಗಳಿಗೆ ಹೌಸ್‌ಸರ್ಜನ್‌ಷಿಪ್ ಆಗದ ವಿನಾ ಅವರಿಗೆಡಿಗ್ರಿಯುವನ್ನು ಕೊಡುತ್ತಿಲ್ಲ. ಅದೇ ರೀತಿ ಅವರಿಗೆ ಇನ್ನೊಂದು ನಿರ್ಬಂಧವನ್ನು ಕೂಡ ಸರ್ಕಾರದವರು ವಿಧಿಸಲೇ ಬೇಕು. ಅದೇನೆಂದರೆ ಈ ದಿವಸ ಯಾವ ಡಾಕ್ಟರಾಗಲಿ ಆತನಿಗೆ ಗ್ರಾಮಂತರ ಪ್ರದೇಶಕ್ಕೆ ಹೋಗಿ ಕೆಲಸ ಮಾಡುವುದಕ್ಕೆ ಇಷ್ಟವಿರುವುದಿಲ್ಲ. ಎಲ್ಲರಿಗೂ ಬೆಂಗಳೂರು-ಹುಬ್ಬಳ್ಳಿ ಮತ್ತು ಧಾರ್‍ವಾಡಗಳಂಥ ದೊಡ್ಡ ದೊಡ್ಡ ನಗರಗಳೇ ಬೇಕು ಅಂದರೆ ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡತಕ್ಕವರು ಯಾರು? ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ ಈ ಮೆಡಿಕಲ್ ಗ್ರಾಜುಯೇಟುಗಳಾಗುವುದಕ್ಕೆ ಮುನ್ನ ಪ್ರತಿಯೊಬ್ಬರೂ ಈಗ ಈ ಹೌಸ್ ಸರ್ಜನ್‌ಷಿಪ್ ನಿರ್ಬಂಧವಿದ್ದಹಾಗೆ ಒಂದು ವರ್ಷಕಾಲ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿ ಸೇವೆ ಮಾಡಿ ಬಂದರೇ ಡಿಗ್ರಿ ಸರ್ಟಿಫಿಕೇಟುಗಳನ್ನು ಕೊಡುಲಾಗುತ್ತದೆ ಎಂಬ ಒಂದು ನಿರ್ಬಂಧವನ್ನು ಹಾಕುವುದು ಉತ್ತಮವಾಗಿರುವುದೆಂದು ನನಗೆ ಕಂಡುಬರುತ್ತದೆ.

ಇನ್ನು ಪಠ್ಯ ಪುಸ್ತಕಗಳ ಬಗ್ಗೆ ಒಂದು ಮಾತು ಈಗ ರಾಷ್ಟ್ರೀಕರಣವಾಗಿದೆ. ಇದು ಬಹಳ ಒಳ್ಳೆಯದೇ. ಹಿಂದೆಲ್ಲಾ ಯಾವುದೋ ಪ್ರಭಾವಗಳಿಗೆ ಒಳಗಾಗಿ ಅವರ ಬರವಣಿಗೆಯಲ್ಲಿ ಅರ್ಥವಿರಲಿ-ಇಲ್ಲದಿರಲಿ ಅವರು ಬರೆದುದನ್ನು ಪಠ್ಯಪುಸ್ತಕವಾಗಿ ಇಡಲಾಗುತ್ತಿತ್ತು. ಆದರೆ ಇನ್ನು ಹಾಗೆ ಮಾಡ ಬಾರದು. ಯಾರು ಒಳ್ಳೇ ವಿದ್ಯಾವಂತರಾಗಿದ್ದಾರೋ ಪರಿಣಿತರಾಗಿದ್ದಾರೋ ಅಂಥವರಿಗೆ ಮಾತ್ರ ಪಠ್ಯಪುಸ್ತಕಗಳನ್ನು ಬರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಕನ್ನಡದ ಅಭಿವೃದ್ಧಿಗಾಗಿ ೧೦ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಆದರೆ ದೇಶದಲ್ಲಿ ಕನ್ನಡ ಮಾಧ್ಯಮವಾಗಬೇಕು, ಕನ್ನಡ ಆಡಳಿತ ಭಾಷೆಯಾಗಬೇಕು, ಎಂದು ನಾವೆಲ್ಲರೂ ಹೇಳುತ್ತಿದ್ದೇವೆ. ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮಹರಾಷ್ಟ್ರ-ಕೇರಳ ಮತ್ತು ತಮಿಳುನಾಡುಗಳಲ್ಲಿ ಅವರ ಭಾಷೆ ಅಲ್ಲ ಆಡಳಿತ ಭಾಷೆಯಾಗುವುದಕ್ಕೆ ಏನು ಕಾರಣ? ಇಲ್ಲಿ ಕನ್ನಡ ಆಡಳಿತ ಭಾಷೆಯಾಗದೆ ಇರಲು ಏನು ಕಾರಣ? ಇಲ್ಲಿ ಇರತಕ್ಕಪ್ರತಿಯೊಬ್ಬ ಅಧಿಕಾರಿಯೂ ತನ್ನ ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಸೇರಿಸುವುದಕ್ಕೆ ಆಕಾಂಕ್ಷೆ ಪಡುತ್ತಿದ್ದಾರೆಯೇ ವಿನಾ ಕನ್ನಡ ಶಾಲೆಗೆ ಸೇರಿಸುತ್ತಿಲ್ಲ. ಅವರಂತೆಯೇ ಇಲ್ಲಿ ಭಾಷಣ ಮಾಡತಕ್ಕ ಅನೇಕ ಕೂಡ ಇಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕು ಕನ್ನಡ ಮಾಧ್ಯಮವಾಗಬೇಕು ಎಂಬುದಾಗಿ ಭಾಷಣಗಳನ್ನು ಸದಸ್ಯರು ಬಿಗಿದು ತಮ್ಮ ಮಕ್ಕಳನ್ನು ಮಾತ್ರ ಇಂಗ್ಲೀಷ್ ಶಾಲೆಗಳಿಗೇ ಸೇರಿಸುತ್ತಿದ್ದಾರೆ. ಅಂದರೆ ಕನ್ನಡಿಗರಿಗೆ ಇಂಗ್ಲೀಷಿನ ಮೇಲಿರತಕ್ಕ ವ್ಯಾಮೋಹವಿನ್ನೂ ಹೋಗಿಲ್ಲ. ನಾವೆಲ್ಲರೂ ಇನ್ನೂ ಬರಿ ಪ್ಲಾಟ್‌ಫಾರ ಭಾಷಣಕಾರರು ಮಾತ್ರ ನಮ್ಮಲ್ಲಿ ಅನೇಕರಿಗೆ ಕನ್ನಡದಲ್ಲಿ ನಂಬಿಕೆ ಇಲ್ಲ. ಹೀಗಿರುವಾಗ ಬರೀ ಈ ೧೦ ಲಕ್ಷ ರೂಪಾಯಿ ಹಣವನ್ನು ಖರ್ಚುಮಾಡಿದಾಕ್ಷಣಕ್ಕೆ ಅಲ್ಲಿ ಕನ್ನಡದ ಅಭಿವೃದ್ಧಿಯಾಗಲಿಲ್ಲ. ಇಲ್ಲಿ ಸರ್ಕಾರದವರು ಮಾಡತಕ್ಕ ವೆಚ್ಚಕ್ಕೆ ಸರಿಯಾಗಿ ಅದರಿಂದ ಏನು ಪ್ರತಿಫಲ ಬಂದಿದೆ ಎಂಬುದನ್ನು ಪ್ರತಿವರ್ಷವೂ ರಿವ್ಯೂ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ನನ್ನ ಸ್ನೇಹಿತರಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ್ ಅವರನ್ನು ಸ್ಮರಿಸಬೇಕಾಗಿದೆ. ಕಾರಣ ಅವರು ಬಹಳ ಶ್ರದ್ಧೆಯಿಂದ ಕನ್ನಡಕ್ಕೆ ಶ್ರಮಿಸುತ್ತಿದ್ದಾರೆ. ಈಗಿನ ನಮ್ಮ ವಿಶ್ವವಿದ್ಯಾನಿಲಯಗಳ ಕುಲಪತಿಗಳೂ ಕೂಡ ಒಳ್ಳೆಯ ಕನ್ನಡಾಭಿಮಾನಿಗಳು. ಆದುದರಿಂದ ಇಲ್ಲಿ ಸರ್ಕಾರದವರು ಬರಿ ಒಂದು ದುಡ್ಡಿನ ಅಂಕಿ, ಅಂಶಗಳನ್ನು ಒದಗಿಸಿದಾಕ್ಷಣಕ್ಕೆ ನಮ್ಮಲ್ಲಿ ಕನ್ನಡ ಅಭಿವೃದ್ಧಿಯಾಯಿತು ಎಂದು ಭಾವಿಸುವುದು ಸರಿಯಲ್ಲ ಇದರ ಬಗ್ಗೆ ಸರ್ಕಾರದವರು ಸರಿಯಾದ ಒಂದು ಕ್ರಮವನ್ನು ಕೈಗೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ನಮ್ಮ ಮನೆಯ ಹತ್ತಿರ ಒಂದು ಇಂಗ್ಲೀಷ್ ಸ್ಕೂಲ್ ಇದೆ ಅಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸುವುದಕ್ಕೇ ೧೦ ರೂಪಾಯಿಗಳನ್ನು ಕೊಡಬೇಕು. ಬಿಲ್ಡಿಂಗ್ ಡೊನೇಷನ್ ಎಂದು ಪ್ರತಿಯೊಬ್ಬರಿಂದ ೧೦೦ ರೂಪಾಯಿಗಳನ್ನು ವಸೂಲುಮಾಡುತ್ತಿದ್ದಾರೆ. ಇದಾದ ನಂತರ ತಿಂಗಳ ಫೀಜು ಎಂದು ಪ್ರತಿಯೊಬ್ಬರಿಂದಲೂ ೧೦-೧೫ ರೂಪಾಯಿಗಳನ್ನು ವಸೂಲುಮಾಡಿಕೊಳ್ಳುತ್ತಿದ್ದಾರೆ. ಹೀಗೆ ಅಲ್ಲಿ ದುಡ್ಡಿನ ಸುರಿಮಳೆಯಾಗುತ್ತಿದೆ. ಜನರು ಸೈನ್ಯದೋಪಾದಿಯಲ್ಲಿ ಸಾಲಾಗಿ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವುದಕ್ಕೆ ನಿಂತಿರುತ್ತಾರೆ. ಜನರಲ್ಲಿ ಇಷ್ಟೊಂದು ವ್ಯಾಮೋಹವಿರುವಾಗ ಇನ್ನು ಇಲ್ಲಿ ಕನ್ನಡ ಬೆಳವಣಿಗೆಯಾಗಬೇಕು ಎಂದರೆ ಹೇಗೆ ಸಾಧ್ಯ? ಆದುದರಿಂದ ಈ ಇಂಗ್ಲೀಷ್ ಮೀಡಿಯಂ ಬಗ್ಗೆ ಸರ್ಕಾರದವರು ಕೂಡಲೇ ಒಂದು ನಿರ್ಧಾರಕ್ಕೆ ಬರಬೇಕು ಎಂದು ಹೇಳುತ್ತೇನೆ. ಇದನ್ನು ಮಾಡದ ವಿನಾ ಇಲ್ಲಿ ಕನ್ನಡದ ಏಳಿಗೆಯಾಗುವುದಿಲ್ಲ.

ಇನ್ನು ಈ ಲಲಿತಕಲಾ ಅಕಾಡಮಿ ಸಾಹಿತ್ಯ ಕಲಾ ಅಕ್ಯಾಡಮಿಗಳಲ್ಲಿ ಲಂಚದ ಪ್ರಭಾವ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದೆಯೆಂಬ ದೂರುಗಳು ಕೇಳಿಬರುತ್ತಿವೆ. ಯಾರಿಗೆ ಅಲ್ಲಿ ಪ್ರಭಾವವನ್ನು ಬೀರುವುದಕ್ಕೆ ಸಾಧ್ಯವಿದೆಯೋ ಅಂಥವರಿಗೆ ಮಾತ್ರ ಅಲ್ಲಿ ಪ್ರೋಗ್ರಾಂಗೆ ಅವಕಾಶ ಸಿಕ್ಕುತ್ತಿದೆ ಎಂದು ಹೇಳಲಾಗುತ್ತಿದೆ. ಅಲ್ಲಿ ಒಬ್ಬ ಅಕೌಂಟೆಂಟ್ ಇದ್ದಾನಂತೆ ಆತನನ್ನು ಸರಿಮಾಡಿಕೊಂಡರೆ ಅಲ್ಲಿ ಏನು ಕೆಲಸಬೇಕಾದರೂ ನಡೆಯುತ್ತದೆಂದೂ ಅಲ್ಲಿ ಪೂರಾ ರಾಜಕೀಯ ಇದೆಯೆಂದು ಹೇಳಲಾಗುತ್ತಿದೆ. ಏಕೆಂದರೆ ನನ್ನ ಮಗನೂ ಕೂಡ ಒಬ್ಬ ಅಲ್ಲಿ ಹುಚ್ಚು ಹುಚ್ಚಾಗಿ ಅಲೆದಾಡುತ್ತಿದ್ದಾನೆ. ಮನೆಯಲ್ಲಿ ಊಟ ಮಾಡಿಕೊಂಡು ಇಡೀ ದಿನವೆಲ್ಲಾ ನಾಟಕ ಸಿನೀಮಾ ಎಂದು ಓಡಾಡಿಕೊಂಡಿದ್ದಾನೆ. ನನಗಿರತಕ್ಕ ಇಬ್ಬರು ಮಕ್ಕಳಲ್ಲಿ ಒಬ್ಬನನ್ನು ಇನ್‌ಸ್ಟಿಟ್ಯೂಟಿನಲ್ಲಿ ಕೆಲಸ ನೋಡಿಕೊಳ್ಳುವಂತೆಯೂ ಇನ್ನೊಬ್ಬನನ್ನು ಕಾಂಟ್ರಾಕ್ ಕೆಲಸಗಳು ನೋಡಿಕೊಳ್ಳುವಂತೆ ಯೂ ಮಾಡಬೇಕೆಂದು ಎಷ್ಟು ಪ್ರಯತ್ನಗಳನ್ನು ಮಾಡಿದಾಗ್ಯೂ ಅವರು ದಾರಿಗೇ ಬರುತ್ತಿಲ್ಲ.

ಇನ್ನು ಕನ್ನಡ ಟೈಪ್ ರೈಟರುಗಳು ಷಾರ್ಟ್ ಹ್ಯಾಂಡ್ ಇನ್‌ಸ್ಟಿಟ್ಯೂಟುಗಳಿಗೂ ಮತ್ತು ಇತರೇ ಆಫೀಸುಗಳಿಗೂ ಸಾಕಷ್ಟು ಸಿಗುತ್ತಿಲ್ಲ. ಸರ್ಕಾರದವರು ಈ ವಿಚಾರದಲ್ಲಿ ಕೂಡಲೆ ನಿಗಾ ತೆಗೆದುಕೊಳ್ಳಬೇಕು.

ಇನ್ನು ಈ ಎನ್.ಸಿ.ಸಿ. ಮತ್ತು ಎ.ಸಿ.ಸಿ. ಇವು ಒಳ್ಳೆಯ ಅಂಗಗಳು ಇವುಗಳಿಂದ ತರುಣರಲ್ಲಿ ಒಂದು ಶಿಸ್ತನ್ನು ಬೆಳೆಸುವುದಕ್ಕೆ ಅವಕಾಶವಿದೆ. ಆದರೆ ಇವು ಕಳೆದ ಒಂದೆರಡು ವರ್ಷಗಳಿಂದ ಕೆಲಸ ಮಾಡುತ್ತಿಲ್ಲವೆಂದು ಕೇಳುತ್ತಿದ್ದೇನೆ. ಇದನ್ನು ಮತ್ತೆ ಚುರುಕಾಗಿ ಕೆಲಸ ಮಾಡುವಂತೆ ಮಾಡಬೇಕು.

ಇನ್ನು ಜೂನಿಯರ್ ಕಾಲೇಜ್ ಮತ್ತು ಹೈಯರ್ ಸೆಕೆಂಡರಿಶಾಲೆಗಳಲ್ಲಿ ಶಿಕ್ಷಕರಿಗೆ ಒಂದು ಯೂನಿಫಾರಂ ಪೇಸ್ಕೇಲ್ ಇಲ್ಲ. ಎಂ.ಎ. ಪಾಸಾದವರಿಗೆ ಜೂನಿಯರ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದರೇ ಅವರಿಗೇ ಒಂದು ಸ್ಕೇಲು ಮತ್ತು ಅದೇ ಎಂ.ಎ. ಪಾಸಾದವರು ಹೈಸ್ಕೂಲಲ್ಲಿ ಹೆಡ್ಮಾಸ್ಟರಾಗಿದ್ದರೆ ಅವರಿಗೇ ಒಂದು ಕಡಮೆ ಸ್ಕೇಲು ಹೀಗೆ ವ್ಯತ್ಯಾಸಗಳಿದ್ದು ಅವರಲ್ಲಿ ತುಂಬಾ ಅತೃಪ್ತಿಯನ್ನು ಮೂಡಿಸಿದೆ. ಇದನ್ನು ಸರಿಪಡಿಸಬೇಕೆಂದು ಸಲಹೆಮಾಡುತ್ತೇನೆ ಸರ್ಕಾರಕ್ಕೆ ಸಧ್ಯದಲ್ಲೇ ಮಲ್ಲಾರಾಧ್ಯ ಕಮಿಟ್ ವರದಿ ಮತ್ತು ಕಾಮನ್ ರೂಲ್ಸ್ ಫಾರ್ ಕಾಲೇಜಸ್ ಮಸೂದೆ ಬಂದ ಕೂಡಲೆ ಸರ್ಕಾರದವರು ಕನಿಷ್ಟಪಕ್ಷ ಇನ್ನು ೨೦ ವರ್ಷಗಳ ಕಾಲದವರೆಗೂ ಏನನ್ನೂ ಬದಲಾವಣೆ ಮಾಡದ ರೀತಿಯಲ್ಲಿ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಇದರಲ್ಲಿ ಪದೇ ಪದೇ ಬದಲಾವಣೆಗಳನ್ನು ಮಾಡುವುದು ಸಾಧುವಾದ್ದಲ್ಲ. ಇನ್ನು ನಮಗೆಲ್ಲಾ ಹಿಂದೆ ಈ ವಿದ್ಯಾ ಇಲಾಖೆಯ ಆಡಳಿತವನ್ನು ವಹಿಸಿಕೊಂಡಿದ್ದ ಮಂತ್ರಿಗಳ ಬಗ್ಗೆ ಮತ್ತು ಹಾಲಿ ವಿದ್ಯಾ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳ ಬಗ್ಗೆ ಈ ಇಬ್ಬರು ಮಂತ್ರಿಗಳ ಬಗ್ಗೆಯೂ ತುಂಬಾ ಗೌರವವಿದೆ. ಇವರೆಲ್ಲರೂ ಅನೇಕ ರೀತಿಯಲ್ಲಿ ಸಮಾಜಕ್ಕೆ ದುಡಿಯುತ್ತಾ ಬಂದಿದ್ದಾರೆ. ಇವರ ಕಾಲದಲ್ಲಿ ವಿದ್ಯಾ ಇಲಾಖೆ ಚೆನ್ನಾಗಿ ಬೆಳೆದು ನೇಷನ್‌ಬಿಲ್ಡಿಂಗ್ ಆಕ್ಟಿವಿಟೀಸಿಗೆ ಉತ್ತಮವಾದ ಜನಾಂಗವನ್ನು ತಯಾರಿಸುತ್ತಾರೆಂಬ ನಂಬಿಕೆಯಿದೆ. ಇದಕ್ಕೆ ೭೮ ಕೋಟಿಯಲ್ಲ ಇನ್ನೂ ಒಂದು ನೂರು ಕೋಟಿ ಖರ್ಚಾಗಲಿ ನಮ್ಮ ಮುಂದಿನ ಪೀಳಿಗೆಯನ್ನು ಒಳ್ಳೆಯ ಸುಸಂಸ್ಕೃತರನ್ನಾಗಿ ಮಾಡಬೇಕೆಂದು ಒತ್ತಾಯ ಮಾಡಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ತಂದಿರುವ ವಿದ್ಯಾ ಇಲಾಖೆಯ ೭೮ ಕೋಟಿ ರೂಪಾಯಿಗಳ ಬೇಡಿಕೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಮತ್ತು ವಿದ್ಯಾ ಇಲಾಖೆಯಲ್ಲಿ ಉಭಯ ಮಂತ್ರಿಗಳೂ ವಿದ್ಯಾಭಿಮಾನಿಗಳಾಗಿರುವುದರಿಂದ ವಿದ್ಯಾ ಇಲಾಖೆ ಹೆಚ್ಚಿನ ಪ್ರಗತಿಯನ್ನು ಹೊಂದುತ್ತದೆ ಎಂಬ ಆಶಾ ಭಾವನೆಯನ್ನು ವ್ಯಕ್ತಪಡಿಸಿ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ವಿದ್ಯೆಯ ಪರಿಣಾಮದ ಬಗ್ಗೆ. ಆರ್ಯಾವರ್ತದಲ್ಲಿ ಒಂದು ಮಾತಿದೆ. 'ವಿದ್ಯಾಂ ದದಾತಿ ವಿನಯಾಂ ವಿನಯಂ ದದಾತಿ ಪಾತ್ರ ತಾಂ' ಎಂದಿದೆ. ವಿದ್ಯೆಯಿಂದ ಮನುಷ್ಯನಲ್ಲೇನು ಪರಿವರ್ತನೆಯಾಗುತ್ತದೆ ಎಂಬುದನ್ನು ವರ್ಣಿಸಿದ್ದಾರೆ. ವಿದ್ಯೆಯಿಂದ ವಿನಯ ಬರುತ್ತದೆ, ವಿನಯದಿಂದ ಸತ್ಪಾತ್ರನಾಗುತ್ತಾನೆ, ಸಮಾಜ ಜೀವಿಯಾಗುವುದಕ್ಕೆ ಯೋಗ್ಯನಾಗುತ್ತಾನೆ ಎಂದು ತಿಳಿದವರು ಹೇಳಿದ್ದಾರೆ. ವಿದ್ಯಾವಂತರ ಲಕ್ಷಣವನ್ನು ಬಹಳವಾಗಿ ವರ್ಣಿಸಿದ್ದಾರೆ. ಈ ಅರ್ಥದಲ್ಲಿ ನಾವು ಯೋಚನೆ ಮಾಡುವಾಗ ಇವತ್ತಿನ ವಿದ್ಯಾವಂತ ಯಾವ ರೀತಿ ನಡೆದುಕೊಳುತ್ತಿದ್ದಾನೆ ಎಂದರೆ ಇದರ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವನು ಎಂಬ ಸಂಶಯ ಬರುತ್ತದೆ. ಇವತ್ತು ಜನ್ಮ ಯಾವ ಜನ್ಮದಲ್ಲಾದರೂ ಆಗಿರಲಿ ಯಾರ ಮನೆತನದಲ್ಲಾದರೂ ಹುಟ್ಟಿರಲಿ, ಜನ್ಮ ಮುಖ್ಯವಲ್ಲ, ಅವನ ವಾತಾವರಣ ಮುಖ್ಯ, ಅದು ಸರಿಯಾಗಿದ್ದರೆ ಅವನು ಸಮಾಜ ಜೀವಿಯಾಗಿ ಒಳ್ಳೆಯ ಮನುಷ್ಯನಾಗಿ ಪರಿವರ್ತನೆಯಾಗಲು ಅವಕಾಶ

ವಾಗುವುದು ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ಭಾರತದಲ್ಲಿ ಒಂದು ಕಥೆ ಬರುತ್ತದೆ. ಒಬ್ಬ ತಾಯಿ ಹೊಟ್ಟೆಯಲ್ಲಿ ೨ ಗಿಳಿಗಳು ಹುಟ್ಟಿದವು, ಒಂದನ್ನು ಒಬ್ಬ ಋಷಿ ಸಾಕುತ್ತಾನೆ. ಋಷಿ ಸಾಕಿದ ಗಿಣಿ ಮಾತು ಮಾತಿಗೂ ಯಾರೇ ಬರಲಿ, ಕೂಡಿ ಬಾಯಾರಿಕೆಯಾಗಿದೆಯೇ ಎಂದು ಕೇಳುವುದು. ಅದು ಆ ರೀತಿ ಪರಿವರ್ತನೆ ಹೊಂದಿತ್ತು. ಇನ್ನೊಂದು ಗಿಳಿಯನ್ನು ಕಟುಕ ಸಾಕಿದ, ಅದು ಯಾರೇ ಬರಲಿ ಹೊಡೆಯುತ್ತೇನೆ ಕಡಿಯುತ್ತೇನೆ, ಬಡಿಯುತ್ತೇನೆ, ಎಂದು ಹೇಳುತ್ತಿತ್ತಂತೆ. ಇದರ ಅರ್ಥವೇನು ? ಜನ ಎಲ್ಲೇ ಆಗಿರಲಿ, ವಾತಾವರಣ ಮುಖ್ಯ. ಮನುಷ್ಯನನ್ನು ಸತ್ಪ್ರಜೆಯಾಗಿ ರೂಪಿಸಬೇಕಾದರೆ ಆತನಿಗಿರುವ ವಾತಾವರಣ ಮುಖ್ಯವಾದುದು ಎಂಬುದನ್ನು ಈ ಕಥೆಯಿಂದ ಅರಿಯಬಹುದು. ಇಂಥ ವಾತಾವರಣ ನಿರ್ಮಾಣವಾಗಬೇಕಾದರೆ ಶಾಲೆ ಹೇಗಿರಬೇಕು, ಸಹದ್ಯೋಗಿಗಳು ಹೇಗಿರಬೇಕು ಮುಂತಾದ್ದನ್ನು ವಿದ್ಯಾವಂತ ಪರಿಣತರು ಯೋಚಿಸಿ ಮಾಡಬೇಕಾದ ಸಮಯ ಸನ್ನಿಹಿತವಾಗಿದೆ. ಇವತ್ತಿನ ವಿದ್ಯಾವಂತ ಯುವಕರು ಹೇಗಿದ್ದಾರೆಂದು ಒಂದು ನಿಮಿಷ ಯೋಚನೆ ಮಾಡುವುದಾದರೆ ಬಹುತೇಕ ನಿರ್ವೀರ್ಯರಾಗಿದ್ದಾರೆ, ಸಮಾಜದಲ್ಲೂ ಎದೆ ಕೊಟ್ಟು ಧೈರ್ಯದಿಂದ ತಮ್ಮ ಕಾಲಮೇಲೆ ತಾವು ನಿಲ್ಲುವ ಚೈತನ್ಯ ಪಡೆದಿಲ್ಲ. ಅಂಥವರು ಕಂಡುಬರುತ್ತಿಲ್ಲ, ಅವರು ಬಹು ವಿರಳ ಎಂದರೆ ಮಾನ್ಯ ವಿದ್ಯಾ ಮಂತ್ರಿಗಳು ಒಪ್ಪುವರೆಂದು ಭಾವಿಸುತ್ತೇನೆ. ಕ್ಷಾತ್ರ ಶಕ್ತಿಯಾಗಲೀ ದೀಶಕ್ತಿಯಾಗಿರಲೀ ಉಪಯೋಗಿಸುವ ಧೈರ್ಯ ಅವರಿಗಿಲ್ಲ. ಹೀಗಾದರೆ ನೀವು ಕೊಡುವ ವಿದ್ಯೆಯಿಂದೇನು ಉಪಯೋಗವಾದಹಾಗಾಯಿತು ? ಕೇವಲ ಸರಕಾರಿ ಕಾರಕೂನರನ್ನು ನಾವು ಸೃಷ್ಟಿಮಾಡುತ್ತಿದ್ದೇವೆಯೇ ಎಂಬುದನ್ನು ಯೋಚನೆಮಾಡಬೇಕು. ಇವತ್ತಿನ ವಿದ್ಯಾವಂತ ಯುವಕ ಸಮೂಹ ಯಾವ ರೀತಿ ಇದೆ ಎಂದು ಪ್ರತಿಯೊಬ್ಬರೂ ಕೂಡ ನೋಡಬಹುದು, ಇವತ್ತಿನ ಬಹುತೇಕ ವಿಧ್ಯಾರ್ಥಿಗಳಲ್ಲಿ ಶಿಸ್ತು ಸಂಯಮವಿಲ್ಲ. ರಸ್ತೆಯ ಮಧ್ಯೆ ನಿಂತು ಮಾತನಾಡುತ್ತಿರುವುದು, ಯಾವುದೇ ವಾಹನ ಬಂದರೂ ದಾರಿ ಬಿಡದೆ ಇರುವುದು ಮುಂತಾದುವೆಲ್ಲಾ ಕಂಡುಬರುವುದು. ಇಂಥ ಯುವಕರು ಸೃಷ್ಟಿಯಾಗುತ್ತಿರುವುದರಿಂದ ವಿದ್ಯಾಭ್ಯಾಸ ಪದ್ಧತಿಯಲ್ಲಿ ಇಂದು ಏನೋ ಕೊರತೇ ಇದ್ದೇ ಇರಬೇಕು. ಅವರ ನೈತಿಕಮಟ್ಟ ಬಹಳ ಕೆಳಕ್ಕೆ ಹೋಗಿದೆ. ಹಿಂದೆ ಕೆಲವು ದಿವಸ ಈ ಸಭೆಯನ್ನು ಮುಂದುವರೆಸಿದಾಗ ನಾನು ಶಿವಮೊಗ್ಗಾಕ್ಕೆ ಹೋಗಿ ನಮ್ಮ ಮನೆಯವರೊಡನೆ ಸಿನಿಮಾಕ್ಕೆ ಹೋದೆ. ಸಿನಿಮಾ ಪ್ರಾರಂಭವಾಗುವುದಕ್ಕೆ ೧೫ ನಿಮಿಷ ಮುಂಚೆ ನಾವು ಹೋದೆವು. ಮ್ಯಾಟನಿಗೆ ನಾವು ಹೋದುದು, ನಾವು ಹೋಗುವ ವೇಳೆಗೆ ಬಾಲ್ಕನಿಯಲ್ಲಿ ಕಾಲೇಜು ಹುಡುಗರು ಕಾಲೇಜಿಗೆ ಚಕ್ಕರ್ ಹಾಕಿ ತುಂಬಿದ್ದರು, ಹೆಣ್ಣು ಹುಡುಗರೂ ಇದ್ದರು. ಒಂದು ಕುರ್ಚಿಯಮೇಲೆ ಕರ್ಚೀಫ್ ಹಾಕಿ ಒಬ್ಬ ಹುಡುಗಿ ತನ್ನ ಸ್ನೇಹಿತನಿಗೆ ಆ ಸೀಟನ್ನು ರಿಸರ್ವ್ ಮಾಡಿಕೊಂಡಿದ್ದಳು, ನಮಗೆ ಸೀಟೇ ಇರಲಿಲ್ಲ. ಒಬ್ಬ ಹುಡುಗ ಬರುತ್ತಾರೆ ಎಂದು ಕೇಳಿದರೆ ಹೇಳಿದರು. ಕೇವಲ ಹತ್ತು ವರ್ಷಗಳಲ್ಲಿ ಇಷ್ಟು ಪರಿವರ್ತನೆಯಾಗಿದೆ. ಹುಡುಗರು ಈ ರೀತಿ ಕಾಲೇಜಿಗೆ ಚಕ್ಕರ್ ಹಾಕಿ ಬರುವರು. ಈ ದೃಶ್ಯ ಬಹಳ ಆಶ್ಚರ್ಯಕರ. ಒಬ್ಬ ಹುಡುಗಿ ಹುಡುಗನಿಗೆ ಸೀಟು ರಿಸರ್ವ್ ಮಾಡುವಳು. ಇಂಥ ಬೆಳವಣಿಗೆ ಯುವಕರಲ್ಲಾಗುತ್ತಿದ್ದರೆ ಇದಕ್ಕೆ ಕಾರಣವೇನು ? ಏಕೆ ಈ ರೀತಿಯಾಗಿದೆ ? ಪಟ್ಟಣಗಳಲ್ಲಿ ವಿದ್ಯಾಭಾಸಕ್ಕೆ ಅವಕಾಶ ಮಾಡದೆ ಅರಣ್ಯದಲ್ಲಿ ಮಾಡಿದರೆ ಸರಿಯಾಗಿ ವಿದ್ಯಾಭ್ಯಾಸ ನಡೆದೀತೇನೋ ಎನಿಸುವುದು ಈಗಿನ ಸ್ಥಿತಿ ನೋಡಿದರೆ. ಈ ದಿವಸ ಬೆಂಗಳೂರಿನ ಕಾಲೇಜಿಗೆ ಹುಡುಗರನ್ನು ಕಳಿಸಲು ನನಗೆ ಹೆದರಿಕೆಯಾಗುತ್ತಿದೆ. ಮಂತ್ರಿಗಳಿಗೆ ಇದರ ವಿಚಾರ ಗೊತ್ತಿಲ್ಲದಿರಬಹುದು. ಎಲ್ಲಿ ನೋಡಿದರೂ ಬರೀ ಕಾಲೇಜು ಹುಡುಗರೇ. ಬೇರೆಯವರಿಗೆ ಅವಕಾಶವೇ ಇರುವುದಿಲ್ಲ. ಈ ರೀತಿ ವಿದ್ಯಾವಂತ ಯುವಕರಿದ್ದರೆ ಕಾಲೇಜು ವಿದ್ಯಾಭ್ಯಾಸ ಯಾವ ಮಟ್ಟದಲ್ಲಿ ನಡೆಯುತ್ತಿದೆ ಎಂಬುದನ್ನು ಊಹಿಸಬಹುದು.

5-30 PM.

ನಾವು ಈ ಹೊತ್ತು ಸೃಷ್ಟಿ ಮಾಡಿರತಕ್ಕದ್ದು ಏನು? ನಿರುದ್ಯೋಗ ಪಧವೀಧರರನ್ನು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿ ತಯಾರು ಮಾಡುತ್ತಿದ್ದೇವೆ. ವಿಶ್ವವಿದ್ಯಾಲಯದಿಂದ ಹೊರಗೆ ಬರತಕ್ಕ ಯುವಕ ದೇಶಕ್ಕೆ ಯಾವುದು ಉಪಯೋಗವಿಲ್ಲದ ಯುವಕನಾಗಿರುತ್ತಾನೆ. ಮನೆಯಲ್ಲಿಯೇ ಇದ್ದರೆ ಕುಲ ಕಸಬು ಮಾಡುತ್ತಿದ್ದ. ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಮುಗಿಸಿದ ತಕ್ಷಣ ಆತ ತನ್ನ ಕುಲ ಕಸಬುಮಾಡುವುದಕ್ಕೆ ತಯಾರಿಲ್ಲ, ಅದು ಅವನ ಗ್ರೇಡಿಗೆ ಕಡಮೆ. ಇತ್ತಲಾಗಿ ವಿದ್ಯಾವಂತ ನಿರುದ್ಯೋಗಿಗಳಿಗೆ ಸರಿಯಾದ ಕೆಲಸ ಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಈ ರೀತಿ ನಿರುದ್ಯೋಗ ವಿದ್ಯಾವಂತರ ಸಮೂಹವನ್ನು ದೈನಂದಿಕವಾಗಿ ನಾವು ಸೃಷ್ಟ ಮಾಡುತ್ತ ಹೋದರೆ ಈ ದೇಶದ ಭವಿಷ್ಯವೇನಾದೀತು ಎಂದು ಭಯವಾಗುತ್ತದೆ. ಫ್ರಾನ್ಸಿನಲ್ಲಿ ಕ್ರಾಂತಿಯಾದುದು ವಿದ್ಯಾವಂತ ನಿರುದ್ಯೋಗಿಗಳ ಸಮೂಹದಿಂದ ಎನ್ನುವುದನ್ನು ನೀವೂ ನಾವೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ವಿದ್ಯಾವಂತ ಸಮೂಹ ಈ ರೀತಿಯಾಗುವುದಕ್ಕೆ ಕಾರಣವೇನು? ಮೊದಲನೆಯದು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಸಂಪರ್ಕವಿಲ್ಲ. ಯಾವುದೇ ಶಾಲೆ, ಯಾವುದೇ

ಕಾಲೇಜು ತೆಗೆದುಕೊಂಡರೂ ಕೂಡ ದೊಡ್ಡಿಯೋಪಾದಿಯಲ್ಲಿ ಹುಡುಗರಿರುತ್ತಾರೆ. ಒಬ್ಬ ಉಪಾಧ್ಯಾಯರು ಇರುತ್ತಾರೆ. ಹೀಗಿರುವಾಗ ಇವರಿಗೆ ಯಾವ ಸಂಪರ್ಕವಿರುತ್ತದೆ? ಕ್ಲಾಸುಗಳಲ್ಲಿ ಪಾಠವನ್ನು ಕೇಳುತ್ತಾರೆಯೋ ಎಂದರೆ ಅದೂ ಇಲ್ಲ. ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡು ಚಕ್ಕರ್ ಹೊಡೆಯುತ್ತಾರೆ. ಇನ್ನು ಉಪಾಧ್ಯಾಯರಿಗೆ ವಿದ್ಯಾರ್ಥಿಯ ಬಗ್ಗೆ, ಅವನ ನಡೆನುಡಿಯ ಬಗ್ಗೆ ಅವನ ಆಚಾರದ ಬಗ್ಗೆ ಏನಾದರೂ ಯೋಚನೆ ಇದೆಯೋ ಎಂದರೆ ಇಲ್ಲ. ಒಂದು ಗಂಟೆ ಪಾಠ ಹೇಳಿ ಹೋದರೆ ಆಯಿತು. ನಳಂದ, ತಕ್ಷಶಿಲೆ ವಿಶ್ವವಿದ್ಯಾಲಯಗಳನ್ನು ಉದಹರಿಸಿ ನೋಡುವುದಾದರೆ ಹತ್ತು ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿರುತ್ತಿದ್ದ. ಅಂಥ ವಿಶ್ವವಿದ್ಯಾಲಯಗಳನ್ನು ನಾವು ಮಾಡುವುದಕ್ಕೆ ಸಾಧ್ಯವಿದ್ದರೆ, ಗುರು ಮತ್ತು ಶಿಷ್ಯನಿಗೆ ನೇರವಾದ ಸಂಪರ್ಕವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದ್ದರೆ ವಿದ್ಯಾಭ್ಯಾಸದಲ್ಲಿ ಏನಾದರೂ ಒಳ್ಳೆಯ ಪರಿಣಾಮವಾಗಿ, ವಿದ್ಯಾವಂತ ಯುವಕರ ಪ್ರಗತಿಯಲ್ಲಿ ಬೃಹತ್ ವ್ಯತ್ಯಾಸವಾಗಬಹುದೇನೋ, ಇಲ್ಲದೆ ಇದ್ದರೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ನನ್ನದು. ಈ ಹೊತ್ತು ವಿದ್ಯಾವಂತ ಯುವಕರಲ್ಲಿ ತನ್ನ ಗುರುವಿನ ಬಗ್ಗೆ, ತನ್ನ ತಂದೆತಾಯಿಗಳ ಬಗ್ಗೆ ಇರುವ ಗೌರವ ಮಾತ್ರ ಶೂನ್ಯವೇ. ಯಾವ ಏಕಲವ್ಯ ಗುರುಕಾಣಿಕೆಯಾಗಿ ತನ್ನ ಹೆಬ್ಬೆರಳನ್ನೇ ಕತ್ತರಿಸಿ ಕೊಟ್ಟನೋ ಅಂಥ ನಾಡಿನಲ್ಲಿ ಈ ಹೊತ್ತು ಗುರುವಿನ ಬಗ್ಗೆ ಎಷ್ಟರಮಟ್ಟಿಗೆ ಗುರುಭಕ್ತಿ ಇದೆ ಎಂದರೆ ಮಾರ್ಕ್ಸ್ ಹಾಕದೆ ಹೋದರೆ ಉಪಾಧ್ಯಾಯ ತಿರುಗಾಡುವುದೇ ಕಷ್ಟ. ಗುರುವಿಗೆ ಘೇರಾವ್ ಮಾಡುತ್ತಾರೆ. ಇಂಥ ಅಶಿಸ್ತನ್ನು ದಿನದಿನಕ್ಕೆ ನಿರ್ಮಾಣ ಮಾಡುತ್ತಾ ಹೋದರೆ ಈ ದೇಶದ ಪರಿಸ್ಥಿತಿ ಎಲ್ಲಿಗೆ ಬಂದು ನಿಲ್ಲುತ್ತದೆಯೋ ಗೊತ್ತಿಲ್ಲ. ಮೆಟ್ರಿಕ್ಯುಲೇಶನ್ ಆದಮೇಲೆ ಯಾವ ವಿಷಯದಲ್ಲಿ ಅವನಿಗೆ ಅಭಿರುಚಿ ಇರುತ್ತದೆಯೋ, ಆ ವಿಷಯದಲ್ಲಿ ಮುಂದಿನ ವಿದ್ಯಾಭ್ಯಾಸ ಕೊಡುವುದು ಒಳ್ಳೆಯದಲ್ಲವೆ? ಏಕೆ ಈ ಡಿಗ್ರಿಗಳ ಹುಚ್ಚು? ಸರ್ಕಾರದವರು ಇಷ್ಟೊಂದು ದುಡ್ಡು ಖರ್ಚು ಮಾಡಿ ವಿಶ್ವವಿದ್ಯಾನಿಲಯಗಳನ್ನು ನಡೆಸಿ ನಿರುದ್ಯೋಗ ವಿದ್ಯಾವಂತರನ್ನು ನಿರ್ಮಾಣ ಮಾಡತಕ್ಕ ಕಾರ್ಯವನ್ನು ಏಕೆ ಮಾಡಬೇಕು? ಪಾಶ್ಚಿಮಾತ್ಯ ದೇಶಗಳಲ್ಲಿ ಎಲ್ಲ ಕಡೆಯೂ ಮೆಟ್ರಿಕ್ಯುಲೇಷನ್ ಆಯಿತು ಎಂದರೆ ಅವನವನ ಅಭಿರುಚಿಗೆ ತಕ್ಕ ಹಾಗೆ ವಿದ್ಯಾಭ್ಯಾಸವನ್ನು ಕೊಡುತ್ತಾರೆ. ತಂದೆ ವಕೀಲನಾದರೆ ಅವರ ಮಗನೂ ವಕೀಲನಾಗಬೇಕು ತಂದೆ ಡಾಕ್ಟರಾದರೆ ಅವರ ಮಗನೂ ಡಾಕ್ಟರಾಗಬೇಕು ಎಂದು ಒತ್ತಾಯದಿಂದ ಕಲಿಸುವುದಕ್ಕೆ ಹೋಗಿ ಅವನ ಮೇಲೆ ಹೇರಿದರೆ ಅವನಿಗೆ ಅಭಿರುಚಿ ಇಲ್ಲದೆ ಇರುವ ವಿಷಯದಲ್ಲಿ ಅವನು ಯಾವರೀತಿ ಪರಿಣತನಾಗುತ್ತಾನೆ? ತಂದೆ ತಾಯಿಗಳ ಕಾಟಕ್ಕೆ ಬಂದಿರುತ್ತಾರೆ. ತಿಂಗಳಿಗೆ ಎರಡು ನೂರು, ಮೂರು ನೂರು ತರಿಸಿ ಕಳುಹಿಸುವುದನ್ನು ಖರ್ಚುಮಾಡಿಕೊಂಡು ಮನೆಗೆ ಹೋಗುತ್ತಾನೆ. ಇದನ್ನು ಕ್ರಿಮಿನಲ್ ವೇಸ್ಟ್ ಎಂದು ನಾವು ಕರೆಯಬಹುದು. ಇಂಥ ವಿದ್ಯಾಭ್ಯಾಸವನ್ನು ಕೊಡುವುದರ ಐತಿಹ್ಯವಾದರೂ ಏನು?

ಇನ್ನು ಪರೀಕ್ಷೆಯ ಕ್ರಮ ದೇವರಿಗೇ ಗೊತ್ತು. ವರ್ಷಕ್ಕೆ ಒಂದು ಸಲ ಪರೀಕ್ಷೆ ಮಾಡುತ್ತಾರೆ. ಅದರಲ್ಲಿ ಯಾವರೀತಿ ಪಾಸ್ ಮಾಡಬೇಕೆಂದು ಅವನಿಗೆ ಗೊತ್ತಿರುತ್ತದೆ. ಪರ್ಮ್ಯುಟೇಷನ್, ಕಾಂಬಿನೇಷನ್ ಮೆಥಡ್ಸ್ ಅರಿತಿರುತ್ತಾನೆ. ವರ್ಷವೆಲ್ಲ ಬೇರೆ ರೀತಿಯಲ್ಲಿ ಕಾಲ ಕಳೆದು ವರ್ಷದ ಅಂತ್ಯದಲ್ಲಿ ಹಿಂದಿನ ಹದಿನೈದು ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಹಿಡಿದುಕೊಂಡು ಲೆಕ್ಕಾಚಾರ ಮಾಡಿ ಇಂಥಿಂಥ ಇಸವಿಯಲ್ಲಿ ಏನು ಬರುತ್ತದೆ ಎಂದು ತೀರ್ಮಾನ ಮಾಡಿ ಅಷ್ಟುಮಾತ್ರ ಓದಿಕೊಂಡು ಪಾಸ್ ಮಾಡುತ್ತಾರೆ. ಅದರ ಟೆಕ್ನಿಕ್ ಅವನಿಗೆ ಗೊತ್ತಿರುತ್ತದೆ. ಪಾಸ್ ಮಾಡಿದ ಮಾರನೆದಿನ ನಾವು ಇಟ್ಟಿರುವ ಪಠ್ಯಪುಸ್ತಕದಲ್ಲಿ ಏನಾದರೂ ಪ್ರಶ್ನೆಗಳನ್ನು ಕೇಳಿದರೆ ಅವನು ದೇವರಾಣೆ ಹೇಳುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿವಾರವೂ ಪರೀಕ್ಷೆ ಮಾಡುತ್ತಾರೆ. ವಾರ್ಷಿಕ ಪರೀಕ್ಷೆಗಳಲ್ಲಿ ವಾರ ವಾರ ಪರೀಕ್ಷೆ ಮಾಡಿ ವರ್ಷದ ಅಂತ್ಯದಲ್ಲಿ ಅವನಿಗೆ ಬಂದಿರುವ ಅಂಕಗಳನ್ನೆಲ್ಲ ಒಟ್ಟುಗೂಡಿಸಿ ತೇರ್ಗಡೆ ಯಾಗಿದ್ದಾನೆ ಎಂದು ಹೇಳತಕ್ಕ ಪದ್ಧತಿ ಇದೆ. ಇದರಿಂದ ಏನಾಗುತ್ತದೆ ಎಂದರೆ ಅವನಿಗೆ ಇರತಕ್ಕ ವಿಷಯದಲ್ಲಿ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಗತ್ಯಂತರವಿಲ್ಲ. ವಾರಕ್ಕೆ ಒಂದು ಸಲ ಪರೀಕ್ಷೆ ಇರುವುದರಿಂದ ಓದಿ ತಿಳಿಯಲೇಬೇಕು. ಚೆನ್ನಾಗಿ ಅಧ್ಯಯನ ಮಾಡುವುದರಿಂದ ಆ ವಿಷಯವನ್ನು ಕರತಲಾಮಲಕವಾಗಿ ಮಾಡಿಕೊಂಡಿರುತ್ತಾನೆ. ಅಂಥ ಪರೀಕ್ಷಾ ಪದ್ಧತಿಯನ್ನು ನಮ್ಮಲ್ಲಿಯೂ ತರುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಉಪಾಧ್ಯಾಯರನ್ನು ನೇಮಕ ಮಾಡುವಾಗ ಸರಿಯಾದ ರೀತಿಯಲ್ಲಿ ನೇಮಕ ಮಾಡದೆ ಹೋದರೆ ಅವರಿಂದ ತಯಾರಾಗತಕ್ಕ ವಿದ್ಯಾರ್ಥಿ ಸಮೂಹದ ಗತಿ ಏನು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಒಂದು ಸಲ ಪರೀಕ್ಷೆ ಪೇಪರ್ ಕರೆಕ್ಷನ್ ಮಾಡಿರುವುದನ್ನು ನಾನು ನೋಡಿದ್ದೇನೆ. ಪ್ರತಿಯೊಂದು ವಾಕ್ಯದಲ್ಲಿಯೂ ನಾಲ್ಕಾರು ಸ್ಪೆಲಿಂಗ್ ಮಿಸ್ಟೇಕ್ಸ್ ಇರತಕ್ಕ ಉತ್ತರವಾಗಿತ್ತು. ಅದಕ್ಕೆ ಹತ್ತಕ್ಕೆ ಎಂಟು ಅಂಕಗಳನ್ನು ಕೊಟ್ಟರು. ಆ ಉಪಾಧ್ಯಾಯರಿಗೆ ಸ್ಪೆಲಿಂಗ್ ಬರುತ್ತದೆಯೋ ಎಂದು ನಾನು ಕೇಳಬೇಕಾಗಿದೆ. ಇಂಥ ಉಪಾಧ್ಯಾಯರಿಂದ ತಯಾರಾಗುವ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ವಿದ್ಯೆಯಲ್ಲಿ ಪ್ರಗತಿಯನ್ನು ಹೊಂದುತ್ತಾರೆಂದು ನಾವು ಯೋಚನೆ ಮಾಡಬೇಕು. ಉಪಾಧ್ಯಾಯರನ್ನು ನೇಮಕ ಮಾಡುವಾಗ ಕೇವಲ ಅವನ ಮೇಧಾ ಶಕ್ತಿಯನ್ನು ನೋಡಬೇಕೇ ಹೊರತು ಬೇರೆ ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವ

ಹಾಗಿಲ್ಲ ಎನ್ನುವುದನ್ನು ನಾವು ಗಮನಿಸಬೇಕು. ನಮ್ಮ ಮಕ್ಕಳ ಭವಿಷ್ಯತ್ತಿನ ದೃಷ್ಟಿಯಿಂದ ಇದನ್ನು ಯೋಚನೆ ಮಾಡದೆ ಹೋದರೆ ಬಹಳ ತಪ್ಪಾಗುತ್ತದೆ. ನಾಳೆ ಅದೇ ಹುಡುಗರೆಲ್ಲ ನಮ್ಮನ್ನು ಬಯ್ಯುತ್ತಾರೆ. ಆದ್ದರಿಂದ ಇಂಥ ದುರವಸ್ಥೆಯನ್ನು ಯಾವತ್ತಿಗೂ ಕೂಡ ಈ ದೇಶಕ್ಕೆ ತರಬಾರದು ಎಂದು ನನ್ನ ವಿನಂತಿ.

ನಮ್ಮಲ್ಲಿ ಒಂದು ಬೆಟರ್‌ಮೆಂಟ್ ಕಮಿಟಿ ಇದೆ. ಶೀರನಾಳಿ ಹತ್ತಿರವಿರುವ ಗ್ರಾಮದಲ್ಲಿ ಒಂದು ಶಾಲೆ ಇದೆ. ಅಲ್ಲಿ ಬೆಟರ್‌ಮೆಂಟ್ ಇದೆ ಅಲ್ಲಿ ಒಬ್ಬರೇ ಉಪಾಧ್ಯಾಯರಿದ್ದಾರೆ. ಅವರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಮೇಗರವಳ್ಳಿಗೆ ಪರೀಕ್ಷೆಗೆ ಕರೆದುಕೊಂಡು ಹೋದರು. ಇದು ಎರಡು ವರ್ಷಗಳ ಹಿಂದಿನ ಕಥೆ. ಆ ಉಪಾಧ್ಯಾಯರು ಮೇಗರವಳ್ಳಿಯಲ್ಲಿ ಯಾರೋ ಒಬ್ಬ ವಿದ್ಯಾರ್ಥಿನಿಯ ಹತ್ತಿರ ಅಸಭ್ಯವಾಗಿ ವರ್ತಿಸಿದರು ಎನ್ನುವ ವದಂತಿ ಬಂತು. ಅದರ ಮೇಲೆ ಊರಿನವರು ಕುಪಿತರಾದರು. ಅದು ಸಿಂಗಲ್ ಟೀಚರ್ ಸ್ಕೂಲ್. ಇಡೀ ಊರಿಗೆ ಸಂಬಂಧಪಟ್ಟ ವಿಷಯವಾದುದರಿಂದ ಅಸಭ್ಯ ರೀತಿಯಲ್ಲಿ ವರ್ತಿಸಿರುವಂಥ ಉಪಾಧ್ಯಾಯರನ್ನು ತೆಗೆದು ಹಾಕಬೇಕು ಎಂದು ದೂರು ಕೊಟ್ಟರು. ಆರೇಳು ತಿಂಗಳಾದರೂ ಅವರ ವರ್ಗವಾಲಿಲ್ಲ. ಆ ಉಪಾಧ್ಯಾಯರು ಶಾಲೆಗೆ ಬರಲೂ ಇಲ್ಲ. ಬೀಗ ಹಾಕಿಕೊಂಡು ಹೋದರು. ಆನಂತರ ವಿಷಯ ನನ್ನ ಗಮನಕ್ಕೆ ಬಂತು ಮಂತ್ರಿಗಳ ಹತ್ತಿರ ಹೇಳಿ ಕೊನೆಗೂ ವರ್ಗವಾಯಿತು. ಏಕೆ ಆ ಮಾತನ್ನು ಹೇಳುತ್ತಿದ್ದೇನೆಂದರೆ ಇಂಥ ಉಪಾಧ್ಯಾಯರಿದ್ದರೆ ಮಕ್ಕಳಿಗೆ ಅವರ ಮೇಲೆ ಹೆಚ್ಚಿನ ಗೌರವ ಬರುವುದಕ್ಕೆ ಸಾಧ್ಯವಿಲ್ಲ. ಊರಿನ ಜನಗಳಿಗೂ ಹಾಗೆಯೇ ಅವರ ಮೇಲೆ ಅಭಿಮಾನ ಬರುವುದಕ್ಕೆ ಸಾಧ್ಯವಿಲ್ಲ. ಅಂಥ ಒಂದು ದೂರು ಬಂತು ಎಂದ ಕೂಡಲೇ ನಾವು ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ನಮ್ಮ ಮೇಲೆ ಇರತಕ್ಕ ಭರವಸೆ ಹೊರಟು ಹೋಗುತ್ತದೆ, ಎನ್ನುವ ಸಂಶಯ ನನಗೆ ಬರುತ್ತದೆ

ಈ ಖಾಸಗೀ ವಿದ್ಯಾ ಸಂಸ್ಥೆಗಳ ವಿಚಾರದಲ್ಲಿ ಎಷ್ಟು ಹೇಳಿದರೂ ಕಡಿಮೆಯೇ. ಇವೊತ್ತು ಉಡುಪಿಯಲ್ಲಿ ಮಣಿಪಾಲ್ ಎಜುಕೇಶನ್ ಸೊಸೈಟಿ ಇದೆ. ಇಲ್ಲಿರುವ ಕಾಲೇಜುಗಳಲ್ಲಿ ಯಾರಿಗೆ ವಿದ್ಯಾ ಸೌಕರ್ಯಗಳು ದೊರೆಯುತ್ತವೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ಇಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಒಂದು ಮೆಡಿಕಲ್ ಸೀಟಿಗಾಗಿ ಪರದೇಶಗಳಿಂದ ಬರುವವರಿಂದ ಸುಮಾರು ಹತ್ತು ಸಾವಿರ ಡಾಲರುಗಳನ್ನು ವಸೂಲು ಮಾಡುತ್ತಾರೆ ಇದು ನಮ್ಮ ರಾಜ್ಯದ ನಾಣ್ಯದಲ್ಲಿ ಎಂದರೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕಡಿಮೆ ಬರುತ್ತದೆ, ಇವೊತ್ತು ನಾವೇನು ಬಡ ಬೋರೇಗೌಡರು ಎಂದು ಹೇಳುತ್ತೇವೆ ಇಂತಹವರ ಮಕ್ಕಳ ಇಲ್ಲಿ ಓದಬೇಕು ಎಂದರೆ ಅದು ಸಾಧ್ಯವೇ ಇಲ್ಲ. ಇಂತಹ ವಿದ್ಯಾ ಸಂಸ್ಥೆಗಳು ಇಂದು ಮಾರಾಟ ಸಂಸ್ಥೆಗಳಾಗಿವೆ, ಇದಕ್ಕಾಗಿ ಇವನ್ನು ಮಾರಾಟ ಸಂಸ್ಥೆಗಳು ಎಂದೆನ್ನೋಣವೇ ? ಇಲ್ಲ ವ್ಯಾಪಾರ ಸಂಸ್ಥೆಗಳು ಎಂದು ಎನ್ನೋಣವೇ ? ಯಾವುದೂ ನಮಗೆ ಗೊತ್ತಾಗುತ್ತಿಲ್ಲ ಇವೊತ್ತು ಖಾಸಗಿ ವಿದ್ಯಾ ಸಂಸ್ಥೆಗಳು ನಡೆಯುತ್ತಿರುವ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಶಿವಮೊಗ್ಗದಲ್ಲಿ ಒಂದು ಕಾನ್‌ವೆಂಟ್ ಸ್ಕೂಲು ಇದೆ. ಇಲ್ಲಿರುವ ಸಿಸ್ಟಂ ನೋಡಿದರೆ ನಮಗೆ ಬಹು ವಿಚಿತ್ರವಾಗಿ ಕಾಣುತ್ತಿದೆ. ಇಲ್ಲಿ ಕೆಲವು ಮನೆಯವರ ಮಕ್ಕಳು ಶ್ರೀಮಂತರ ಮನೆಯವರು ಎಂದು ತಿಳಿದರೆ ಸಾಕು, ಇಂತಹ ಮಕ್ಕಳನ್ನು ಅವರ ಮನೆಯಲ್ಲಿ ಟ್ಯೂಷನ್ ಕೊಡುತ್ತೇವೆಂದು ಹೇಳುತ್ತಾರೆ. ಹಾಗೆ ಒಂದು ವೇಳೆ ಅವರು ಮನೆಯಲ್ಲಿ ಪಾಠಕ್ಕೆ ಒಪ್ಪದೇ ಇದ್ದರೆ ಅವರನ್ನು ಆ ವರ್ಷದ ಪರೀಕ್ಷೆಯಲ್ಲಿ ಬೇಕಂತಲೇ ಪರೀಕ್ಷೆಯಲ್ಲಿ ಫೇಲ್ ಮಾಡಿಸುತ್ತಾರೆ. ಇದು ನನ್ನ ಮಗಳಿಗೂ ಕೂಡ ಆಯಿತು. ನಾನು ಮತ್ತೆ ಆ ಕಾನ್‌ವೆಂಟಿಗೆ ಹೋಗಿ ಅವಳನ್ನು ಪಾಸು ಮಾಡಿಸಬೇಕೆಂದು ಕೋರಲಿಲ್ಲ. ಅವಳನ್ನು ಬೇರೆ ಕಡೆ ಶಾಲೆಗೆ ಸೇರಿಸಿದಾಗ ನಮ್ಮ ಹುಡುಗಿಗೆ ನೂರಕ್ಕೆ ೭೦-೮೦ ನಂಬರುಗಳು ಬಂತು. ಇಂತಹ ಮೆರಿಟೆಡ್ ಸ್ಟೂಡೆಂಟ್ಸುಗಳನ್ನು ಬೇಕೆಂತಲೇ ಇಲ್ಲಿನ ಕಾನ್‌ವೆಂಟಿನ ಟೀಚರುಗಳು ಫೇಲು ಮಾಡಿಸುತ್ತಾರೆ. ಈ ರೀತಿ ಇಲ್ಲಿ ಹಣ ಸಂಗ್ರಹಣೆಗೆ ಒಂದು ಮಾರ್ಗ ಮಾಡಿಕೊಂಡಿದ್ದಾರೆ. ಇವೊತ್ತು ಎಲ್ಲಾ ಖಾಸಗೀ ವಿದ್ಯಾ ಸಂಸ್ಥೆಗಳೂ ಇದೇ ರೀತಿ ಇವೆ ಎಂದು ನಾನು ಇಲ್ಲಿ ಆಪಾದನೆ ಮಾಡುತ್ತಿಲ್ಲ. ಬೇರೆ ಕಡೆ ಒಳ್ಳೆಯದೂ ಇರಬಹುದು. ಬೆಂಗಳೂರಿನಲ್ಲಿರುವ ನ್ಯಾಷನಲ್ ಕಾಲೇಜು ಒಂದು ಖಾಸಗಿ ವಿದ್ಯಾ ಸಂಸ್ಥೆ. ಇದು ನಮ್ಮ ದೇಶದಲ್ಲಿ ಒಂದು ಒಳ್ಳೆಯ ಹೆಸರನ್ನು ತೆಗೆದುಕೊಂಡಿರುವಂತಹ ವಿದ್ಯಾ ಸಂಸ್ಥೆ ಇದಾಗಿದೆ. ಇಂತಹ ವಿದ್ಯಾ ಸಂಸ್ಥೆಗಳೂ ಬೇಕಾದಷ್ಟಿವೆ. ಆದರೆ ಕೆಲವು ಕಡೆ ಇರುವ ವಿದ್ಯಾ ಸಂಸ್ಥೆಗಳು ಸರಿಯಾಗಿಲ್ಲ. ಇದರ ಕಡೆಗೆ ಸರ್ಕಾರ ಕ್ಷ ಕಿರಣವನ್ನು ಬೀರಿ ಆದಷ್ಟು ಇಂತಹ ವಿದ್ಯಾ ಸಂಸ್ಥೆಗಳ ನಿಯಂತ್ರಣದ ಬಗ್ಗೆ ಮಾಡುವುದೊಳ್ಳೆಯದಲ್ಲವೇ ಎಂದು ಸರಕಾರದಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ವಿದ್ಯಾ ಸಚಿವೆಯವರು ಸ್ಕಾಲರುಷಿಪ್ಪುಗಳನ್ನು ಇಂದು ವಿತರಣೆ ಮಾಡುವುದರಲ್ಲಿ ದೋಷಗಳಿವೆ ಇದನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ರಾಜ್ಯ ಸರಕಾರದವರು ಹಾಗೂ ಕೇಂದ್ರ ಸರಕಾರಗಳವರು ಸ್ಕಾಲರ್‌ಷಿಪ್ಪುಗಳನ್ನು ಕೊಡುವಾಗ ಇಂತಹ ಒಂದು ಶಾಲೆಯಲ್ಲೇ ಓದಬೇಕು ಇಲ್ಲದಿದ್ದರೆ ಸ್ಕಾಲರುಷಿಪ್ಪು ಕೊಡಲಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ಎಷ್ಟೋ ಮಕ್ಕಳಿಗೆ ಇದರ ಉಪಯೋಗ ಪಡೆಯುವುದು ಕಷ್ಟವಾಗುತ್ತದೆ. ಏಕೆಂದರೆ

ಎಲ್ಲಿ ಸರಕಾರ ಓದಬೇಕು ಎಂದು ಹೇಳುತ್ತಾರೋ ಅಲ್ಲಿ ಊಟದ ಸೌಕರ್ಯ ಇರುವುದಿಲ್ಲ ಮತ್ತು ವಸತಿ ಸೌಕರ್ಯದ ಕಷ್ಟವೂ ಇರುತ್ತದೆ. ಇದರಿಂದ ಸರಕಾರ ಯಾವ ರೀತಿ ಸ್ಕಾಲರು ಷಿಪ್ಪು ಕೊಟ್ಟು ಮಕ್ಕಳಿಗೆ ಸಹಾಯ ಮಾಡಬೇಕೆಂದಿರುತ್ತಾರೋ ಅವರ ಸ್ಕೀಂ ಇಂತಹ ಒತ್ತಾಯದಿಂದ ವಿಫಲವಾಗುತ್ತದೆ. ಇದನ್ನು ಸರಕಾರ ಗಮನಿಸಬೇಕು. ಕೇಂದ್ರ ಸರಕಾರ ಪರೀಕ್ಷೆಗಳನ್ನು ನಡೆಸಬೇಕಾದರೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮಾಡಲು ಆ ಸರಕಾರಕ್ಕೆ ಏನು ಕಷ್ಟವಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಒಂದೊಂದು ಕಡೆ ಇರುವ ಶಾಲೆಗಳಿಗೆ ಸುಮಾರು ೧೫–೨೦ ಮೈಲಿಗಳಿಂದ ಮಕ್ಕಳು ಬಂದು ಪರೀಕ್ಷೆಗೆ ಕೂಡಬೇಕೆಂದರೆ ಎಷ್ಟೋ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ, ಇದನ್ನು ಸರಕಾರ ಗಮನಿಸಬೇಕು. ಎಲ್ಲರೂ ಶ್ರೀಮಂತರ ಮಕ್ಕಳೇ ಆಗಿರುವುದಿಲ್ಲ, ಬಡವರ ಮಕ್ಕಳೂ ಇರುತ್ತಾರೆ. ಅದರಲ್ಲೂ ಇಂದು ಬೆಂಗಳೂರಿನಂತಹ ನಗರದಲ್ಲಿ ಯಾರ ಮನೆಗೆ ಬಂದರೂ ಪುಗಸಟ್ಟೆ ಊಟ ಸಿಗುವುದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಪರೀಕ್ಷಾ ಕೇಂದ್ರಗಳನ್ನು ಒಂದೇ ಕಡೆ ಇರುವಂತೆ ಮಾಡುವುದು ಯೋಗ್ಯವೇ ಇದನ್ನು ತಾವು ಗಮನಿಸಬೇಕೆಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ತಾವು ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಕೊಡಬೇಕೆಂದು ಹೇಳಿದ್ದೀರಿ......

MR. DEPUTY SPEAKER.—The hon. member had agreed to complete his speech within 20 minutes. Will he Kindly help me to help others ?

(At this stage the Hon. Member resumed his seat)

†ಶ್ರೀ ಕಾಗೋಡುತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ವಿದ್ಯಾ ಸಚಿವರು ಮಂಡಿಸಿರ ತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರವರು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ವಿದ್ಯಾಭ್ಯಾಸದ ಕ್ಷೇತ್ರ ಸಂಖ್ಯೆಯಲ್ಲಿ ವಿಸ್ತಾರವಾಗುತ್ತಿದೆಯೇ ವಿನಾ ಗುಣಮಟ್ಟದಲ್ಲಿ ವಿಸ್ತಾರವಾಗುತ್ತಿಲ್ಲ ಎನ್ನುವ ಮಾತನ್ನು ಅವರು ಹೇಳಿದರು. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಈ ರಾಜ್ಯದಲ್ಲಿರುವ ಪ್ರತಿಯೊಬ್ಬನಿಗೂ ಕೂಡ ವಿದ್ಯಾಭ್ಯಾಸದ ಒಂದು ಸಾಕ್ಷರತೆಯ ಸಂಸ್ಕಾರದ ದೀಕ್ಷೆ ನೀಡುವ ಯಾವ ಕೆಲಸಗಳೂ ಇನ್ನೂ ನಡೆದಿಲ್ಲ. ಇತ್ತೀಚೆಗೆ ಇರುವ ಅಂಕೆಗಳ ಪ್ರಕಾರ ರುಜು ಹಾಕುವುದಕ್ಕೆ ಬರುವವರೂ ಸೇರಿ ವಿದ್ಯಾವಂತರ ಸಂಖ್ಯೆ ಶೇಕಡಾ ಮೂವತ್ತರಷ್ಟು ಎಂದು ಇದೆ. ಇದರ ಮೇಲೆ ಅಕ್ಷರಸ್ಥರ ಸಂಖ್ಯೆ ಹೋಗಿಲ್ಲ. ಇದರ ಬಗ್ಗೆ ನಾವೇನು ಮಾಡಬೇಕೆಂದು ಆಲೋಚನೆ ಮಾಡಬೇಕು. ವಿದ್ಯಾಭ್ಯಾಸ ಏಕೆ ಕೊಡಬೇಕು ಎನ್ನುವ ಪ್ರಶ್ನೆಯೂ ಇದರಲ್ಲಿ ಬರುತ್ತದೆ. ವಯಸ್ಕರಿಗೆ ವಿದ್ಯಾಭ್ಯಾಸ ಕೊಡಬೇಕೆಂದು ಇದರ ಶಿಕ್ಷಣ ಒಂದು ಕಡೆ ನಡೆಯುತ್ತಿದೆ ಇದರಲ್ಲಿ ಏನು ಮಾಡುತ್ತಿದ್ದಾರೋ ನಮಗಂತೂ ಗೊತ್ತಾಗುತ್ತಿಲ್ಲ, ಇದಕ್ಕೆ ದಿವಂಗತ ಶ್ರೀ ಲೋಹಿಯಾರವರು ಒಂದು ಮಾತು ಹೇಳಿದ್ದರು. ವಿದ್ಯಾಭ್ಯಾಸವನ್ನು ವ್ಯಾಪಕವಾಗಿ ಎಲ್ಲರಿಗೂ ಸಿಕ್ಕುವಂತೆ ಯೋಚನೆ ಮಾಡಬೇಕು ಮತ್ತು ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಯಾವ ರೀತಿ ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕು ಎಂದು. ಇದಕ್ಕೆ ಶಾಲೆಗಳಲ್ಲಿ ಟೀಚರುಗಳು ಎಂದು ಮಾಡಿ ಅವರಿಗೆ ಭಾರಿ ಗ್ರೇಡುಗಳು ಎಂದು ೨೦೦–೩೦೦ ಇಲ್ಲವೇ ೨೫೦ ಎಂದು ಕೊಡುತ್ತಿದ್ದಾರೆ ಇದಲ್ಲದೆ ಇಂದು ರಾಜ್ಯದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಕೆಲಸವಿಲ್ಲದೆ ಮನೆಯಲ್ಲಿಯೇ ಇದ್ದಾರೆ. ಇಂತಹವರಿಗೆ ವಿದ್ಯಾ ಇಲಾಖೆಯವರು ಆಯಾ ಡಿವಿಜನ್ನುಗಳಲ್ಲಿ ಎಷ್ಟು ಜನರು ಇಂಥವರು ಇದ್ದಾರೆ ಅದನ್ನು ನೋಡಿಕೊಂಡು ಅವರವರ ಮನೆಗಳ ಹತ್ತಿರದಲ್ಲೇ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಅವರಿಗೆ ಅವಕಾಶ ಸಿಗುವಾಗ ಪಾಠಗಳನ್ನು ಹೇಳಿಕೊಡಲು ೭೫ ಇಲ್ಲವೇ ನೂರು ರೂಪಾಯಿಗಳ ವೇತನವನ್ನೂ ಕೊಟ್ಟರೆ ಎಷ್ಟೋ ಜನರನ್ನು ವಿದ್ಯಾವಂತರನ್ನಾಗಿ ಮಾಡಬಹುದು. ಅವರಿಗೂ ಕೆಲಸಗಳನ್ನು ಕೊಟ್ಟಂತಾಗುತ್ತದೆ

ಇಂದು ವಿದ್ಯೆ ಕಲಿಯತಕ್ಕಂಥ ವಿದ್ಯಾವಂತರಲ್ಲಿ ಏನು ಒಂದು ಕಲ್ಪನೆಯಿದೆ, ಅದೇ ರೀತಿ ಮುಂದೆ ಇದರಿಂದ ನಮಗೆ ಲಾಭವಿದೆಯೆಂಬ ಈ ವಯಸ್ಕರಿಗೂ ಸಹ ನಾವು ವಿದ್ಯೆ ಕಲಿಯುವುದರಿಂದ ಲಾಭವಿದೆ ಎಂಬತಕ್ಕಂಥ ಪ್ರಜ್ಞೆಯನ್ನು ಉಂಟುಮಾಡಬೇಕು. ಆ ರೀತಿ ಪ್ರಜ್ಞೆ ಉಂಟಾಗಬೇಕಾದರೆ ಅವರಿಗೆ ತಿಂಗಳಿಗೆ ೧೦ ರೂಪಾಯಿಗಳನ್ನು ಇನಾಸೆಂಟೀವ್ ಕೊಡುತ್ತೇವೆಂಬುದಾಗಲೀ ಅಥವಾ ಬಟ್ಟೆ ಕೊಡುತ್ತೇವೆಂದಾಗಲೀ ಹೇಳಬೇಕಾಗುತ್ತದೆ. ಇಂದು ಯಾರು ಸಾಮಾಜಿಕವಾಗಿ ಅಕ್ಷರಸ್ಥರಾಗಿರುವುದಿಲ್ಲ. ಹಿಂದುಳಿದಿದ್ದಾರೆ, ಅವರು ಇಂತಹವರ ಸಂಖ್ಯೆಯೇ ನಮ್ಮಲ್ಲಿ ಇಂದು ಜಾಸ್ತಿಯಾಗಿದೆ. ಇವರಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇರುವುದಿಲ್ಲ ಇವರು ದಡ್ಡರಾಗಿಯೇ ಇನ್ನೂ ಉಳಿದಿದ್ದಾರೆ. ಇವರಿಗೆ ಪ್ರಪಂಚದ ಸಮಸ್ಯೆಯನ್ನು ತಿಳಿದುಕೊಳ್ಳಬೇಕೆಂಬ ಆಕಾಂಕ್ಷೆಯಿಲ್ಲ. ಜೊತೆಗೆ ತಮ್ಮ ಮಕ್ಕಳಿಗೂ ಸಹ ವಿದ್ಯೆಯನ್ನು

ಕಲ್ಪಿಸಬೇಕು ಎಂಬ ಆಶೆ ಇಲ್ಲವಾಗಿದೆ. ಆದಕಾರಣ ಈ ಜನರ ಜೀವಾಳವನ್ನು ನಾವು ಅರ್ಥ ಮಾಡಿಕೊಂಡು, ಅವರ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸಲು ಏನು ಮಾಡಬೇಕೆಂದರೆ, ೬ ತಿಂಗಳೊಳಗೆ ಬರೆಯುವುದು ಮತ್ತು ಓದುವುದನ್ನು ಕಲಿತರೆ ತಿಂಗಳಿಗೆ ಹತ್ತು ರೂಪಾಯಿ ಕೊಡುತ್ತೇವೆ ಎಂದು ಅವರಿಗೆ ಹೇಳಿದರೆ ಆಗ ವಿದ್ಯೆ ಕಲಿಯಲು ಮುಂದೆ ಬರುತ್ತಾರೆ. ಇಂದು ಸರ್ಕಾರದವರು; ಹಳ್ಳಿಗಾಡಿನಲ್ಲಿರುವ ಪ್ರತಿ ಶಾಲೆಯಲ್ಲಿ ಎಷ್ಟು ಜನ ಮಕ್ಕಳು ಎನ್‌ರೋಲ್‌ಮೆಂಟ್ ಆಗಿದ್ದಾರೆಂಬ ಬಗ್ಗೆ ಇಲ್ಲಿ ಲೆಕ್ಕ ಕೊಟ್ಟಿದ್ದಾರೆ. ಆದರೆ ಇವರುಗಳ ಪೈಕಿ ಸರಾಸರಿ ಎಷ್ಟು ಜನ ಮಕ್ಕಳು ಶಾಲೆಗೆ ಬರುತ್ತಿದ್ದಾರೆಂಬ ಬಗ್ಗೆ ಲೆಕ್ಕ ಕೊಟ್ಟಿಲ್ಲ. ಇದನ್ನು ನಾವು ಗಮನಕ್ಕೆ ತೆಗೆದುಕೊಂಡರೆ ಬಹಳ ಕಡಿಮೆ ಇದೆ ಎಂದು ಹೇಳಬಹುದು. ಹಳ್ಳಿಗಾಡಿನಲ್ಲಿರುವ ಮಕ್ಕಳೇ ಆಗಲೀ, ವಯಸ್ಕರೇ ಆಗಲೀ, ಇಂದು ವಿದ್ಯೆಯನ್ನು ಕಲಿಯುವ ಆಸಕ್ತಿ ತೋರಿಸುತ್ತಿಲ್ಲ, ಇವರಿಗೆ ಅಕ್ಷರಜ್ಞಾನ ತುಂಬಬೇಕಾದರೆ ಏನಾದರು ಇನ್‌ಸೆಂಟೀವ್ ಕೊಡಬೇಕಾಗುತ್ತದೆ. ನಾವು ಪ್ರತಿ ವರ್ಷ ಎನ್.ಜಿ.ಓ. ಗಳಿಗೆ ಆಹಾರಧಾನ್ಯಗಳ ಬೆಲೆ ಜಾಸ್ತಿಯಾಯಿತು ಎಂದು ಹತ್ತು ರೂಪಾಯಿಗಳನ್ನು ಜಾಸ್ತಿ ಕೊಡುತ್ತೇವೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಏನೂ ಕೊಡುತ್ತಿಲ್ಲ, ಬೆಲೆಗಳು ಎಷ್ಟೇ ಜಾಸ್ತಿಯಾದರೂ ಸಹ ನಾವು ಅವರಿಗೆ ಏನನ್ನೂ ಕೊಡುತ್ತಿಲ್ಲ. ಇನ್ನು ಮುಂದಾದರೂ ಸಹ ಇವರಿಗೆ ಏನಾದರು ಇನ್‌ಸೆಂಟಿವ್ ಕೊಡುವುದರ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಷರ ಸೇನೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಶ್ರೀಮತಿ ನಾಗಮ್ಮನವರು ಮಾತನಾಡುವಾಗ ಹೇಳಿದರು, ಏನೆಂದರೆ ಶಿಕ್ಷಣ ಕ್ಷೇತ್ರ ಉತ್ತಮವಾಗಬೇಕಾದರೆ ಬಾಲವಾಡಿಗಳನ್ನು ಅಂದರೆ ನರ್ಸರಿ ಸ್ಕೂಲುಗಳನ್ನು ಜಾಸ್ತಿ ತೆರೆಯಬೇಕು ಎಂದು ಯಾರು ಐ.ಎ.ಎಸ್. ಅಧಿಕಾರಿಗಳು ಇದ್ದಾರೆ, ಯಾರು ಬರಹಗಾರರಿದ್ದಾರೆ, ಯಾರು ವಿಚಾರವಾದಿಗಳಿದ್ದಾರೆ. ಅಂತಹವರು ಅಂದರೆ ಪಟ್ಟಣಗಳಲ್ಲಿ ವಾಸ ಮಾಡುತ್ತಿರುವವರು ತಮ್ಮ ಮಕ್ಕಳನ್ನು ನರ್ಸರಿ ಶಾಲೆಗಳಿಗೆ ಸೇರಿಸುತ್ತಿರುವುದರಿಂದ, ಅಂತಹವರ ಮಕ್ಕಳು ಒಳ್ಳೆಯ ವಾತಾವರಣದಲ್ಲಿ ಬೆಳೆಯುವುದರ ಮೂಲಕ ಹೆಚ್ಚಿನ ವಿದ್ಯಾವಂತರಾಗುತ್ತಿದ್ದಾರೆ. ಇಂತಹ ಮಕ್ಕಳಿಗೂ ಮತ್ತು ಹಳ್ಳಿಗಾಡಿನಲ್ಲಿ ಓದಿರುವ ಮಕ್ಕಳಿಗೂ ಏನಾದರು ಕಾಂಪಿಟಿಟೀವ್ ಪರೀಕ್ಷೆಯನ್ನು ಏರ್ಪಡಿಸಿದರೆ, ಪಟ್ಟಣಗಳಲ್ಲಿ ಓದಿರುವ ಮಕ್ಕಳೇ ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಹಳ್ಳಿಗಾಡಿನ ಮಕ್ಕಳೂ ಸಹ ಪಟ್ಟಣಗಳಲ್ಲಿರುವ ಮಕ್ಕಳ ದರ್ಜೆಗೆ ಬರುವಂತಾಗಲು ಗ್ರಾಮಾಂತರ ಪ್ರದೇಶಗಳಲ್ಲಿ ಈ ಮಕ್ಕಳಿಗೆ ಒಳ್ಳೆಯ ವಿದ್ಯೆ ಕಲಿಸಲು ಅನುಕೂಲವಾಗುವಂತೆ ಒಳ್ಳೆಯ ತಳಹದಿ ಹಾಕಬೇಕು. ಆದಕ್ಕಾಗಿ ಯಾವ ಯಾವ ಗ್ರಾಮಗಳಲ್ಲಿ ೩ ರಿಂದ ೫ ವರ್ಷ ವಯಸ್ಸಿನೊಳಗಿರುವ ೨೫ ಮಕ್ಕಳು ಸಿಗುತ್ತಾರೆ ಅಂತಹ ಕಡೆಗಳಲ್ಲಿ ಒಂದೊಂದು ಬಾಲವಾಡಿಗಳನ್ನು ನಡೆಸಬೇಕು. ಬಾಲವಾಡಿ ನಡೆಸಲು ಒಳ್ಳೆಯ ಕಟ್ಟಡವೇ ಬೇಕೆಂಬ ನಿಯಮವೇನೂ ಬೇಡ. ಸ್ಥಳದಲ್ಲಿಯೇ ಸಿಗುವ ಕಚ್ಚಾವಸ್ತುಗಳನ್ನು ಉಪಯೋಗ ಮಾಡಿಕೊಂಡು ಜೋಪಡಿಗಳನ್ನು ಕಟ್ಟಿದರೆ ಸಾಕು, ಇಂದು ನಮ್ಮ ರಾಜ್ಯದಲ್ಲಿ ೨೬ ಸಾವಿರ ಗ್ರಾಮಗಳಿವೆ ಈ ಗ್ರಾಮಗಳಲ್ಲಿರುವ ಮಕ್ಕಳು ವಿದ್ಯಾವಂತರಾಗಬೇಕಾದರೆ ಬಾಲವಾಡಿಗಳ ಅವಶ್ಯಕತೆ ಇದೆ. ಆದಕಾರಣ ಸರ್ಕಾರದವರು ವರ್ಷಕ್ಕೆ ಒಂದು ಬಾಲವಾಡಿಗೆ ಒಂದು ಸಾವಿರ ರೂಪಾಯಿನಂತೆ ಖರ್ಚು ಮಾಡಿದರೂ ಸಹ ಒಟ್ಟು ಎರಡೂವರೆ ಕೋಟಿ ರೂಪಾಯಿಗಳ ಹೆಚ್ಚು ಖರ್ಚು ಬರಬಹುದು. ಇದೇನೂ ಹೆಚ್ಚು ದೊಡ್ಡ ಮೊತ್ತವಲ್ಲ, ಏಕೆಂದರೆ ಇಂದು ವಿದ್ಯಾಭ್ಯಾಸಕ್ಕಾಗಿ ೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಈ ಹಣದಲ್ಲಿ ಸುಮಾರು ೩೮–೪೦ ಕೋಟಿ ರೂಪಾಯಿಗಳವರೆಗೆ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿಯೇ ಖರ್ಚು ಮಾಡಲಾಗುತ್ತಿದೆ. ಆದಕಾರಣ ಸಣ್ಣ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಬಾಲವಾಡಿಗಳಿಗೆ ಎರಡೂವರೆ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ನಾವು ಖರ್ಚು ಮಾಡುವ ಹಣವೆಲ್ಲಾ ಬುದ್ಧಿವಂತರ ಪಾಲಾಗಿ ಗ್ರಾಮಾಂತರ ಪ್ರದೇಶದ ಮಕ್ಕಳೆಲ್ಲಾ ಹಾಗೆಯೇ ಉಳಿದುಬಿಡುತ್ತಾರೆ. ಆದಕಾರಣ ಈ ಒಂದು ಕಾರ್ಯಕ್ರಮವನ್ನು ಜಾರಿಗೆ ತರಬೇಕು, ಆದಕ್ಕೆ ಹಣದ ಕೊರತೆ ಅಡ್ಡಿ ಬರದಂತೆ ಏನಾದರು ಮಾಡಿ ಹಣವನ್ನು ಒದಗಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ತಾವು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೧೯೭೬ ಬಾಲವಾಡಿಗಳಿವೆ. ಇವುಗಳ ಪೈಕಿ ಹೆಚ್ಚಿನವು ಇಂದು ಪೇಟೆಗಳಲ್ಲಿವೆ ಇವುಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಬಗ್ಗೆ ಬೆಂಗಳೂರಿನಿಂದಲೇ ಮೊದಲು ಪ್ರಾರಂಭ ಮಾಡಿ. ಆ ರೀತಿ ಪೀಠಿಕೆಯನ್ನು ಹಾಕಿಕೊಳ್ಳುವುದರ ಮೂಲಕ ಪ್ರತಿವರ್ಷ ಕನಿಷ್ಠ ಪಕ್ಷ ೫ ಸಾವಿರ ಇಂತಹ ಶಾಲೆಗಳನ್ನಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯುವುದಕ್ಕೆ ಪ್ರಯತ್ನ ಮಾಡಿದರೆ ಮುಂದಿನ ೫ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿರುವ ಎಲ್ಲ ೨೬ ಸಾವಿರ ಗ್ರಾಮಗಳಿಗೂ ಸಹ ಬಾಲವಾಡಿಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ, ಜೊತೆಗೆ ಈ ಮಕ್ಕಳನ್ನು ವಿದ್ಯಾಕ್ಷೇತ್ರದಲ್ಲಿ ಮೇಲೆ ತರುವುದಕ್ಕೆ ಒಂದು ತಳಹದಿ ಹಾಕಿಕೊಟ್ಟಂತಾಗುತ್ತದೆ ಆದಕಾರಣ ಅಂತಹ ಒಂದು ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುತ್ತಾರೆಂದು ನಾನು ನಂಬಿದ್ದೇನೆ. ಇಂದು ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ೩೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಮತ್ತು ಖಾಸಗೀ ಜನರು ನಡೆಸುವ ವಿದ್ಯಾಭ್ಯಾಸ

ಕ್ಕಾಗಿ ಸರ್ಕಾರದವರು ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕಂಥ ಹಣದ ಪೈಕಿ ಬಹುಭಾಗದ ಹಣವೆಲ್ಲಾ ಸರ್ಕಾರೀ ಕ್ಷೇತ್ರದಲ್ಲಿರುವ ಶಾಲೆಗಳಿಗೇ ಖರ್ಚಾಗುತ್ತಿದೆ ಆದರೆ ಖಾಸಗೀ ಶಾಲೆಗಳ ಬಗ್ಗೆ ಮಾಡುತ್ತಿರುವ ಖರ್ಚು ಬಹಳ ಕಡಿಮೆ ಈ ಕಾರಣದಿಂದ ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳುವುದೇ ಒಳ್ಳೆಯದು. ಇದೇ ರೀತಿ ಮುಂದುವರಿಯಲು ಬಿಡಬಾರದು, ಏಕೆಂದರೆ ಇಂದು ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಒಂದೊಂದು ಖಾಸಗೀ ಶಾಲೆಗಳ ಚಿತ್ರವನ್ನು ನೋಡುವುದಾದರೆ, ಖಂಡಿತವಾಗಿಯೂ ಪ್ರಜಾಪ್ರಭುತ್ವ ದಲ್ಲಿರತಕ್ಕಂಥ ನಾಗರೀಕ ಸಂಪನ್ನರು ಯಾರೂ ಅವುಗಳ ಆಡಳಿತವನ್ನು ಮೆಚ್ಚಿಕೊಳ್ಳುವುದಿಲ್ಲ, ಈಗತಾನೆ ಮಾತನಾಡಿದ ಮಾನ್ಯ ಚಂದ್ರಶೇಕರ್ ಅವರು ಇವುಗಳು ವ್ಯಾಪಾರಿ ಸಂಸ್ಥೆಗಳಂತೆ ನಡೆಯುತ್ತಿವೆ ಎಂದು ಹೇಳಿದರು. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಬೆಂಗಳೂರಿನಲ್ಲಿ ಕವ ಲಾ ನೆಹರೂ ಮಕ್ಕಳ ಮಂದಿರ ಎಂಬುದಿದೆ. ಇದಕ್ಕ ಮೊದಲು ಮಾನ್ಯ ಹನುಮಂತಯ್ಯನವರು ಅಧ್ಯಕ್ಷರಾಗಿದ್ದರು. ಈ ಶಾಲೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು ಹೊರಗೆ ಹಾಕಿದಾಗ, ಮಾನ್ಯ ಹನುಮಂತಯ್ಯನವರು ಅಧ್ಯಕ್ಷ ಸ್ಥಾನದಿಂದ ಕಳಚಿಕೊಂಡರು. ಈಗ ಆ ಶಾಲೆಯ ಆಡಳಿತ ವರ್ಗದವರು ಅಲ್ಲಿಯ ಅಧ್ಯಕ್ಷ ಸ್ಥಾನಕ್ಕೆ ಈ ರಾಜ್ಯದ ಮುಖ್ಯಮಂತ್ರಿಗಳ ಸಂಬಂಧೀಕರೊಬ್ಬರನ್ನು ತಂದು ಕೂರಿಸಿದ್ದಾರೆ. ಈ ಖಾಸಗೀ ಶಾಲೆಗಳಲ್ಲಿ ಅನೇಕ ರೀತಿಯ ಅವ್ಯವಹಾರಗಳು ನಡೆಯುತ್ತಿವೆ. ಕೆಲಸ ಮಾಡುವವರು ಯಾರೋ ಆದರೆ ಸಂಬಳ ತೆಗೆದುಕೊಳ್ಳುವವರು ಬೇರೆಯವರಾಗಿರುತ್ತಾರೆ. ಜೊತೆಗೆ ಸಂಬಳ ಸರಿಯಾಗಿ ಕೊಡುವುದಿಲ್ಲ, ಯಾರೋ ಹೆಬ್ಬೆಟ್ಟನ್ನು ಒತ್ತುತ್ತಾರೆ, ಯಾರೋ ಸಂಬಳ ಪಡೆಯುತ್ತಾರೆ, ಈ ರೀತಿ ಅನೇಕ ರೀತಿಯಲ್ಲಿ ಅಕ್ರಮಗಳು ನಡೆಯುತ್ತಿವೆ. ಈ ರೀತಿ ಅಕ್ರಮವಾಗಿ ನಡೆಯುತ್ತಿದೆ ಎಂದು ಗೊತ್ತಾದಾಗ, ಮೊದಲು ಅಧ್ಯಕ್ಷ ಸ್ಥಾನದಲ್ಲಿದ್ದ ಸಂಪನ್ನ ರಾಜಕಾರಣಿಗಳು ತಮ್ಮ ಸ್ಥಾನದಿಂದ ದೂರ ಸರಿದರೆ, ಅದೇ ಜಾಗಕ್ಕೆ ಇನ್ನೊಬ್ಬ ಸಂಪನ್ನ ರಾಜಕಾರಣಿಗಳು ಹೋಗಿ ಸೇರಿಕೊಳ್ಳುತ್ತಿದ್ದಾರೆ. ಈ ರೀತಿ ಇಂದು ಬೆಂಗಳೂರಿನಲ್ಲಿ ಅನೇಕ ಖಾಸಗೀ ಶಾಲೆಗಳು ರಾಜಕಾರಣಿಗಳ ಆಶ್ರಯದಲ್ಲಿ ನಡೆಯುತ್ತಿವೆ.

ಆದ್ದರಿಂದ ಇವೊತ್ತು ಈ ಶಾಲೆಗಳ ಅವ್ಯವಹಾರ ತೀರಾ ಕೆಟ್ಟಿದೆ. ಹೋದ ವರ್ಷ ಕೂಡ ಈ ನಾದನ ಶಾಲೆಯ ಬಗ್ಗೆ ನಾವು ಹೇಳಿದ್ದೆವು. ಇಂಥಾ ಶಾಲೆಗಳು ಬೆಂಗಳೂರಿನಲ್ಲಿ ಸುಮಾರು ೧೦೦—೧೫೦ ಶಾಲೆಗಳು ಇವೆ. ಇಂಥಾ ಶಾಲೆಗಳಿಗೆ ಸಂಬಂಧಪಟ್ಟಹಾಗೆ ಕಳೆದ ಸಾರಿ ಒಂದು ಪಟ್ಟಿಯನ್ನು ಮಾಡಿ ನಾವು ಸರ್ಕಾರಕ್ಕೆ ಕೊಟ್ಟಿದ್ದೆವು. ನಿನ್ನೆ ಒಂದು ಶಾಲೆಯ ವಿಷಯ ಬಂದಿದೆ. ಈ ಶಾಲೆಯ ವಿಚಾರ ಬಹಳ ಚೆನ್ನಾಗಿದೆ. ರಾಜಾಜಿನಗರದ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾಗಿರುವ ಶ್ರೀಮಾನ್ ಮಲ್ಲೇಗೌಡರ ಶ್ರೀಮತಿಯವರು ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಆ ಶಾಲೆಯ ಮುಖ್ಯೋಪಾಧ್ಯಾಯರು ಶ್ರೀಮಾನ್ ಮಲ್ಲೇಗೌಡರ ಅಳಿಯಂದಿರಾಗಿದ್ದಾರೆ. ಆ ಶಾಲೆಯ ಹೆಸರು ಚಂದ್ರೋದಯ ವಿದ್ಯಾಲಯ. ಆ ಶಾಲೆಯಲ್ಲಿ ಶ್ರೀಮಾನ್ ಮಲ್ಲೇಗೌಡರ ಅಳಿಯ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುತ್ತಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಅಲ್ಲಿ ನಡೆಯುತ್ತಾ ಇರುವ ಅನ್ಯಾಯ ಗಳನ್ನು ಹೇಳಬೇಕಾಗಿದೆ. ಅಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ಒಂದು ತಿಂಗಳಿಗೆ ೧೦೦ ರೂಪಾಯಿ ಸಂಬಳ ಬಂದರೆ ಅವರ ಕೈಗೆ ಹೋಗುವುದು ಕೇವಲ ೭೦-೮೦ ರೂಪಾಯಿಗಳುಮಾತ್ರ. ಇದರ ಜೊತೆ ಆ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬರು ಉಪಾಧ್ಯಾಯರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ.

6—05 P.M.

ಉಪಾಧ್ಯಕ್ಷರು :—ಈಗ ಚೆಕ್ ಸಿಸ್ಟಂ ಇದೆಯಲ್ಲಾ.

ಶ್ರೀ ಕಾಗೋಡುತಿಮ್ಮಪ್ಪ.—ಮುಂಚೆಯೇ ರುಜುಹಾಕಿಸಿಕೊಂಡಿರುತ್ತಾರೆ. ಬೇಲಿಯಲ್ಲಿ ಕಂಡಿ ಕೊರೆದು ನುಗ್ಗುತ್ತಾರೆ. ಅಂಥಾ ಅವ್ಯವಹಾರವನ್ನು ಅಲ್ಲಿ ಮಾಡುತ್ತಾರೆ. ಆ ಶಾಲೆಯಲ್ಲಿ ತೆಗೆದು ಹಾಕಿದ ಉಪಾಧ್ಯಾಯರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೆ ಆ ಬಗ್ಗೆ ಇನ್ನೂ ಅವರು ಏನೂ ಮಾಡಿಲ್ಲ. ಖಾಸಗೀ ಸಂಸ್ಥೆಗಳು ಸರ್ಕಾರಕ್ಕೆ ಹೆದರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೂ ಹೆದರುವುದಿಲ್ಲ. ರಾಜಕಾರಣಿಗಳನ್ನು ಹಿಡಿದುಕೊಂಡು ಭದ್ರವಾಗಿ ಕುಳಿತುಕೊಂಡಿದ್ದಾರೆ. ಇವರು ಸರ್ವಾಧಿಕಾರಿಗಳಾಗಿ ಆಡಳಿತ ಪಕ್ಷದವರನ್ನು ಬಲವಾಗಿ ಹಿಡಿದುಕೊಂಡು ಕುಳಿತುಕೊಂಡಿದ್ದಾರೆ. ರಾಜಕಾರಣಿಗಳ ಕೈಹಿಡಿದುಕೊಂಡು ಕುಳಿತುಕೊಂಡಿರುವ ಅನೇಕ ಖಾಸಗಿ ವಿದ್ಯಾ ಸಂಸ್ಥೆಗಳು ಇವೆ. ಬೆಂಗಳೂರಿನಲ್ಲಿಯೂ ಇವೆ, ಮೈಸೂರಿನಲ್ಲಿಯೂ ಇವೆ. ಮೈಸೂರಿನಲ್ಲಿ ಖಾಸಗಿ ವಿದ್ಯಾಸಂಸ್ಥೆಯನ್ನು ನಡೆಸುವ ಒಬ್ಬರು ಮೇಧಾವಿನಿಯವರು ವಿಧಾನಸೌಧದಲ್ಲಿ ಓಡಾಡುತ್ತಿರುತ್ತಾರೆ. ಅವರು ಮಂತ್ರಿಗಳ

ಕಚೇರಿಗೂ ಹೋಗುತ್ತಾರೆ. ಇದನ್ನು ನಾನು ನೋಡಿದ್ದೇನೆ. ಅವರು ರಾಜಕಾರಿಣಿಗಳ ಪ್ರಭಾವವನ್ನು ಬೀರಿದ್ದಾರೆ. ಪ್ರಮುಖ ಜನಗಳ ವಿಶ್ವಾಸವನ್ನು ಪಡೆದುಕೊಂಡು ತಮ್ಮ ವಿದ್ಯಾ ಸಂಸ್ಥೆಗಳ ಕೆಲಸ ಕಾರ್ಯಗಳ ಬಗ್ಗೆ ಅವರ ವರ್ಚಸ್ಸನ್ನು ಬೀರುವ ಅವಕಾಶ ಇದೆ. ಅವ್ಯವಹಾರ ನಡೆಸುವ ಖಾಸಗೀ ಶಾಲೆಗಳ ನೀತಿ ಏನಿದೆ ಇದು ಅತ್ಯಂತ ಹೇಯವಾದುದು ಎಂದು ನಾನು ಹೇಳಬೇಕಾಗಿದೆ. ಇದರ ಬಗ್ಗೆ ಒಂದು ಮಾತು ಹೇಳಬೇಕು ಎಂದರೆ ಎಲ್ಲಾ ಶಾಲೆಗಳನ್ನೂ ಸರ್ಕಾರವೇ ವಹಿಸಿಕೊಂಡು ನಡೆಸುವುದು ಒಳ್ಳೆಯದು. ಇಲ್ಲದಿದ್ದರೆ ಈ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ನಡೆಯುವ ಅವ್ಯವಹಾರವನ್ನು ತಿಳಿಸಲು ಸಾಧ್ಯವಿಲ್ಲ. ಈ ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ದುಡಿಯುವವರು ಒಬ್ಬರು ಸಂಬಳ ತೆಗೆದುಕೊಳ್ಳುವವರು ಒಬ್ಬರು. ಸಂಬಂಧೀಕರನ್ನು ಮ್ಯಾನೇಜಿಂಗ್ ಕಮಿಟಿಯಲ್ಲಿ ಇಟ್ಟುಕೊಂಡಿರುವುದು. ಅವರು ಯಾವ ಕಾನೂನನ್ನು ಅನುಸರಿಸುವುದಿಲ್ಲ, ಯಾವ ನೀತಿಯನ್ನೂ ಅನುಸರಿಸುವುದಿಲ್ಲ ಇದರ ಜೊತೆಗೆ ಕೆಲವು ರಾಜಕಾರಿಣಿಗಳನ್ನು ಮತ್ತು ವಿದ್ಯಾ ಇಲಾಖೆಯಲ್ಲಿ ಕೆಲವು ಅಧಿಕಾರಿಗಳನ್ನು ಸರಿಮಾಡಿಕೊಂಡು ಅಲ್ಲಿ ನಡೆಯಂತಕ್ಕ ಅವ್ಯವಹಾರವನ್ನು ಮುಚ್ಚಿ ಹಾಕುತ್ತಾರೆ. ಬೇಲಿಯೇ ಎದ್ದು ಹೊಲ ಮೇಯುತ್ತಿದೆ. ವಿದ್ಯಾ ಇಲಾಖೆಯಲ್ಲಿ ಸ್ಕೂಲ್ ಇನ್‌ಸ್ಪೆಕ್ಟರ್ ಡಿ.ಡಿ.ಪಿ.ಐ. ಅವರು ಚೆನ್ನಾಗಿ ಕೆಲಸ ಮಾಡಿದ್ದರೆ ಇಂಥಾ ಹಗರಣಗಳು ನಡೆಯುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಬೆಂಗಳೂರು ನಗರದಲ್ಲಿ ಪಕ್ಕದ ಮನೆಯಲ್ಲಿ ಯಾರು ಇದ್ದಾರೆ ಎಂಬುದು ಗೊತ್ತಾಗುವುದಿಲ್ಲ ಒಂದು ಸಣ್ಣ ಊರಿನಲ್ಲಿ ಆದರೆ ಯಾರು ಏನು ಮಾಡಿದರೂ ಗೊತ್ತಾಗುತ್ತದೆ. ನಗರ ದೊಡ್ಡ ಸಮುದ್ರ ಇದ್ದಹಾಗೆ ಯಾರು ಎಲ್ಲಿ ಹೋಗುತ್ತಾರೆ ಯಾರು ಎಲ್ಲಿ ಬರುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಆದ್ದರಿಂದ ಯಾರೇ ಬರಲಿ ರಾಜಕಾರಿಣಿಗಳಿಗೆ ನಾನು ಹೇಳತಕ್ಕಂಥಾ ಮಾತು ಏನೆಂದರೆ ಸಮಾಜದ ವ್ಯವಸ್ಥೆಯನ್ನು ಸೃಷ್ಟಿ ಮಾಡತಕ್ಕ ಅವರು ಅರ್ಥ ಮಾಡಿಕೊಳ್ಳಬೇಕು. ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡಿದರೆ ಏನಾಗುತ್ತದೆ ಎಂಬುದನ್ನು ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಹೇಳಿದ್ದಾರೆ. ಭ್ರಷ್ಟಾಚಾರ ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿದೆ. ಈ ಭ್ರಷ್ಟತೆಯನ್ನು ಮಟ್ಟ ಹಾಕದಿದ್ದರೆ ಪ್ರಜಾಪ್ರಭುತ್ವಕೆ ಭವಿಷ್ಯವಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಈ ಸಂಸ್ಥೆಗಳಲ್ಲಿ ಸಂಪೂರ್ಣವಾಗಿ ಭ್ರಷ್ಟಾಚಾರವನ್ನು ಬಲಿ ಹಾಕಬೇಕಾದರೆ ಈ ಶಾಲೆಗಳನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಿಕೊಂಡು ನಡೆಸಬೇಕು, ಮಕ್ಕಳಿಗೆ ಅನಾನುಕೂಲವಾಗುವುದಾದರೆ ಪ್ರತ್ಯೇಕ ಶಾಲೆಗಳನ್ನು ತಕ್ಷಣ ಸರ್ಕಾರದವರು ಪ್ರಾರಂಭ ಮಾಡಿ ಅವರಿಗೆ ವಿದ್ಯಾಭ್ಯಾಸ ಸೌಕರ್ಯವನ್ನು ವ್ಯವಸ್ಥೆ ಮಾಡಿಕೊಡಬೇಕು. ನಾನು ಮೊದಲೇ ಹೇಳಿದ ಹಾಗೆ ಈ ಪ್ರೈಮರಿ ಶಾಲೆಗಳ ವ್ಯವಸ್ಥೆಯನ್ನು ಸರ್ಕಾರವೇ ಪೂರ್ಣವಾಗಿ ವಹಿಸಿಕೊಳ್ಳಬೇಕು. ಇದರಿಂದ ಸರ್ಕಾರಕ್ಕೆ ೪-೫ ಕೋಟಿ ರೂಪಾಯಿಗಳು ಹೆಚ್ಚು ಖರ್ಚಾದರೂ ಚಿಂತೆ ಇಲ್ಲ. ಇದನ್ನು ಸರ್ಕಾರದವರು ಮಾಡುವುದು ಒಳ್ಳೆಯದು. ಯಾವ್ಯಾವುದಕ್ಕೋ ಎಷ್ಟೋ ಹಣ ದುರ್ವ್ಯಯವಾಗುತ್ತದೆ. ಅದನ್ನು ಉಳಿಸಿಕೊಂಡು ೪-೫ ಕೋಟಿ ರೂಪಾಯಿ ಹೆಚ್ಚು ಹಣವನ್ನು ಈ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದರೂ ಪರವಾಯಿಲ್ಲ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಇನ್‌ಸ್ಟಿಟ್ಯೂಟ್ ಆಫ್ ಸೋಷಿಯೋ ಅಂಡ್ ಎಕನಾಮಿಕ್ ಚೇಂಜಸ್ ಇಂಥವುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಹೀಗಿರುವಾಗ ಇವೊತ್ತು ಸಮಾಜದಲ್ಲಿ ಹಿಂದುಳಿದಿರತಕ್ಕವರ ಮಕ್ಕಳ ಏಳಿಗೆಗಾಗಿ ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಿಕೊಂಡು ಅದರ ಕ್ಷಯವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಬೇಕು. ಇಲ್ಲದಿದ್ದರೆ ಅದು ಇಡೀ ದೇಹವನ್ನೇ ವ್ಯಾಪಿಸಿ ದೇಹವನ್ನು ಹಾಳು ಮಾಡುತ್ತದೆ. ಆದ್ದರಿಂದ ಈಗ ಕಾಲ ಸನ್ನಿಹಿತವಾಗಿದೆ. ಸರ್ಕಾರದವರು ಪ್ರಾಥಮಿಕ ಶಿಕ್ಷಣದ ಪೂರ್ಣ ಜವಾಬ್ದಾರಿಯನ್ನು ಕೈಗೆ ತೆಗೆದುಕೊಂಡು ನಡೆಸಬೇಕು ಎಂದು ನಾನು ಮಾನ್ಯ ವಿದ್ಯಾ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಾ ಇರತಕ್ಕ ಹಗರಣಗಳನ್ನು ನಾವು ಬಹಳವಾಗಿ ಕೇಳುತ್ತಿದ್ದೇವೆ. ಯಾರ ಮೇಲೂ ನಾನು ಪ್ರಧಾನವಾಗಿ ಹೇಳುವುದಿಲ್ಲ. ಯಾರ ಮೇಲೆ ಹೇಳಿದರೂ ಕಷ್ಟ. ಏತಕ್ಕೆಂದರೆ ಕರ್ನಾಟಕ ವಿಶ್ವವಿದ್ಯಾನಿಲಯದ ವಿಷಯವನ್ನು ಮಾತನಾಡಿದರೆ ಲಿಂಗಾಯಿತರು ಏನು ತಿಳಿದುಕೊಳ್ಳುತ್ತಾರೆಯೋ ಎಂದು ಹೆದರಿಕೆ, ಮೈಸೂರು ವಿಶ್ವವಿದ್ಯಾನಿಲಯದ ವಿಷಯವನ್ನು ಮಾತನಾಡಿದರೆ ಒಕ್ಕಲಿಗರು ಏನು ತಿಳಿದುಕೊಳ್ಳುತ್ತಾರೆಯೋ ಎಂದು ಹೆದರಿಕೆ. ಬೆಂಗಳೂರು ವಿಶ್ವವಿದ್ಯಾನಿಲಯದ ವಿಷಯವನ್ನು ಮಾತನಾಡಿದರೆ ಬ್ರಾಹ್ಮಣರು ಏನು ತಿಳಿದುಕೊಳ್ಳುತ್ತಾರೆಯೋ ಎಂದು ಹೆದರಿಕೆ. ನನಗೆ ಎರಡೂ ಕಡೆಯವರು ವಿಚಾರಗಳನ್ನು ಕೊಟ್ಟಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಬೈದರೆ ಬ್ರಾಹ್ಮಣರು ಬಳ ಚೆನ್ನಾಗಿ ಬೈದಿರಿ ಎಂದು ಹೇಳುತ್ತಾರೆ ಮೈಸೂರು ವಿಶ್ವವಿದ್ಯಾನಿಲಯವನ್ನು ಬೈದರೆ ಲಿಂಗಾಯಿತರು ಬಹಳ ಚೆನ್ನಾಗಿ ಬೈದಿರಿ ಎಂದು ಹೇಳುತ್ತಾರೆ. ಹೀಗೆ ಒಬ್ಬರನ್ನು ಬೈದಾಗ ಮತ್ತೊಬ್ಬರು ಚೆನ್ನಾಗಿ ಬೈದಿರಿ ಎಂದು ಹೇಳುವುದು ಇವೆಲ್ಲಾ ನಡೆಯುತ್ತದೆ. ನಾನು ಮಧ್ಯವರ್ತಿಯಾಗಿ ಎರಡೂ ಕಡೆಗೆ ಹೇಳುತ್ತೇನೆ. ಉಪಕುಲಪತಿಗಳಿಂದ ಹಿಡಿದು ಕೆಳಗಿನವರೆಗೆ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನೇನು ನಡೆದಿದೆ ಎನ್ನುವುದನ್ನು ಒಂದು ಕಡೆಯವರು ನನಗೆ ತಂದು ಕೊಟ್ಟಿದ್ದಾರೆ. ಇದರಲ್ಲಿ ಕೆಲವು ಸುಳ್ಳು ಇರಬಹುದು. ಕೆಲವು ನಿಜ ಇರಬಹುದು. ಇದರಲ್ಲಿ ಯಾವುದು ಸುಳ್ಳು, ಯಾವುದು ಸತ್ಯ ಎನ್ನುವ ತೀರ್ಮಾನಕ್ಕೆ ನಾವು ಬರುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಾನು ಒಳ್ಳೆಯದನ್ನು ನಿರೀಕ್ಷಣೆ ಮಾಡುತ್ತಿದ್ದೆ. ಪರಂಪರೆಯಿಂದ ವಿಚಾರ ಮಾಡಿದರೆ ಒಳ್ಳೆಯ ವ್ಯಕ್ತಿಗಳು ಅಲ್ಲಿ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಅನೇಕ ಅಗ್ರಲೇಖನಗಳನ್ನು ಪತ್ರಿಕೆಗಳವರು ಬರೆದಿದ್ದಾರೆ. ಇದರಲ್ಲಿ ಯಾರದು ತಪ್ಪು, ಯಾರದ್ದು ಸರಿ ಎಂದು ನಾನು ಹೇಳುವುದಿಲ್ಲ. ಅಲ್ಲಿ ನಡೆಯುತ್ತಾ ಇರತಕ್ಕ ವಿಷಯಗಳು ಹೊರಗಡೆ ಬಂದಿವೆ. ಅದನ್ನು ವಿಚಾರಣೆ ಮಾಡಬೇಕು, ಮತ್ತು ಬಗೆಹರಿಸಬೇಕು. ಯಾರೇ ಅದನ್ನು ವಿಚಾರಣೆ ಮಾಡಿದರೂ ಕೂಡ ಜಾತಿಯ ಜಾಲದಲ್ಲಿ ಯಾರು ಸಿಕ್ಕುತ್ತಾರೆ, ಏನು ಸಿಕ್ಕುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಮಾಡಿಸಬೇಕು.

ಇದಕ್ಕೆ ಬಂದಂಥ ಕಳಂಕವನ್ನು ತೊಳೆಯುವುದಕ್ಕೆ ಪ್ರಯತ್ನಪಡಬೇಕು. ಇಲ್ಲದೇ ಹೋದರೆ ಇಲ್ಲಿಯವರೆಗೂ ಏನಾಗಿದೆಯೆಂದರೆ, ವಿದ್ಯಾರ್ಥಿಗಳಲ್ಲಿ ಬಲವಾದ ಎರಡು ವರ್ಗಗಳಾಗಿವೆ. ಒಂದು ಜಾತಿಯ ವಿದ್ಯಾರ್ಥಿಗಳು ಇನ್ನೊಂದು ಜಾತಿಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡುವುದಕ್ಕೆ ಪ್ರಯತ್ನಮಾಡಿದ್ದಾರೆ. ಹಲ್ಲೆ ಮಾಡಿಯೂ ಇದ್ದಾರೆ. ಇದಕ್ಕೆ ಸಾಕ್ಷಿ ಮೈಸೂರಿನಲ್ಲಿ ನಡೆದ ಚುನಾವಣೆಯೇ ಸಾಕು. ಇವತ್ತು ಅಲ್ಲಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಹೋಗಿದೆಯೆಂದರೆ ಅಲ್ಲಿ ಒಂದು ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಒಬ್ಬರನ್ನು ನೋಡಿ ಇನ್ನೊಬ್ಬರು ಯಾವ ರೀತಿಯಲ್ಲಿ ಮೇಲೆ ಬೀಳುತ್ತಾರೆಂಬ ವಾತಾವರಣ ನಿರ್ಮಾಣವಾಗುತ್ತಿದೆ. ಕೆಲವರು ಅಲ್ಲಿ ನಾರದರ ಕೆಲಸವನ್ನು ಮಾಡುತ್ತಿದ್ದಾರೆ. ಆ ನಾರದರು ಯಾರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂತಹ ಕಹಿ ವಾತಾವರಣ ನಿರ್ಮಾಣವಾಗಿದೆ. ಉದಾಹರಣೆಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಸಿಂಡಿಕೇಟಿನವರು ಕಡಿಮೆ ಪ್ರಮಾಣದ ಅಂಕಗಳನ್ನು ತೆಗೆದುಕೊಂಡರೆ ಸ್ನಾತಕೋತ್ತರಕ್ಕೆ ಪ್ರವೇಶವಿಲ್ಲ ಮತ್ತು ಸೇಕಡ ೬೦ರ ಮೇಲೆ ನಂಬರ್ ಬಂದಿರಬೇಕೆಂದು ಹೇಳುತ್ತಾರೆ. ಆದರೂ ೬೦ಕ್ಕಿಂತ ಕಡಿಮೆ ನಂಬರ್ ಬಂದಿರುವವರಿಗೆ ಅಲ್ಲಿ ಅವಕಾಶ ಕೊಟ್ಟಿದ್ದಾರೆ. ನಾನೂ ಕೂಡ ನಮ್ಮ ಊರಿನೊಳಗೆ ಅಪರೂಪಕ್ಕೆ ಸೇಕಡ ೬೦ರಷ್ಟು ಅಂಕಗಳನ್ನು ಪಡೆದಿದ್ದವನಿಗೆ ಒಂದು ಲೆಟರನ್ನು ಕೊಟ್ಟಿದ್ದೆ. ಆದರಿಂದ ಏನೂ ಪ್ರಯೋಜನವಾಗಲಿಲ್ಲ. ಎಂ.ಎಸ್‌ಸಿ ಕೊಡಬೇಕೆಂದು ಕೇಳಿದ್ದಕ್ಕೆ ಹಾಗೂ ಆಗಿಲ್ಲ. ಒಂದು ವೇಳೆ ಕಡಿಮೆ ಅಂಕ ಪಡೆದವರಿಗೆ ಎಲ್ಲರಿಗೂ ಅಲ್ಲಿ ಸೀಟು ಕೊಟ್ಟಿದ್ದರೆ ಇದು ಆಕ್ಷೇಪಣೆ ಬರುತ್ತಿರಲಿಲ್ಲ. ಆದರೆ ಹಾಗೆ ಆಗಿಲ್ಲ. ಆದ್ದರಿಂದ ಅಲ್ಲಿ ಬಹಳವಾಗಿ ಅನ್ಯಾಯ ನಡೆದಿದೆ ಎನ್ನುವ ಆಪಾದನೆ ಇದೆ. ಜೊತೆಗೆ ಅಲ್ಲಿ ಉಪನ್ಯಾಸಕರನ್ನು ನೇಮಕಮಾಡುವ ಕಾಲದಲ್ಲಿ ಮತ್ತು ಅವರಿಗೆ ಬಡ್ತಿ ನೀಡುವ ಕಾಲದಲ್ಲಿ ತಾರತಮ್ಯ, ಪಕ್ಷಪಾತ ನಡೆದಿದೆಯೆಂಬ ಮೂಲಭೂತ ಆಪಾದನೆ ಇದೆ. ಜೊತೆಗೆ ಅಲ್ಲಿ ಪೊಲಟಿಕಲ್ ಸೈನ್ಸ್‌ನಲ್ಲಿ ಫಿಲಾಸಫಿ ಮತ್ತು ಇಂಡಾಲಜಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಸೇಕಡ ೪೦ರಷ್ಟು ಅಟೆಂಡೆನ್ಸ್ ಇದ್ದರೂ ಅಲ್ಲಿ ೭೫ರಷ್ಟು ಅಟೆಂಡೆನ್ಸ್ ಇದೆಯೆಂದು ಹೇಳಿ ಕಡಿಮೆ ಅಟೆಂಡೆನ್ಸ್ ಬಂದಿದ್ದರೂ ಅವನನ್ನು ಪರೀಕ್ಷೆಗೆ ಕುಳ್ಳಿರಿಸಿ ಪಾಸ್‌ಮಾಡಿಸಿದ್ದಾರೆ. ಅದಕ್ಕೆ ಕೆಲವು ಕಾರಣಗಳು ಇರಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಅವನು ಎಲ್ಲೋ ಹರಿಜನ ಆಗಿರಬೇಕು.

ಶ್ರೀ ಎಂ. ಮಲ್ಲಿಕಾರ್ಜುನಯ್ಯ.—ಎರಡು ಸಬ್ಜೆಕ್ಟ್‌ಗಳಿಗೂ ಒಬ್ಬ ಹುಡುಗ ಏಕೆ ಸೇರುತ್ತಾನೆ ?

ಶ್ರೀ ಕಾಗೋಡು ತಿಮ್ಮಪ್ಪ.—ಅವನು ಸೇರಿರುವುದು ಫಿಲಾಸಫಿ ಸಬ್ಜೆಕ್ಟ್‌ಗೆ ಇರಬಹುದು. ಇನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡುವ ಒಬ್ಬ ಲೈಬ್ರರಿಯನ್ ಶ್ರೀ ಶಿವಲಿಂಗಯ್ಯ ಎಂಬುವರು ವಾರ್ಡನ್ನಾಗಿ ಕೆಲಸಮಾಡುತ್ತಿದ್ದಾರೆ. ಅಲ್ಲಿ ಅವರಿಬ್ಬರ ಮೇಲೂ ಕ್ರಿಮಿನಲ್ ಕೇಸುಗಳಿವೆ. ಸಾಮಾನ್ಯವಾಗಿ ಒಬ್ಬ ಸರ್ಕಾರಿ ನೌಕರನ ಮೇಲೆ ಕೇಸ್ ಹಾಕಿದರೆ ಅವನನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಆ ಕೇಸ್ ತೀರ್ಮಾನವಾಗುವವರೆಗೂ ಅವನನ್ನು ಕೆಲಸದ ಮೇಲೆ ಇಟ್ಟುಕೊಳ್ಳುವುದೇ ಇಲ್ಲ. ಆದರೆ ವಿಶ್ವವಿದ್ಯಾನಿಲಯದ ಮೇಲೆ ಪೋಲೀಸಿನವರು ಕೇಸ್ ಹಾಕಿದರೂ ಕೂಡ ಅಲ್ಲಿ ಅವರನ್ನು ಕೆಲಸದ ಮೇಲೆ ಇಟ್ಟುಕೊಂಡೇ ಇರುತ್ತಾರೆ. ಆದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅವನನ್ನು ಸಸ್ಪೆನ್‌ಷನ್ನಿನಲ್ಲಿ ಇಡಬಹುದಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೇವಲ ಅಲಿಗೇಷನ್ ಮೇಲೆ ಹೇಗೆ ಆ ರೀತಿ ಮಾಡುವುದಕ್ಕೆ ಆಗುತ್ತದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸಿನವರು ಚಾರ್ಜ್‌ಷೀಟ್ ಹಾಕಿದ ಕೂಡಲೇ ಅಲ್ಲಿ ವಿಚಾರಣೆ ನಡೆಯುವುದಕ್ಕೆ ಅನುಕೂಲವಾಗ, ಆ ಒಂದು ಕಾರಣದಿಂದ ಅವರನ್ನು ಕೆಲಸದಿಂದ ಅನಾಮತ್ತಿನಲ್ಲಿ

ಇಡಬಹುದಾಗಿತ್ತು, ಆದರೆ ಇಲ್ಲಿ ಆ ರೀತಿಯಾಗಿ ಇಡಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಬಗೆ ನಾನು ಸಂಪೂರ್ಣ ವಿವರಗಳನ್ನು ಹೇಳುವುದಿಲ್ಲ. ಅದರ ಬಗ್ಗೆ ಎಲ್ಲ ಅಂಶಗಳನ್ನೂ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ಯಾವುದು ಸರಿ, ಯಾವುದು ಸರಿಯಲ್ಲ ಎಂಬ ಬಗ್ಗೆ ವಿಚಾರಮಾಡಲು ನನ್ನಲ್ಲಿ ಸಾಧನಗಳಿಲ್ಲ. ಅದು ನಿಮ್ಮಲ್ಲಿ ಇದೆ. ನಿಜವಾಗಿಯೂ ಸರ್ಕಾರದವರು ಇದಕ್ಕೆ ಸರಿಯಾದ ಪರಿಹಾರವನ್ನು ಕಂಡುಹಿಡಿಯಬೇಕು. ಒಬ್ಬ ಶ್ರೀ ರಾಮಲಿಂಗಂ ಪ್ರಕರಣ, ಅದರಲ್ಲಿ ಮಾನಸಿಕ ಗಂಗೋತ್ರಿಯ ವಿದ್ಯಾರ್ಥಿ, ವಿದ್ಯಾರ್ಥಿಗಳಲ್ಲಿ ಎರಡು ವರ್ಗಗಳಾಗಿ ಕೆಲವು ಸಂದರ್ಭಗಳಲ್ಲಿ ಚೂರಿ ಹಾಕಿದ್ದಾರೆ. ಮಾರಾಮಾರಿ ಮಾಡುವ ಪ್ರಸಂಗಕ್ಕೆ ಬಂದಿದೆ. ಯಾರು ಇಂತಹ ಒಂದು ಅಪಾದನೆಯ ಬಗ್ಗೆ ದೂರು ಮಾಡುತ್ತಾರೋ ಅವರ ಮೇಲೆಯೇ ವಿಚಾರಣೆ ಮಾಡುವುದಕ್ಕೆ ಇವತ್ತು ಚಾನ್ಸಲರ್ ಆಫೀಸಿನಿಂದಲೇ ಆಜ್ಞೆ ಹೊರಟಿದೆ. ಅಪಾದನೆ ಕೊಟ್ಟವರ ಮೇಲೆ ವಿಚಾರಣೆ ಮಾಡುವುದಕ್ಕೆ ಆರ್ಡರ್ ಆಗಿದೆ. ಇಂತಹ ಅನ್ಯಾಯಗಳು ಅಲ್ಲಿ ಆಗಿದೆ. ಆದುದರಿಂದ ಮಾನ್ಯ ಶ್ರೀ ರಾಮಲಿಂಗಂ ಅವರು ಅಲ್ಲಿ ಏನೇನು ಮಾಡಿದ್ದಾರೋ ಅದನ್ನು ನಕ್ಸಲೈಟ್ ಎಂದು ಹೇಳುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಈ ತರಹ ಜಾತೀಯ ದ್ವೇಷ ಅಂತಃಕರಣಗಳು ಬೆಳೆಯುವುದಕ್ಕೆ ನಾವು ಅಲ್ಲಿ ಅವಕಾಶ ಕೊಡಬಾರದು. ಆ ರೀತಿಯಾಗಿ ಕೊಡುವುದಾದರೆ ಅವರು ಈ ಇಲಾಖೆಗೆ ಯಾವುದನ್ನೂ ವಹಿಸಿಕೊಡುವುದಕ್ಕೆ ಸಾಮರ್ಥ್ಯತೆ ಇಟ್ಟುಕೊಳ್ಳುವ ಹಾಗೆ ಇಲ್ಲ. ನಾಡಿನ ಭವಿಷ್ಯದ ದೃಷ್ಟಿಯಿಂದ ಈ ವಿಶ್ವವಿದ್ಯಾನಿಲಯದಲ್ಲಿ ಬಂದಂಥ ಕಳಂಕವನ್ನು ತೊಡೆದುಹಾಕುವುದಕೆ ಒಬ್ಬ ನ್ಯಾಯಾಧೀಶರ ಮುಖಾಂತರ ತನಿಖೆ ನಡೆಸಿ ಕೂಡಲೇ ಇದರಲ್ಲಿ ಬಂದಿರತಕ್ಕ ಕಳಂಕವನ್ನು ತೊಡೆದುಹಾಕಬೇಕು. ಆಗ ನಿಮಗೆ ಇದರಿಂದ ಯಾವ ಅಡ್ಡಿ ಆತಂಕಗಳೂ ಬರುವುದಿಲ್ಲ. ನಿಮ್ಮ ಕಾಲದಲ್ಲಿ ಇಂತಹ ಕೊಳೆಯನ್ನು ತೊಳೆಯು ವುದಕ್ಕೆ ಅವಕಾಶಮಾಡಿಕೊಡಬೇಕು. ಈಗ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿಯೂ ಸಹ ಉಪಕುಲಪತಿಗಳನ್ನು ನೇಮಿಸಿದ್ದಾರೆ. ಅಲ್ಲಿನ ಪದ್ಧತಿಯನ್ನು ತೆಗೆದುಹಾಕುವ ಬಗ್ಗೆ ಈಗ ಮಂತ್ರಿಗಳು ಏನೂ ಹೇಳುವುದಿಲ್ಲ. ಇದರ ಆಡಳಿತ ಇನ್ನೂ ಕೆಲವು ಜನರ ಕೈಲಿದೆ. ಅಲ್ಲಿ ಎಲ್ಲರಿಗೂ ಒಳ್ಳೆಯದು ಆಗಲಿ ಎಂದು ಹೇಳುವಾಗ ನಿಮಗೆ ಒಂದ ನೀತಿ ಬೇಕು. ಹೊಸದಾಗಿ ವಿದ್ಯಾಸುಧಾರಣೆ ಮಾಡಬೇಕೆಂದು ಹೇಳುವಾಗ ಸಮಾಜದಲ್ಲಿ ಜಾತೀಯ ಹಿನ್ನೆಲೆಯಿಂದ ಯಾವುದೇ ಹಂತದಲ್ಲಿ ತೊಂದರೆಗಳು ಬರುವುದು, ಅಂತಹುಗಳನ್ನು ತೊಡೆದು ಹಾಕುವುದಕ್ಕೆ ಒಂದು ಶಾಶ್ವತವಾದಂಥ ಪರಿಹಾರವನ್ನು ಮಾಡಬೇಕು. ಅಲ್ಲಿ ಯಾರೇ ಇರಲಿ ಅವರ ಬಗ್ಗೆ ದಿಟ್ಟ ಕ್ರಮವನ್ನು ತೆಗೆದುಕೊಳ್ಳಬೇಕು. ಈ ದೃಷ್ಟಿಯಿಂದ ವಿದ್ಯಾ ಇಲಾಖೆಯ ಪ್ರಾಶಸ್ತ್ಯವನ್ನು ಕಾಪಾಡುವುದಕ್ಕೆ ವಿದ್ಯಾಭ್ಯಾಸ ಕ್ಷೇತ್ರ ಏನಿದೆಯೋ ಅದರಲ್ಲಿನ ಗುಣಮಟ್ಟ ಹಾಗೂ ಅದರ ತಳಹದಿಯನ್ನು ಬೆಳಸಬೇಕು, ಅದರ ಬಗ್ಗೆ ಮೂಲಭೂತವಾಗಿ ವಿಚಾರಮಾಡಬೇಕು. ಸುಮ್ಮನೆ ಹಾಡಿದ್ದೇ ಹಾಡೋ ಕಿಸಬಾಯ್ದಾಸ ಎಂದಾಗಬಾರದು ಅಥವಾ ಮಾಡಿದ್ದೇ ಮಾಡೋ ಕಿಸಬಾಯ್ದಾಸಾ ಎಂದೂ ಆಗಬಾರದು. ಅದಕ್ಕಾಗಿ ಸರ್ಕಾರದವರು ವಿದ್ಯಾಭ್ಯಾಸದ ಒಂದು ಗುಣಮಟ್ಟವನ್ನು ಕಾಪಾಡಲು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು, ಅದಕ್ಕಾಗಿ ಸರ್ವ ಪ್ರಯತ್ನವನ್ನು ಮಾಡಬೇಕಾಗಿದೆ. ಆದರೆ ಇವರು ಹೇಳುವುದು ಒಂದು, ಪ್ರಯತ್ನಮಾಡುವುದು ಬೇರೆ ಇದು ಆಗಬಾರದು. ನಿಮಗೆ ಅವಕಾಶ ಸಿಕ್ಕಿದಾಗ ಒಂದು ಹೊಸ ವ್ಯವಸ್ಥೆಯನ್ನು ಪ್ರಾರಂಭಮಾಡುವುದಕ್ಕೆ ಒಂದು ಬುನಾದಿಯನ್ನು ಹಾಕಿ ಅದಕ್ಕೆ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಿದರೆ, ಆಗ ಅದು ತಾನೇತಾನಾಗಿ ಮುಂದೆ ಈ ಸರ್ಕಾರದಲ್ಲಿ ಯಾರೇ ಆಡಳಿತಕ್ಕೆ ಬಂದರೂ ಅವರು ಈ ಕರ್ನಾಟಕ ರಾಜ್ಯದಲ್ಲಿರತಕ್ಕ ವಿದ್ಯಾ ಇಲಾಖೆಯನ್ನು ಶುದ್ಧೀಕರಣ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

MR. DEPUTY SPEAKER.—The discussion on this Demand will be resumed to-morrow. The House will now adjourn and meet to-morrow at One P. M.

The House adjourned at Twenty Minutes past Six of the Clock to meet again at One of the Clock on Tuesday the 9th April 1974.